Editor: **NITYANANDASWAMI** Publisher: **U. BASAVARAJA** RNI No. KARKAN/2006/17926

ಜನಶಕ್ತಿ ಕನ್ನಡ ವಾರ ಪತ್ರಿಕೆ

JANASHAKTHI KANNADA VARA PATRIKE

ದುಡಿಯುವ ಜನರ ಪ್ರಾಣಮಿತ್ರ

ಸಂಪುಟ–18 | ಸಂಚಿಕೆ–32 | ಆಗಸ್ಟ್ 5–11, 2024 | ಪುಟ 16 | ರೂ.10/–
Volume-18 | Issue-32 | August 5-11, 2024 | Pages:16 | Price: 10/-



ಜನರ ಜೀವ ಜೀವನ ಕಸಿದ ಮಳೆ



ರಾಜ್ಯಪಾಲರ ದುರ್ಬಳಕೆಗೆ ಅಂಕೆ ಇಲ್ಲವೇ?

- ಜನಗಣತಿ ನಡೆಸಲು ಹಿಂಜರಿತವೇಕೆ?
- ದೋಸ್ತಿಗಳ ಪಾದಯಾತ್ರೆ: ಮುಚ್ಚಿಟ್ಟಿರುವ ಅಜೆಂಡಾಗಳು
- ರೈಲುಗಳನ್ನು 'ಹಳಿ ತಪ್ಪಿಸಿದ' ಕೇಂದ್ರ ಬಜೆಟ್

ನಿರಂಜನ ಮರು ಓದು ಆರಂಭವಾಗಿದೆ



ಕನ್ನಡ ಪ್ರಗತಿಶೀಲ ಸಾಹಿತ್ಯ ಚಳವಳಿಯ ಪ್ರಮುಖ ಲೇಖಕರಲ್ಲಿ ಒಬ್ಬರಾದ ನಿರಂಜನ ಅವರ ಶತಮಾನದ ವರ್ಷವಿದು (1924–1992). ಈ ಹೊತ್ತಿನಲ್ಲಿ ನಿರಂಜನರನ್ನು ನೆಪಿಸಿಕೊಳ್ಳುತ್ತ ಕನ್ನಡ ಸಾಹಿತ್ಯ ಮತ್ತು ಪ್ರಗತಿಪರ ಲೋಕಕ್ಕೆ ಅವರ ಕೊಡುಗೆಯನ್ನು ದಾಖಲಿಸುವ ಮತ್ತು ಅದೆಂದಿಗೂ ಸಾಂಸ್ಕೃತಿಕ ಲೋಕದಲ್ಲಿ ಚಿರಸ್ಥಾಯಿಯಾಗಿ ಉಳಿಯುವಂತೆ ಮಾಡುವುದು ಕನ್ನಡದ ಸಾರಸ್ವತ ಲೋಕ ಮಾಡಬೇಕಾದ ಕೆಲಸ.

ಈ ದಿಸೆಯಲ್ಲಿ ಪ್ರಗತಿಪರ ಕನ್ನಡ ಪುಸ್ತಕಗಳನ್ನು ಪ್ರಕಟಿಸಿ, ಓದುವ ಚಳವಳಿಯ ಜೋಳಿಗೆಗೆ ಒಂದು ಹಿಡಿ ಧಾನ್ಯವನ್ನು ಹಾಕುತ್ತಿರುವ ಕ್ರಿಯಾ ಮಾಧ್ಯಮ ವರ್ಷವಿಡೀ ನಿರಂಜನ ಮರು ಓದು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಯೋಜನೆಯೊಂದನ್ನು ರೂಪಿಸಿದೆ. ಅದರ ಭಾಗವಾಗಿ ಪುಸ್ತಕಗಳ ಬಿಡುಗಡೆ, ಅವರ ಸಾಹಿತ್ಯದ ಓದು, ಮುಂತಾದ ಹಲವು ಕಾರ್ಯಕ್ರಮಗಳನ್ನು ರೂಪಿಸುತ್ತಿದೆ. ಆ ನಿಟ್ಟಿನಲ್ಲಿ 27 ಜುಲೈ 2024 ರಂದು ಬೆಂಗಳೂರಿನ ಕನ್ನಡ ಸಾಹಿತ್ಯ ಪರಿಷತ್ತಿನ ಕುವೆಂಪು ಸಭಾಂಗಣದಲ್ಲಿ ಕಾರ್ಯಕ್ರಮ ನಡೆದಿದೆ. ಅಂದು, ಕನ್ನಡದ ಹೆಸರಾಂತ ಪ್ರಕಾಶನ ಐ.ಬಿ.ಎಚ್. ಸಹಯೋಗದಲ್ಲಿ ಅವರು ಪ್ರಕಟಿಸಿದ ನಿರಂಜನರ ಧ್ವನಿ–1 ಮತ್ತು 2 ಸಮಗ್ರ ಕಥಾ ಸಮುಚ್ಚಯ ಮತ್ತು ಕನಸು ಮೂರು ಕಾದಂಬರಿಗಳ ಸಂಗ್ರಹ, ಹಾಗೂ ಕ್ರಿಯಾ ಮಾಧ್ಯಮ ಪ್ರಕಟಿಸಿದ ಡಾ.ಎಂ.ಜಿ.ಹೆಗಡೆಯವರು ನಿರಂಜನರ ಮೃತ್ಯುಂಜಯ ಮತ್ತು ಚಿರಸ್ಮರಣೆ ಕಾದಂಬರಿಗಳನ್ನಾಧರಿಸಿ ರಚಿಸಿದ ಮೃತ್ಯುಂಜಯ ನಾಟಕ ಪುಸ್ತಕಗಳ ಬಿಡುಗಡೆಯಾಯಿತು. ತೇಜಸ್ವಿನಿ ನಿರಂಜನ ಪುಸ್ತಕಗಳ ಬಿಡುಗಡೆ ಮಾಡಿದರು.

ನಿರಂಜನ ಮರುಓದು ಮಾತುಕತೆಯಲ್ಲಿ ಡಾ.ಬಿ.ಆರ್.ಮಂಜುನಾಥ 'ನಿರಂಜನರ ಕಥಾ ಜಗತ್ತು', ಚ.ಹ.ರಘುನಾಥ 'ನಿರಂಜನರ ಕಾದಂಬರಿಗಳು', ಬಿ. ಸುರೇಶ 'ದೃಶ್ಯ ಮಾಧ್ಯಮಗಳಲ್ಲಿ ನಿರಂಜನರ ಕತೆ ಕಾದಂಬರಿಗಳು', ಕುರಿತು ಮಾತನಾಡಿದರು.


ಜೊತೆಗೆ ನಿರಂಜನರ ಕುರಿತು ಸಾಕ್ಷ್ಯಚಿತ್ರ ಪ್ರದರ್ಶನ, ಮೃತ್ಯುಂಜಯ ನಾಟಕಗಳ ಹಾಡುಗಳಿದ್ದವು.

ಸೃಜನಶೀಲ ಬರಹಗಾರ, ಸಾಹಿತ್ಯ ಚಳುವಳಿಕಾರ,...

ಸೃಜನಶೀಲ ಬರಹಗಾರ, ಸಾಹಿತ್ಯ ಚಳುವಳಿಕಾರ, ವಿಮರ್ಶಕ, ಪತ್ರಕರ್ತ, ಚಿಂತಕ, ಸಾಮಾಜಿಕ ರಾಜಕೀಯ ಕಾರ್ಯಕರ್ತ–ನಾಯಕ, ಮಕ್ಕಳ ವಿಶ್ವಕೋಶ', ವಿಶ್ವ ಕಥಾಕೋಶ ದಂತಹ ಮಹಾ ಕನಸು ಕಂಡು ಅವನ್ನು ನನಸು ಮಾಡಬಲ್ಲ ಧೀಮಂತ... ಹೀಗೆ ಹಲವು ಆಯಾಮಗಳನ್ನು ನಿರಂಜನ ಹೊಂದಿದ್ದರು. ನಿರಂಜನರು ಸ್ವತಃ ಬರೆದಿರುವ ಮತ್ತು ಸಂಪಾದಿಸಿರುವ ಹಾಗೂ ಅನುವಾದಿಸಿರುವ ಕೃತಿಗಳ ಒಟ್ಟು ಸಂಖ್ಯೆ 88ಕ್ಕೂ ಹೆಚ್ಚು. ಅವುಗಳಲ್ಲಿ ಸ್ವತಂತ್ರ ಕೃತಿಗಳೇ 50ಕ್ಕೂ ಮೀರಿವೆ. ಅವುಗಳಲ್ಲಿ ಪ್ರಸಿದ್ಧ ಕತೆ 'ಕೊನೆಯ ಗಿರಾಕಿ'ಯೂ ಸೇರಿದಂತೆ ಕಥಾ ಸಂಗ್ರಹಗಳು (9) ಕಾದಂಬರಿಗಳು (25) ಅಂಕಣ ಬರಹಗಳು (7) ನಾಟಕ (3) ಹಾಗೂ ಪ್ರಬಂಧಗಳು ಇತ್ಯಾದಿ. ಅವರು ಸಂಪಾದಕರಾಗಿ ಹೊರ ತಂದಿರುವ ಕಿರಿಯ ವಿಶ್ವ ಕೋಶವಾದ 'ಜ್ಞಾನಗಂಗೋತ್ರಿ'ಯ 7 ಸಂಪುಟಗಳು, ವಿಶ್ವಕಥಾ ಕೋಶದ 25 ಸಂಪುಟಗಳಲ್ಲದೆ, 10 ಭಾಷಾಂತರ ಕೃತಿಗಳು– ಅವರಿಗೆ ಕನ್ನಡ ಸಾಹಿತ್ಯದಲ್ಲಿ ಅನನ್ಯವಾದ ಸ್ಥಾನ ನೀಡಿವೆ.


ಕಡು ಬಡತನದಲ್ಲಿ ನಿರಂಜನ ಅವರ ತಾಯಿ ಏಕಾಂಗಿಯಾಗಿ ತಮ್ಮ ಏಕಮಾತ್ರ ಮಗನನ್ನು ಬೆಳೆಸಿದರು. ತಮ್ಮ ಬಾಲ್ಯದಲ್ಲಿ ಶಿವರಾಮ ಕಾರಂತರ ಮಕ್ಕಳ ಕೂಟಗಳಲ್ಲಿ ಭಾಗಿಯಾಗಿದ್ದ ಮತ್ತು ಸ್ವಾತಂತ್ರ್ಯ ಚಳುವಳಿಯತ್ತ ಆಕರ್ಷಿತರಾದ ಅವರು 'ಕಿಶೋರ' ಮೊದಲಾದ ಕಾವ್ಯನಾಮಗಳಿಂದ ಕತೆ, ಲೇಖನಗಳನ್ನು ಬರೆಯುತ್ತಿದ್ದರು. ಹತ್ತನೇ ತರಗತಿಗೆ ವಿದ್ಯಾಭ್ಯಾಸ ನಿಲ್ಲಿಸಿ ಮಂಗಳೂರಿನಲ್ಲಿ ಕಡೆಂಗೋಡ್ಲು ಶಂಕರಭಟ್ಟರ 'ರಾಷ್ಟ್ರಬಂಧು' ಪತ್ರಿಕೆಯಲ್ಲಿ ಉದ್ಯೋಗಿಯಾಗಿ ಸೇರಿದರು. ಮುಂದೆ ಅವರು ಬೆಂಗಳೂರಿನಲ್ಲಿ ಪತ್ರಿಕೋದ್ಯಮಿಯಾಗಿ ಕೆಲಸ ಮಾಡಿದರು. ಪತ್ರಕರ್ತರಾಗಿ ಕಯ್ಯೂರು ಹೋರಾಟದ ನಾಯಕರ ವಿರುದ್ಧ ಮೊಕದ್ದಮೆ ಬಗ್ಗೆ ವರದಿ ಮಾಡುತ್ತಾ ಕಮ್ಯುನಿಸ್ಟ್ ಚಳುವಳಿಯತ್ತ ಆಕರ್ಷಿತರಾದರು. ಎಡಪಂಥೀಯ ನಿಲುವಿನ ಕುಳಕುಂದ ಶಿವರಾಯರು ತೆಲಂಗಾಣ ಚಳವಳಿ ಬಗ್ಗೆ ಬರೆಯಲು ಆ ಸಂದರ್ಭದಲ್ಲಿ ಬಳಸಿದ ಗುಪ್ತನಾಮ 'ನಿರಂಜನ' ಮುಂದಿನ ಅವರ ಸಾಹಿತ್ಯ ಬರಹಗಳ ಕಾವ್ಯನಾಮವಾಗಿ ಪರಿವರ್ತಿತವಾಯಿತು.

ಇಷ್ಟು ಕೊಡುಗೆಯನ್ನು ನೀಡಿದ ಸಾಹಿತಿಯೊಬ್ಬರ ಬರಹಗಳು ಇಂದಿನ ಹೊಸ ಪೀಳಿಗೆಯ ಎಷ್ಟು ಜನ ಓದುಗರಿಗೆ ತಿಳಿದಿದೆ? ಹಾಗಾಗಿ ನಿರಂಜನರ ಕೃತಿಗಳ ಮರು ಓದು ಹಾಗೂ ನಿರಂಜನ ನೆನಪು ಇಂದಿನ ಅಗತ್ಯವಾಗಿದೆ.




ನಿರಂಜನರ ಬರಹಗಳನ್ನು ಅದರಲ್ಲೂ ಮುಖ್ಯವಾಗಿ ಕಾದಂಬರಿಗಳನ್ನು ಗಮನಿಸಿದಾಗ ಅವರ ಜನಪರ ದೃಷ್ಟಿ ಸ್ಪಷ್ಟವಾಗಿ ಗೋಚರಿಸುವುದು ಸ್ಪಷ್ಟವೇ ಇದೆ. ಆದರೆ ಅವರ ಬರವಣಿಗೆಯಲ್ಲಿ ಹೊಸ ಸಮಾಜವನ್ನು ಕಟ್ಟುವ ಅವರ ಆದರ್ಶ ಕೇವಲ ಕನಸುಗಾರಿಕೆ ಅಲ್ಲ. ಬರವಣಿಗೆಯ ಚಿತ್ರಕ ಶಕ್ತಿಯ ವಿವರ ಹಾಗೂ ರೂಪಕ ಶಕ್ತಿಯ ವೈವಿಧ್ಯಗಳಿಂದ ನಿರಂಜನರ ಸಾಹಿತ್ಯ ಅವರ ಸಾಹಿತ್ಯಿಕ ಆಶಯವನ್ನು ವಾಸ್ತವದ ವಿವರವಾಗಿ ಕಟ್ಟುತ್ತದೆ. ಇದೊಂದು ರೀತಿಯಲ್ಲಿ ಕಲ್ಪಿತ ವಾಸ್ತವ ರೀತಿಯ ಸೃಷ್ಟಿಯೂ ಹೌದಾದರೂ ನಿರಂಜನರು ಆಶಯದ ಅಭಿವ್ಯಕ್ತಿಯನ್ನು ವಾಸ್ತವದ ಚಿತ್ರಕ ವಿವರಗಳಲ್ಲಿ ನೀಡುತ್ತಾರೆ.

ಕನ್ನಡ ನಾಡಿನಲ್ಲಿ 1943ರ ಡಿಸೆಂಬರ್‌ನಲ್ಲಿ ಪ್ರಗತಿಶೀಲ ಲೇಖಕರ ಸಂಘ ಅಸ್ತಿತ್ವಕ್ಕೆ ಬಂದಿತು. ಎಡಪಂಥೀಯ ಸ್ಪಷ್ಟ ನಿಲುವಿನ ನಿರಂಜನ ಅವರು 'ಕಲೆಗಾಗಿ ಕಲೆ' ಎಂಬ ಒಲವನ್ನು ಸಂಪೂರ್ಣ ವಿರೋಧಿಸುತ್ತಿದ್ದರು. 'ಪ್ರಗತಿಶೀಲ ಸಾಹಿತ್ಯ' ಎಂಬ ಪ್ರಬಂಧಗಳ ಸಂಕಲನಕ್ಕೆ ಮುನ್ನುಡಿಯನ್ನು ಬರೆಯುತ್ತಾ "ಪ್ರಗತಿಶೀಲ ಸಾಹಿತಿಗಳ ಗುರಿ ಕೇವಲ ಸಾಮಾಜಿಕವಾದ ಸಾಹಿತ್ಯವನ್ನು ನಿರ್ಮಾಣ ಮಾಡುವುದೇ ಅಲ್ಲ, ಸಾಹಿತ್ಯದಲ್ಲಿ ನೈಸರ್ಗಿಕತೆಯೂ ಇರಬೇಕು. ಅಜೇಯ ಶಕ್ತಿಯೂ ಇರಬೇಕು. ಅದು ನಮ್ಮ ಜನತೆಯ ಮಾರ್ಗದರ್ಶಕವಾಗಿರಬೇಕು. ತನ್ನ ಬಾಳಿನಿಂದ, ಭಾವನೆಯಿಂದ, ವಿಚಾರದಿಂದ ಈ ಉದ್ದೇಶದಿಂದ ಹೊರಗೆ ನಿಂತ ಸಾಹಿತ್ಯ ಸತ್ತ ಸಾಹಿತ್ಯ," ಎಂದು ಘೋಷಿಸಿದ್ದರು. ನಿರಂಜನ ತಮ್ಮ ತತ್ವಕ್ಕೆ ಬದ್ಧರಾಗಿಯೂ ಬದುಕಿನ ವಿವರಗಳನ್ನು ಅಗಾಧ ಜೀವ ಪ್ರೀತಿಯಿಂದ ಬರಹಗಳಲ್ಲಿ ಕಟ್ಟಿದರು.







ಸಂಪಾದಕೀಯ

ಚುನಾಯಿತ ಸರಕಾರಗಳ ವಿರುದ್ಧ ರಾಜ್ಯಪಾಲರ ಕಚೇರಿಯ ದುರ್ಬಳಕೆಗೆ ಅಂಕೆಯಿಲ್ಲವೇ?

ಮೈಸೂರು ನಗರ ಅಭಿವೃದ್ಧಿ ಪ್ರಾಧಿಕಾರ(ಮುಡಾ)ದ ನಿವೇಶನ ಹಂಚಿಕೆ ವಿಚಾರದಲ್ಲಿನ ಆರೋಪಕ್ಕೆ ಸಂಬಧಿಸಿದಂತೆ "ನಿಮ್ಮ ವಿರುದ್ದ ಕ್ರಿಮಿನಲ್ ಪ್ರಕರಣ ದಾಖಲಿಸಲು ಯಾಕೆ ಅನುಮತಿ ನೀಡಬಾರದು?" ಎಂದು ಕೇಳಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ರಾಜ್ಯದ ರಾಜ್ಯಪಾಲ ಥಾವರ ಚಂದ್ ಗೆಹಲೋಟ್ ಅವರು ಕಾರಣ ಕೇಳಿ(ಶೋಕಾಸ್) ನೋಟಿಸ್ ನೀಡುವುದರೊಂದಿಗೆ ಕರ್ನಾಟಕ ರಾಜ್ಯದ ರಾಜಕಾರಣ ಒಂದು ಹೊಸ ಘಟ್ಟವನ್ನು ಪ್ರವೇಶಿಸಿದೆ.

ಸಿದ್ದರಾಮಯ್ಯನವರ ಪತ್ನಿ ಪಾರ್ವತಿಯವರಿಗೆ ಅವರ ತವರು ಮನೆಯಿಂದ ದಾನರೂಪದಲ್ಲಿ ಬಂದ ಜಮೀನನ್ನು ಮುಡಾ ವಶಪಡಿಸಿಕೊಂಡಿದ್ದು, ಅದಕ್ಕೆ ಶೇ. 50 ರ ಅನುಪಾತದಲ್ಲಿ ಪಾರ್ವತಿಯವರಿಗೆ ಬದಲಿ ನಿವೇಶನಗಳನ್ನು ಬೇರೊಂದು ಕಡೆ ಹಂಚಿಕೆ ಮಾಡಿದ್ದು, ಈ ಪ್ರಕರಣದಲ್ಲಿ ಅಕ್ರಮ, ಭ್ರಷ್ಟಾಚಾರ ನಡೆದಿದೆ ಎಂದು ವಿರೋಧ ಪಕ್ಷಗಳಾದ ಬಿಜೆಪಿ ಮತ್ತು ಜೆಡಿ(ಎಸ್) ಪಕ್ಷಗಳು ಆರೋಪಿಸಿವೆ.

ಕೆಸರೆ ಗ್ರಾಮದಲ್ಲಿನ ತನ್ನ ಒಡೆತನದ 3 ಎಕರೆ 16 ಗುಂಟೆ ಜಮೀನನ್ನು ಮುಡಾ ವಶಪಡಿಸಿಕೊಂಡಿರುವುದರಿಂದ ಪರಿಹಾರವಾಗಿ ಬದಲಿ ನಿವೇಶನ ಕೊಡಿ ಎಂದು ತಮ್ಮ ಪತ್ನಿ ಮನವಿ ಮಾಡಿದ್ದರು. ಮುಡಾ ವಶಪಡಿಸಿಕೊಂಡಿರುವುದು ಹಿಂದೆ ಪಾರ್ವತಿಯವರ ಸಹೋದರ ಕಾನೂನು ಪ್ರಕಾರವಾಗಿ ಖರೀದಿಸಿದ್ದ ಜಮೀನು. 2020 ರಲ್ಲಿ ಮುಡಾ ಕೈಗೊಂಡ ಎಲ್ಲರಿಗೂ ಅನ್ವಯವಾಗುವ ತೀರ್ಮಾನದಂತೆ ಶೇ.50 ರ ಅನುಪಾತದಲ್ಲಿ ಬದಲಿ ಜಾಗದಲ್ಲಿ 14 ನಿವೇಶನಗಳ ಹಂಚಿಕೆಯಾಗಿದೆ. ಮುಡಾ ನಿವೇಶನ ಹಂಚಿರುವುದು ರಾಜ್ಯದಲ್ಲಿ ಬಿಜೆಪಿ ಸರಕಾರ ಅಧಿಕಾರದಲ್ಲಿ ಇದ್ದಾಗ. ನಿವೇಶನ ಹಂಚಿಕೆಯ ಅನುಪಾತ, ಸ್ವರೂಪ–ವಿಧಾನಗಳ ಕುರಿತ ತೀರ್ಮಾನವನ್ನು ಕೈಗೊಂಡ ಮುಡಾ ಸಭೆಯಲ್ಲಿ ಆಗಿನ ಬಿಜೆಪಿ ಮತ್ತು ಜೆಡಿ(ಎಸ್) ಶಾಸಕರೂ ಇದ್ದು ಚರ್ಚಿಸಿ ತೀರ್ಮಾನ ಕೈಗೊಳ್ಳಲಾಗಿದೆ ಎಂದು ಸಿದ್ದರಾಮಯ್ಯನವರು ಈ ಬಗೆಗೆ ಸ್ಪಷ್ಟನೆ ನೀಡಿದ್ದಾರೆ. ಈ ಪ್ರಕ್ರಿಯೆಗಳಿಗೆ ಸಂಬಂಧಿಸಿದ ದಾಖಲೆಗಳನ್ನೂ ಬಿಡುಗಡೆ ಮಾಡಿದ್ದಾರೆ. ಇದಲ್ಲದೇ 2013 ರಿಂದ 2018 ರವರೆಗೆ ತಾವು ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ, ಸ್ವಜನಪಕ್ಷಪಾತ ನಡೆದಿದೆ ಎಂಬ ಅನುಮಾನ, ಆರೋಪಗಳಿಗೆ ಅವಕಾಶವಾಗಬಾರದು ಎಂಬ ಕಾರಣದಿಂದ ಈ ಪ್ರಕರಣದಲ್ಲಿ ಯಾವುದೇ ತೀರ್ಮಾನ ಕೈಗೊಳ್ಳಬಾರದು ಎಂದೂ ಮುಡಾಕ್ಕೆ ಹಿಂದೆ ಸೂಚನೆ ನೀಡಿದ್ದುದರ ಬಗ್ಗೆಯೂ ಸಿದ್ದರಾಮಯ್ಯನವರು ಮಾಹಿತಿಗಳನ್ನು ನೀಡಿದ್ದಾರೆ.

ಈ ಪ್ರಶ್ನೆ ಸಾರ್ವಜನಿಕವಾಗಿ ಹಾಗೂ ಸದನದಲ್ಲಿ ಚರ್ಚೆಯಾದ ಬಳಿಕ, ಮುಡಾದ ನಿವೇಶನ ಹಂಚಿಕೆಯಲ್ಲಿ 2006 ರಿಂದ ಇಲ್ಲಿಯವರೆಗೆ ನಡೆದಿರಬಹುದಾದ ಅಕ್ರಮಗಳ ಕುರಿತು ತನಿಖೆ ನಡೆಸಲು ನಿವೃತ್ತ ನ್ಯಾಯಮೂರ್ತಿ ಪಿ.ಎಸ್.ದೇಸಾಯಿಯವರ ನೇತೃತ್ವದ ಏಕಸದಸ್ಯ ಆಯೋಗ ರಚಿಸಲಾಗಿದೆ. ಎಸ್.ಐ.ಟಿ. ಅಥವಾ ಸಿಬಿಐ ಗಳ ವಿಶ್ವಾಸಾರ್ಹತೆ ಪ್ರಶ್ನಾರ್ಹವಾಗಿದ್ದುದರಿಂದ ನ್ಯಾಯಾಂಗದ ಸುಪರ್ದಿನಲ್ಲಿ ವಿಚಾರಣೆ ನಡೆಯಬೇಕು ಎಂಬ ಆಗ್ರಹವೂ ಇತ್ತು. ಹೀಗಾಗಿ ನ್ಯಾಯಾಂಗ ವಿಚಾರಣೆಗೆ ಆದೇಶಿಸಲಾಗಿದೆ, ವಿಚಾರಣೆ ನಡೆಯುತ್ತಿದೆ. ಇಷ್ಟಾದ ಬಳಿಕ ರಾಜ್ಯಪಾಲರ ಸೂಚನೆ ಅನುಸರಿಸಿ ಸರ್ಕಾರದ ಮುಖ್ಯ ಕಾರ್ಯದರ್ಶಿ, ಸ್ವತಃ ಮುಖ್ಯಮಂತ್ರಿಗಳು ರಾಜ್ಯಪಾಲರನ್ನು ಖುದ್ದಾಗಿ ಕಂಡು ಅಗತ್ಯ ದಾಖಲೆಗಳು ಮತ್ತು ವಿವರಣೆಯನ್ನು ಕೊಟ್ಟಿದ್ದಾರೆ. ಸದನದಲ್ಲಿ ಚರ್ಚೆ ಆಗಿದೆ. ಆಯೋಗ ರಚನೆಯಾಗಿದೆ. ಆದಾಗ್ಯೂ ರಾಜ್ಯಪಾಲರು "ನಿಮ್ಮ ವಿರುದ್ದ ಆರೋಪಗಳು ಗಂಭೀರವಾಗಿದ್ದು, ಮೇಲ್ನೋಟಕ್ಕೆ ನಿಜ ಎಂದು ಸಾಬೀತಾಗುತ್ತದೆ" ಎಂದು ಕಾರಣ ಕೇಳುವ ಶೋಕಾಸ್ ನೋಟೀಸ್‌ನಲ್ಲಿ ಹೇಳಿದ್ದಾರೆ. ಉತ್ತರವನ್ನು ಮತ್ತು ಉತ್ತರಕ್ಕೆ ಪೂರಕ ದಾಖಲೆಗಳನ್ನು ನೀಡಲು ಒಂದು ವಾರದ ಸಮಯಾವಕಾಶವನ್ನು ನೀಡಿದ್ದಾರೆ.

ವಾಲ್ಮೀಕಿ ಅಭಿವೃದ್ಧಿ ನಿಗಮದ ವಿರುದ್ದದ ಆರೋಪಗಳಲ್ಲಿ ಮೇಲ್ನೋಟಕ್ಕೆ ಸಾಕ್ಷ್ಯಗಳು ಸ್ಪಷ್ಟವಾಗಿ ಅಕ್ರಮ ಮತ್ತು ಭ್ರಷ್ಟಾಚಾರ ನಡೆದಿರುವುದನ್ನು ಸಾರುತ್ತವೆ. ಈ ಬಗೆಗೆ ವಿಚಾರಣೆಗಳು ನಡೆಯುತ್ತಿವೆ. ಆದರೆ ಸಿದ್ದರಾಮಯ್ಯನವರ ಪತ್ನಿ ಪಾರ್ವತಿಯವರಿಗೆ ಸಂಬಂಧಿಸಿದ ಈ ಪ್ರಕರಣದಲ್ಲಿ ರಾಜ್ಯಪಾಲರಿಗೆ ದೂರು ನೀಡಿರುವುದು ಸಾಕಷ್ಟು ಅನುಮಾನಸ್ಪದ ಹಿನ್ನೆಲೆಯುಳ್ಳ ಒಬ್ಬ ಖಾಸಗಿ ವ್ಯಕ್ತಿ. ಅದಕ್ಕಿಂತ ಮುಖ್ಯವಾಗಿ ಈ ಪ್ರಕರಣದಲ್ಲಿ ಮೇಲ್ನೋಟಕ್ಕೆ ಅಕ್ರಮ ಭ್ರಷ್ಟಾಚಾರಗಳು ಸಾಬೀತಾಗುವಂತಹ ಸಾಕ್ಷ್ಯಗಳು ಕಾಣುತ್ತಿಲ್ಲ ಎಂಬುದನ್ನು ಗಮನಿಸಿದಾಗ ರಾಜ್ಯಪಾಲರ ನಡೆಯ ಬಗೆಗೆ ಗಂಭೀರವಾದ ಸಂಶಯಗಳು ಏಳುತ್ತವೆ.

ಈ ಪ್ರಕರಣದಲ್ಲಿ, ವಕೀಲ ಮತ್ತು ಸಾಮಾಜಿಕ ಕಾರ್ಯಕರ್ತ ಎಂದು ಹೇಳಿಕೊಳ್ಳುವ ಟಿ.ಜೆ. ಅಬ್ರಹಾಂ ರಾಜ್ಯಪಾಲರಿಗೆ 200 ಪುಟಗಳ ಲಿಖಿತ ದೂರು ಸಲ್ಲಿಸಿರುವುದು ಜುಲೈ 26 ರಂದು. ರಾಜ್ಯಪಾಲರು ಕೇಳಿದ ಪೂರಕ ದಾಖಲೆಗಳು ಎಂದು ಹೇಳಲಾದ ದಾಖಲೆಗಳನ್ನು ಸಲ್ಲಿಸಿರುವುದು ಅದೇ ಜುಲೈ 26ರ ಸಂಜೆ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ರಾಜ್ಯಪಾಲರು ರಾಜ್ಯ ಸರಕಾರದ ಮುಖ್ಯ ಕಾರ್ಯದರ್ಶಿಗಳಿಂದ ಕೇಳಿದ ದಾಖಲೆ ಮತ್ತು ವರದಿಯೂ ಅವರ ಕೈಸೇರಿರುವುದೂ ಇದೇ ಜುಲೈ 26ರಂದು. ಮರುದಿನ ಜುಲೈ 27ರಂದು ರಾಜ್ಯಪಾಲರು ಮುಖ್ಯಮಂತ್ರಿಗಳ ವಿರುದ್ಧ ಶೋಕಾಸ್ ನೋಟಿಸ್ ಹೊರಡಿಸಿದ್ದಾರೆ. ರಾಜ್ಯಪಾಲರು ಈ ವಿಷಯದಲ್ಲಿ ಸಾಗುಸುತ್ತಿರುವ 'ವೇಗ', ಆಸಕ್ತಿ ಯಾರಿಗಾದರೂ ಆಶ್ಚರ್ಯ ತರುತ್ತದೆ.

ಕಳೆದ ಹತ್ತು ವರ್ಷಗಳ ಅವಧಿಯಲ್ಲಿ ದೇಶದ ಉದ್ದಗಲ ರಾಜ್ಯಪಾಲರ ಕಚೇರಿಗಳು ತಮ್ಮ ಘನತೆ ಗೌರವಗಳನ್ನು ಕಳೆದುಕೊಂಡಿರುವುದಕ್ಕೆ ದೇಶದ ಜನ ಸಾಕ್ಷಿಯಾಗಿದ್ದಾರೆ. ಕೇರಳ, ತಮಿಳುನಾಡು, ಪಶ್ಚಿಮ ಬಂಗಾಳ, ದೆಹಲಿ ಮುಂತಾದ ರಾಜ್ಯಗಳಲ್ಲಿರುವ ವಿರೋಧ ಪಕ್ಷಗಳ ಸರಕಾರಗಳಿಗೆ ಅಲ್ಲಿನ ರಾಜ್ಯಪಾಲರು, ಲೆಫ್ಟಿನೆಂಟ್ ಗೌವರರ್ನರ್ ಸ್ಥಾನದಲ್ಲಿರುವವರು ದಿನ ನಿತ್ಯವೂ ನೀಡುತ್ತಿರುವ ಕಿರುಕುಳಗಳು, ಒಡ್ಡುತ್ತಿರುವ ಅಡ್ಡಿಗಳು ದೇಶದ ಒಕ್ಕೂಟ ಸ್ವರೂಪಕ್ಕೂ, ಅದನ್ನು ಖಾತ್ರಿಪಡಿಸುವ ಸಂವಿಧಾನದ ಮೂಲ ಆಶಯಗಳಿಗೂ ವಿರುದ್ಧವಾಗಿವೆ. ಈ ಸಂಬಂಧ ಸುಪ್ರಿಂ ಕೋರ್ಟುಗಳು ಸಹ ಅಸಮಾಧಾನ ಸೂಚಿಸಿ ತೀರ್ಪುಗಳನ್ನು ನೀಡಿವೆ. ರಾಜಕೀಯ ಹಗೆತನ ಸಾಧಿಸುವುದಕ್ಕಾಗಿ ಚುನಾಯಿತ ರಾಜ್ಯ ಸರಕಾರಗಳಿಗೆ ಸಂವಿಧಾನದ ಚೌಕಟ್ಟಿನೊಳಗೆ ಇರುವ ಸ್ವಾತಂತ್ರ್ಯ ಸ್ವಾಯತ್ತತೆಗಳನ್ನು ಕಿತ್ತುಕೊಂಡು ರಾಜ್ಯ ಸರಕಾರಗಳನ್ನು ಬುಡಮೇಲು ಮಾಡುವ, ರಾಜ್ಯ ಸರಕಾರಗಳ ಹೆಸರಿಗೆ

ಪುಟ 6 ಕ್ಕೆ

ದೋಸ್ತಿಗಳ ಪಾದಯಾತ್ರೆ: ಮುಚ್ಚಿಟ್ಟಿರುವ ಅಜೆಂಡಾಗಳು

ಈ ವಾರ

ಎಸ್.ವೈ.ಗುರುಶಾಂತ್

ನಿನ್ನೆ ಸಿಡಿ ಮಿಡಿ, ಇಂದು ಕೈ ಕೈ ಹಿಡಿದು ನಡಿ, ನಡೀ! ಇದು ಬಿಜೆಪಿಯವರು ಯೋಜಿಸಿದ ಪಾದಯಾತ್ರೆಯಲ್ಲಿ ಭಾಗವಹಿಸುವ ಪ್ರಶ್ನೆಯೇ ಇಲ್ಲ ಎಂದು ಕಿಡಿ ಹಾರಿಸಿದ್ದ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಬಿಜೆಪಿ ನಾಯಕ ಗಣದ ಸಮಜಾಯಿಷಿ, ಸಂಧಾನದಿಂದಾಗಿ ಅವರೇ ಇದೇ 2024 ಆಗಸ್ಟ್ 3 ರಂದು ಬೆಂಗಳೂರಿನಿಂದ ಮೈಸೂರಿನತ್ತ ಆರಂಭಗೊಂಡಿರುವ ಎಂಟು ದಿನಗಳ ಪಾದಯಾತ್ರೆಯನ್ನು ಉದ್ಘಾಟಿಸಿದ್ದಾರೆ. 'ದೇವೇಗೌಡರ ಕುಟುಂಬಕ್ಕೆ ವಿಷ ಇಕ್ಕುವವರ ಜೊತೆಯಲ್ಲಿ ತಾನು ವೇದಿಕೆಯನ್ನು ಹಂಚಿಕೊಳ್ಳಲು ಸಾಧ್ಯವಾದರೂ ಹೇಗೆ?' ಎಂದು ಖಡಾಖಂಡಿತವಾಗಿ ನಿರಾಕರಣೆಯ ಮಾತುಗಳನ್ನು ಕುಮಾರಸ್ವಾಮಿ ಆಡಿದ್ದರು. ಅಂದರೆ ಅವರ ಕುಟುಂಬದ ಪ್ರಜ್ವಲ್ ರೇವಣ್ಣನವರ ವಿಕೃತ ಲೈಂಗಿಕ ಹಗರಣ ಹೊರಗೆ ಬರುವಲ್ಲಿ ಹಾಗೂ ವ್ಯಾಪಕವಾಗಿ ಪೆನ್ ಡ್ರೈವ್ ಹಂಚಿಕೆಯನ್ನು ಪ್ರೀತಂ ಗೌಡರೇ ಮಾಡಿದ್ದಾರೆ ಎಂಬ ಸೂಚನೆಯೂ ಇದಾಗಿದೆ. ಸದಾ ನರೇಂದ್ರ ಮೋದಿ, ಅಮಿತ್ ಷಾ ರವರನ್ನು ಹಾಡಿ ಹೊಗಳುತ್ತಾ, ನಾಗಪುರದ ಸಂಘದ ನಾಯಕರನ್ನು ಮೆಚ್ಚುತ್ತಾ ಓಡಾಡುತ್ತಿದ್ದ ಕುಮಾರಸ್ವಾಮಿಯವರು ಬಿಜೆಪಿ ಬಣಕ್ಕೆ ಒಂದಿಷ್ಟು ಬಿಸಿ ಮುಟ್ಟಿಸಿ 'ತನ್ನದ'ನ್ನು ತೋರಿಸಿದ್ದಾರೆ. ಎರಡು ಮೈತ್ರಿ ಪಕ್ಷಗಳ ನಡುವೆ ಬಿರುಕು ಎನ್ನುವುದಕ್ಕಿಂತ ಒಂದು ಮಟ್ಟದ ಅಂತರ, ಕಿರಿಕಿರಿ ಉಂಟಾಗಿದ್ದು ನಿಜ. ಅಧಿಕಾರ ಎನ್ನುವುದು ಆಭಾದಿತವಾಗಿ ಇಲ್ಲದಿದ್ದರೆ ಜೆಡಿಎಸ್ ಪಕ್ಷದ ಭವಿಷ್ಯವೇ ಅಂಧಕಾರ ಎನ್ನುವ ಅಭಿಪ್ರಾಯದಲ್ಲಿರುವ ಅವರು ಅಂತಹ ತೀವ್ರ ಕ್ರಮಕ್ಕೆ ಹೋಗಲಾರರು ಎನ್ನುವುದು ಅಷ್ಟೇ ನಿಜ. ಒಕ್ಕಲಿಗರಾಗಿರುವ ಪ್ರೀತಮ್ ಗೌಡ ಅವರು ಒಕ್ಕಲಿಗರ ಬೆಲ್ಟ್ ನಲ್ಲಿ ಪಾದಯಾತ್ರೆಯಲ್ಲಿ ನಾಯಕನಾಗಿ ಮಿಂಚುವುದು ಕುಮಾರಸ್ವಾಮಿ ಮತ್ತು ಜೆಡಿಎಸ್‌ಗೆ ಮುಜುಗರದ ಒಂದು ಪ್ರಶ್ನೆಯೇ ಹೌದು. ಜೆಡಿಎಸ್‌ನ ಜೊತೆಗಿನ ಸಂಬಂಧಗಳನ್ನ ಸ್ವಲ್ಪವೂ ಕಳೆದುಕೊಳ್ಳಲು ಬಿಜೆಪಿ ಸಿದ್ಧವಿಲ್ಲ. ಅದಕ್ಕಾಗಿಯೇ ಅಮಿತ್ ಷಾ ಒಳಗೊಂಡು ಉಸ್ತುವಾರಿ ಅಗರ್ವಾಲ್ ಹಾಗೂ ರಾಜ್ಯದ ನಾಯಕರು ಕುಮಾರಸ್ವಾಮಿಯವರನ್ನು ಸಾಂತ್ವನಗೊಳಿಸಿ ಸಂಧಾನಕ್ಕೆ ಬಂದಿದ್ದಾರೆ. ವ್ಯಕ್ತಿಗಿಂತ ಸಂಘಟನೆ ಹಿತವೇ ಮುಖ್ಯ ಎನ್ನುವುದರಲ್ಲಿ ಪ್ರೀತಂಗೌಡರನ್ನು ದೂರ ಇಡಲು ಒಪ್ಪಿ ಅವರು ಮುಖ ಉಳಿಸಿಕೊಳ್ಳುವ ಅಂಶವೂ ಇದೆ.

ಕರ್ನಾಟಕ ವಿಧಾನಸಭೆಯಲ್ಲಿ ಉದ್ದೇಶಪೂರ್ವಕವಾಗಿಯೇ ಮುಡಾ ಪ್ರಕರಣವನ್ನು ದಿಡೀರನೆ ಚರ್ಚೆಗೆ ಕೈಗೆತ್ತಿಕೊಳ್ಳಲು ಬಿಜೆಪಿ ಒತ್ತಾಯಿಸಿದಾಗ ಎರಡು ಸದನಗಳ ಸಭಾಧ್ಯಕ್ಷರು ಅವಕಾಶವನ್ನು ನಿಯಮಾನುಸಾರವಾಗಿ ನಿರಾಕರಿಸಿದ ಬಳಿಕ ಮತ್ತು ಬಿಜೆಪಿಯ 11 ಶಾಸಕರ ಅಶಿಸ್ತಿನ ನಡೆಯನ್ನು ಆಕ್ಷೇಪಿಸಿ ಅಮಾನತು ಮಾಡಿದ ಪ್ರಸಂಗವನ್ನು ನೆಪವಾಗಿಸಿ ಸದನದ ಕಲಾಪಗಳನ್ನೇ ಬಹಿಷ್ಕರಿಸಿ ಹಗಲು ರಾತ್ರಿ ಧರಣಿ ಸತ್ಯಾಗ್ರಹವನ್ನು ನಡೆಸಿದರು. ಬಿಜೆಪಿ ಮೈಸೂರಿಗೆ ಜನಜಾಗೃತಿ ಪಾದಯಾತ್ರೆಯನ್ನು ಆರಂಭಿಸುವುದಕ್ಕೆ ಪೂರ್ವ ಸಿದ್ಧತೆ ಇದಾಗಿತ್ತು. ಸ್ವತಹ ತನ್ನ ಆಡಳಿತದಲ್ಲಿ ವಿಪರೀತ ಭ್ರಷ್ಟಾಚಾರವನ್ನು ನಡೆಸಿದ ಬಿಜೆಪಿ ತನ್ನ ಮೇಲಿರುವ ಕಳಂಕವನ್ನು ಮುಚ್ಚಿಕೊಳ್ಳಲು ಇತರರ ಮೇಲೆ ಅದರಲ್ಲೂ ಆಡಳಿತದಲ್ಲಿರುವ ಕಾಂಗ್ರೆಸ್ಸಿನ ಮೇಲೆ ಭ್ರಷ್ಟಾಚಾರದ ಆರೋಪವನ್ನು ಮಾಡುತ್ತಿದೆ. ಹಾಗಾಗಿ ಯಾವುದೇ ದಾಖಲೆ ಸಮಜಾಯಿಸಿಗಳಿಗೂ ಕಿವಿಗೊಡದೆ ತನ್ನದೇ ರೀತಿಯಲ್ಲಿ ರಾಜ್ಯದಲ್ಲಿ ಸಿದ್ದರಾಮಯ್ಯ ಮತ್ತು ಅವರ ಸರ್ಕಾರದ ಮೇಲೆ ಗೂಬೆಕೂರಿಸಲು ಮತ್ತು ಭ್ರಷ್ಟತೆಯ ಆರೋಪವನ್ನು ಹೊರಿಸಲು ಪ್ರಯತ್ನಿಸುತ್ತಿರುವುದು ನಿಚ್ಚಳ. ಅಷ್ಟು ಮಾತ್ರವೇ ಅಲ್ಲದೆ ಕಾಂಗ್ರೆಸ್ ಸರ್ಕಾರವನ್ನು ಉರುಳಿಸುವ ಉದ್ದೇಶವನ್ನು ಹೊಂದಿರುವ ಬಿಜೆಪಿ ರಾಜ್ಯದ ಜನರಲ್ಲಿ ತನ್ನ ಕೃತ್ಯಕ್ಕೆ ಒಂದು ಮನೋ ಭೂಮಿ ಕೇಂದ್ರ ಸೃಷ್ಟಿಸುವ ಉದ್ದೇಶವನ್ನು ಇರಿಸಿಕೊಂಡಿದ್ದಾರೆ. ಬಿಜೆಪಿ ಯೋಜಿಸಿದ ಪಾದಯಾತ್ರೆಯಲ್ಲಿ ಸಿದ್ದರಾಮಯ್ಯನವರ ಸೈಟ್ ಹಂಚಿಕೆ ಹಗರಣ ಅಲ್ಲದೆ ಎಸ್.ಸಿ. ಮತ್ತು ಎಸ್.ಟಿ ನಿಧಿಯ ದುರ್ಬಳಕೆ, ಮಹರ್ಷಿ ವಾಲ್ಮೀಕಿ ಅಭಿವೃದ್ಧಿ ಪ್ರಾಧಿಕಾರದಲ್ಲಿ ನಡೆದಿರುವ ಹಗರಣಗಳನ್ನು ಕೂಡ ಪ್ರಸ್ತಾವಿಸಲಾಗುತ್ತಿದೆ. ಈ ಪಾದಯಾತ್ರೆಯನ್ನು ಸಂಪೂರ್ಣವಾಗಿ ಬಿಜೆಪಿಯೇ ರೂಪಿಸಿದ್ದರೂ ಬಿಜೆಪಿ ಮತ್ತು ಜೆಡಿಎಸ್ ಎರಡು ಪಕ್ಷಗಳು ಒಡಗೂಡಿ ನಡೆಸುವ ಉದ್ದೇಶವನ್ನು ಪ್ರಕಟಿಸಿವೆ. ಈ ಪಾದಯಾತ್ರೆ ವಿಶೇಷವಾಗಿ ಬೆಂಗಳೂರಿನಿಂದ ಮಂಡ್ಯ ಮೂಲಕ ಹಾದು ಮೈಸೂರು ತಲುಪಲಿದೆ. ಇದರಲ್ಲಿ ಕೇವಲ ಜನಜಾಗೃತಿ ಅಷ್ಟೇ ಅಲ್ಲ, ಆ ಮೂಲಕವಾಗಿ ದಕ್ಷಿಣ ಕರ್ನಾಟಕದಲ್ಲಿ ತನ್ನ ನೆಲೆಯನ್ನು ವಿಸ್ತರಿಸಿಕೊಳ್ಳುವ ಮಹತ್ವಾಕಾಂಕ್ಷೆಯನ್ನು ಬಿಜೆಪಿ ಹೊಂದಿದೆ. ಒಕ್ಕಲಿಗರೇ ಅಧಿಕವಾಗಿರುವ ಈ ಪ್ರದೇಶದಲ್ಲಿ ಜೆಡಿಎಸ್‌ನ ಜೊತೆಯಲ್ಲಿ ಜಂಟಿ ಕಾರ್ಯಕ್ರಮ ರೂಪಿಸುವುದು ಎನ್ನುವುದು ಕೂಡ ಆ ಪಕ್ಷದ ಕಾರ್ಯಕರ್ತರ ಎಲ್ಲ ಹಂತಗಳ ನಾಯಕರ ಜೊತೆಗೆ ಸಂಬಂಧಗಳು ಏರ್ಪಡುವ, ಮುಂದಿನ ದಿನಗಳಲ್ಲಿ ಆ ನೆಲೆಯನ್ನು ತನ್ನತ್ತ ಸೆಳೆಯುವ ಉದ್ದೇಶವು ಇಲ್ಲದಿಲ್ಲ. ಈ ವಾಸ್ತವವನ್ನು ತಡವಾಗಿಯಾದರೂ ಜೆಡಿಎಸ್ಸಿನ ನಾಯಕರು ಗ್ರಹಿಸಿಕೊಂಡಂತಿದೆ. ಆದ್ದರಿಂದಲೇ ಕುಮಾರಸ್ವಾಮಿ ಯವರ ಆಕ್ಷೇಪಣೆಯಲ್ಲಿ ಈ ಸಾಧ್ಯತೆಯೂ ಇರುವಂತಿದೆ. ಅದನ್ನು ಕುಮಾರಸ್ವಾಮಿ ಅವರು ತಮ್ಮ ಕುಟುಂಬದ ಬದ್ಧ ವೈರಿಯಾಗಿರುವ ಹಾಸನದ ಮಾಜಿ ಶಾಸಕ ಬಿಜೆಪಿಯ ರಾಜ್ಯ ಪ್ರಧಾನ ಕಾರ್ಯದರ್ಶಿ ಪ್ರೀತಮ್ ಗೌಡರ ಹಾಜರಾತಿಗೆ ತೀವ್ರ ಆಕ್ಷೇಪಣೆ ವ್ಯಕ್ತಪಡಿಸುವ ಮೂಲಕ ತಮ್ಮ ವಿರೋಧವನ್ನು ಹೊರಹಾಕಿದ್ದಾರೆ ಎನ್ನಬಹುದು. ಈ ಮುನಿಸು ಜೆಡಿಎಸ್ ಕಾರ್ಯಕರ್ತರಿಗೆ ನೀಡಿದ ಒಂದು ಸಣ್ಣ ಸೂಚನೆಯಾಗಿ ಕಂಡರೆ ಅಷ್ಟರ ಮಟ್ಟಿಗೆ ಒಂದು ಅಂತರವನ್ನು ಕಾಯ್ದುಕೊಳ್ಳುವ ಇಂಗಿತದ ಸೂಚನೆ ಆಗಬಹುದು. ಆ ಲೆಕ್ಕಾಚಾರಗಳು ಏನೇ ಇದ್ದರೂ ಜಂಟಿಯಾಗಿ ಇಂತಹ ಕಾರ್ಯಕ್ರಮಗಳು ಪ್ರಾದೇಶಿಕ ಪಕ್ಷವಾಗಿರುವ ಮತ್ತು ಅದರಲ್ಲೂ ದುರ್ಬಲವಾಗುತ್ತಿರುವ ಜೆಡಿಎಸ್ಸಿಗೆ ಖಂಡಿತಕ್ಕೂ ಆತಂಕದ ಸ್ಥಿತಿಯೇ ಆಗಿರುತ್ತದೆ. ಕುಮಾರಸ್ವಾಮಿ ಮತ್ತು ಯಡಿಯೂರಪ್ಪನವರು ಈ ಪಾದಯಾತ್ರೆಯನ್ನು ಉದ್ಘಾಟಿಸುತ್ತಾರೆ ಎನ್ನುವ ಅಂಶದಲ್ಲೂ ಒಕ್ಕಲಿಗ ಮತ್ತು ಲಿಂಗಾಯತ ಜಾತಿಗಳನ್ನು ಓಲೈಸುವ ಸಂಕೇತವೂ, ಆ ಸಾಧ್ಯತೆಗಳನ್ನು ಒಟ್ಟಿಗೆ ತಮ್ಮ ರಾಜಕೀಯಕ್ಕೆ ಬಳಸುವ ಇಂಗಿತವೂ ಇಲ್ಲದಿಲ್ಲ.

ಮೈಸೂರಿನ 'ಮುಡಾ' ಅಕ್ರಮಗಳಲ್ಲಿ ಜೆಡಿಎಸ್ ನಾಯಕ ಕುಮಾರಸ್ವಾಮಿ ಮತ್ತು ಅವರ ಕುಟುಂಬ ಹಾಗೂ ಮಿತ್ರರ ಪ್ರಕರಣಗಳು ಕೂಡ ಅತ್ಯಂತ ಗಣನೀಯವಾಗಿವೆ. ಈ ಹಗರಣಗಳ

ಪುಟ 7 ಕ್ಕೆ

ಬೀದಿಬದಿ ವ್ಯಾಪಾರಸ್ಥರ ಮೇಲೆ ದೌರ್ಜನ್ಯ ನಡೆಸಿದ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ವಿರುದ್ಧ ಸಾಮೂಹಿಕ ಧರಣಿ

ತಲಪಾಡಿ ಟೋಲ್ ಗೇಟ್ ಬಳಿಯಲ್ಲಿರುವ ಬಡ ಬೀದಿಬದಿ ವ್ಯಾಪಾರಸ್ಥರ ಮೇಲೆ ವಿನಾಃ ಕಾರಣ ದೌರ್ಜನ್ಯ ನಡೆಸಿರುವ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ವಿರುದ್ಧ 01 ಆಗಸ್ಟ್ 2024 ತಲಪಾಡಿ ಟೋಲ್ ಗೇಟ್ ಬಳಿಯಲ್ಲಿ ಸಾಮೂಹಿಕ ಧರಣಿ ನಡೆಸಲಾಯಿತು.

ನೂರಾರು ಸಂಖ್ಯೆಯಲ್ಲಿ ಸೇರಿದ್ದ ಬೀದಿಬದಿ ವ್ಯಾಪಾರಸ್ಥರು ಹಾಗೂ ಸಾರ್ವಜನಿಕರು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ವಿರುದ್ಧ ಆಕ್ರೋಶಭರಿತರಾಗಿ ಘೋಷಣೆಗಳನ್ನು ಕೂಗಿದರು.

ಧರಣಿ ಸತ್ಯಾಗ್ರಹವನ್ನು ಉದ್ಘಾಟಿಸಿ ಮಾತನಾಡಿದ ದ.ಕ.ಜಿಲ್ಲಾ ಬೀದಿಬದಿ ವ್ಯಾಪಾರಸ್ಥರ ಶ್ರೇಯೋಭಿವೃದ್ಧಿ ಸಂಘದ ಗೌರವಾಧ್ಯಕ್ಷರಾದ ಬಿ.ಕೆ.ಇಮ್ತಿಯಾಜ್ ರವರು, 'ಬದುಕಿಗೆ ಯಾವುದೇ ರಕ್ಷಣೆ ಇಲ್ಲದ ಸಂದರ್ಭದಲ್ಲಿ ಧೀರೋದಾತ್ತ ಹೋರಾಟ ನಡೆಸಿದ ಬೀದಿಬದಿ ವ್ಯಾಪಾರಸ್ಥರಿಗೆ ಇಂದು ಕಾನೂನಿನ ರಕ್ಷಣೆ ಇದ್ದರೂ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರವು ಅದ್ಯಾವುದನ್ನೂ ಪರಿಗಣನೆಗೆ ತೆಗೆದುಕೊಳ್ಳದೆ ಅತ್ಯಂತ ಅಮಾನವೀಯವಾಗಿ ವರ್ತಿಸಿರುವುದು ಕಾನೂನು ಬಾಹಿರವಾಗಿದೆ. ರಾಷ್ಟ್ರೀಯ ಹೆದ್ದಾರಿ ಅಕ್ಕಪಕ್ಕದಲ್ಲಿ ಸಾಕಷ್ಟು ಭೂಮಿಯನ್ನು ಕಬಳಿಸಿರುವ ನುಂಗಣ್ಣರವರ ವಿರುದ್ಧ ಎಳ್ಳಷ್ಟೂ ಕ್ರಮ ಕೈಗೊಳ್ಳದ ಪ್ರಾಧಿಕಾರ ಬಡಪಾಯಿ ವ್ಯಾಪಾರಸ್ಥರ ವಿರುದ್ಧ ಪೌರುಷ ತೋರಿಸುವುದು ಎಷ್ಟು ಸರಿ..?' ಎಂದು ಆಕ್ರೋಶ ವ್ಯಕ್ತಪಡಿಸಿದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಬೀದಿಬದಿ ವ್ಯಾಪಾರಸ್ಥರ ಸಂಘದ ತಲಪಾಡಿ ವಲಯ ಗೌರವಾಧ್ಯಕ್ಷರಾದ ಸುನಿಲ್ ಕುಮಾರ್ ಬಜಾಲ್ ರವರು, 'ದೇಶದ ಆರ್ಥಿಕತೆಗೆ ದೊಡ್ಡ ಕೊಡುಗೆ ನೀಡುತ್ತಿರುವ ಹಾಗೂ ತಮ್ಮ ಬದುಕನ್ನು ತಾವೇ ನಿರ್ಮಿಸುತ್ತಿರುವ ಬೀದಿಬದಿ ವ್ಯಾಪಾರಸ್ಥರನ್ನು ವಿಶೇಷ ಗೌರವ ನೀಡಬೇಕಾದ ಆಳುವ ವರ್ಗ ಇಂದು ಅವರ ವಿರುದ್ಧ ಕೆಂಗಣ್ಣು ಬೀರುತ್ತಿರುವುದು ವಿಪರ್ಯಾಸವಾಗಿದೆ. ರಾಷ್ಟ್ರೀಯ ಹೆದ್ದಾರಿಯ ಆಸುಪಾಸಿನಲ್ಲಿರುವ ಬೀದಿಬದಿ ವ್ಯಾಪಾರಸ್ಥರ ಸಮೀಕ್ಷೆ ನಡೆಸಿ ಕೂಡಲೇ ಅವರಿಗೆ ಗುರುತುಚೀಟಿಯನ್ನು ನೀಡಿ ಸರಕಾರದ ಎಲ್ಲಾ ಸವಲತ್ತುಗಳನ್ನು ನೀಡಬೇಕೆಂದು' ಒತ್ತಾಯಿಸಿದರು.

ಸಮಾರೋಪ ಭಾಷಣ ಮಾಡಿದ CITU ರಾಜ್ಯ ನಾಯಕರಾದ ಸುಕುಮಾರ್ ತೊಕ್ಕೋಟುರವರು ಮಾತನಾಡುತ್ತಾ 'ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ತಾನು ಮಾಡುತ್ತಿರುವ ತಪ್ಪನ್ನು ಮರೆಮಾಚಿ ಅನಾವಶ್ಯಕವಾಗಿ ಬಡ ಬೀದಿಬದಿ ವ್ಯಾಪಾರಸ್ಥರ ಮೇಲೆ ಧಾಳಿ ನಡೆಸುತ್ತಿದೆ. ಮಾತ್ರವಲ್ಲದೆ ಅವರ ವಸ್ತುಗಳನ್ನು ಧ್ವಂಸ ಮಾಡಿ ತನ್ನ ರಾಕ್ಷಸೀ ವರ್ತನೆಯನ್ನು ತೋರಿಸಿದೆ' ಎಂದರು.

ಧರಣಿಯನ್ನುದ್ದೇಶಿಸಿ ರೈತ ನಾಯಕರಾದ ಕ್ರಷ್ಣಪ್ಪ ಸಾಲ್ಯಾನ್, ಮಾಜಿ ತಾಲೂಕು ಪಂಚಾಯತ್ ಸದಸ್ಯರಾದ ಸುರೇಖಾ ಚಂದ್ರಹಾಸ್, ಕಾರ್ಮಿಕ ಮುಖಂಡರಾದ ಜಯಂತ ನಾಯಕ್, ಯುವಜನ ನಾಯಕರಾದ ರಿಜ್ವಾನ್ ಹರೇಕಳ, ಸ್ಥಳೀಯ ಯುವ ನಾಯಕರಾದ ಯಶು ಕುಮಾರ್ ಪಕ್ಕಳ, ಮಾಜಿ ಜಿಲ್ಲಾ ಪಂಚಾಯತ್ ಸದಸ್ಯರಾದ ವಿನಯ ನಾಯಕ್ ರವರು ಮಾತನಾಡಿ ಬೀದಿಬದಿ ವ್ಯಾಪಾರಸ್ಥರ ಮೇಲೆ ನಡೆದ ಹೇಯ ಕ್ರತ್ಯವನ್ನು ಖಂಡಿಸಿ, ಬಡಪಾಯಿ ವ್ಯಾಪಾರಸ್ಥರ ಜೊತೆಗೆ ನಾವು ಸದಾ ಕೈಜೋಡಿಸುವುದಾಗಿ ಹೇಳಿದರು.



ಧರಣಿಯಲ್ಲಿ ಬೀದಿಬದಿ ವ್ಯಾಪಾರಸ್ಥರ ಸಂಘದ ಮುಖಂಡರಾದ ಅಬ್ದುಲ್ ರೆಹಮಾನ್, ನವೀನ್ ಶೆಟ್ಟಿ, ವಿನಾಯಕ ಶೆಣೈ, ವಿಜಯ ಮಹಿಳಾ ನಾಯಕರಾದ ಸುನೀತ ಲೋಬೋ, ಚಂದ್ರಿಕಾ ರೈ, ಮೀನಾ ಟೆಲ್ಲಿಸ್, ಮೀರಾ, ಶೋಭಾ ಕೇಶವ್,ಯೋಗಿತಾ ಉಳ್ಳಾಲ, ಪ್ರಮೀಳಾ ದೇವಾಡಿಗ ಕಾರ್ಮಿಕ ಮುಖಂಡರಾದ ಪ್ರಮೋದಿನಿ ಕಲ್ಲಾಪು, ಇಬ್ರಾಹಿಂ ಮದಕ, ಶಿವಾನಂದ ತಲಪಾಡಿ, ಯುವಜನ ನಾಯಕರಾದ ವರಪ್ರಸಾದ್ ಬಜಾಲ್, ಮನೋಜ್ ಶೆಟ್ಟಿ, ಬಸ್ ನೌಕರರ ಮುಖಂಡರಾದ ಅಲ್ತಾಫ್ ಮುಡಿಪು ಮುಂತಾದವರಿದ್ದರು.

'ಒಳ ಮೀಸಲಾತಿ' ಕುರಿತು ಸುಪ್ರೀಂ ಕೋರ್ಟ್ ತೀರ್ಪು; ಡಿ.ಎಚ್.ಎಸ್. ಸ್ವಾಗತ

'ಒಳ ಮೀಸಲಾತಿ' ಕುರಿತು ಸುಪ್ರೀಂ ಕೋರ್ಟ್ ನೀಡಿರುವ ತೀರ್ಪು ದಲಿತರ ದೀರ್ಘಕಾಲದ ಹೋರಾಟಕ್ಕೆ ಸಂದ ಜಯವಾಗಿದೆ ಎಂದಿರುವ ದಲಿತ ಹಕ್ಕುಗಳ ಸಮಿತಿ–ಕರ್ನಾಟಕ (ಡಿ.ಎಚ್.ಎಸ್), ರಾಜ್ಯದಲ್ಲಿರುವ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಜನಸಂಖ್ಯೆ ಆಧಾರದಲ್ಲಿ ಮೀಸಲಾತಿ ಜಾರಿಯಾಗಬೇಕೆಂದು ದಲಿತ ಸಂಘಟನೆಗಳು ಹೋರಾಟ ನಡೆಸಿದ್ದವು, ಈ ಸಂಬಂಧ ಆಗಸ್ಟ್ ಒಂದರಂದು ಸುಪ್ರೀಂ ಕೋರ್ಟ್ ನೀಡಿರುವ ತೀರ್ಪು ಸಂವಿಧಾನದ ಆಶಯಗಳಿಗೆ ಬದ್ಧವಾಗಿದ್ದು, ದಲಿತ ಹಕ್ಕುಗಳ ಸಮಿತಿ ಈ ತೀರ್ಪನ್ನು ಸ್ವಾಗತಿಸುತ್ತದೆ ಎಂದು ಹೇಳಿದೆ.

ಪರಿಶಿಷ್ಟ ಜಾತಿಯಲ್ಲಿ 101, ಪರಿಶಿಷ್ಟ ಪಂಗಡದಲ್ಲಿ 57 ಉಪ ಜಾತಿ ಗುಂಪುಗಳಿದ್ದು, ಸೌಲಭ್ಯಗಳು ಸಿಗದ ಕಟ್ಟ ಕಡೆಯ ಜನರಿಗೆ ಅವರವರ ಗುಂಪುಗಳ ಜನಸಂಖ್ಯೆ ಆಧಾರದಲ್ಲಿ ಉದ್ಯೋಗ, ಅಭಿವೃದ್ಧಿ ಸೌಲಭ್ಯಗಳು ಸಿಗಬೇಕೆಂದು ಒತ್ತಾಯಿಸಿದ್ದವು.

ಈ ಬಗ್ಗೆ ಅಂದಿನ ಸರ್ಕಾರ ನ್ಯಾಯಮೂರ್ತಿ ಡಾ.ಸದಾಶಿವ ಆಯೋಗ ನೇಮಿಸಿ ವರದಿ ಪಡೆಯಲಾಗಿತ್ತು. ವರದಿ ಮಂಡಿಸಿ 3 ದಶಕಗಳು ಕಳೆದು ಹೋದವು. ನೆರೆ ರಾಜ್ಯವಾದ ಆಂಧ್ರಪ್ರದೇಶದಲ್ಲಿ ಈ ಹೋರಾಟ ತೀವ್ರಗೊಂಡಿತ್ತು. ಆಗ ಕೇಂದ್ರ ಸರ್ಕಾರ ನ್ಯಾಯಮೂರ್ತಿ ಉಷಾ ಮಹೆತಾರವರ ನೇತೃತ್ವದಲ್ಲಿ ಆಯೋಗ ನೇಮಿಸಿತ್ತು. ಆಯೋಗವು ಕೇಂದ್ರ ಸರ್ಕಾರಕ್ಕೆ ತನ್ನ ಅಭಿಪ್ರಾಯವನ್ನು ಮಂಡಿಸಿ 341(3) ತಿದ್ದುಪಡಿ ಮಾಡಲು ಸೂಚಿಸಿತು ಮತ್ತು ಕೇಂದ್ರ ಸರ್ಕಾರವೇ ಸಂಸತ್ತಿನಲ್ಲಿ ತೀರ್ಮಾನ ಮಾಡಬೇಕೆಂದು ವರದಿ ನೀಡಿತ್ತು. ಇದು ಬಿಜೆಪಿ ಕೇಂದ್ರ ಸರ್ಕಾರದಲ್ಲಿ ಮೂಲೆ ಗುಂಪಾಗಿತ್ತು. ಇದು ಹೊಲೆ, ಮಾದಿಗರು ಸೇರಿದಂತೆ ಸಣ್ಣ ಸಣ್ಣ ಉಪ ಜಾತಿ ಜನಸಂಖ್ಯೆ ಆಧಾರದಲ್ಲಿ ಎಲ್ಲಾ ಎಸ್.ಸಿ., ಎಸ್.ಟಿ. ಗುಂಪುಗಳಿಗೆ ಅನ್ವಯಿಸಿದ ವಿಷಯವಾಗಿದೆ. ಇದರ ಜಾರಿಗೆ ಮುಂದೆಯೂ ಎಲ್ಲರೂ ಒಗ್ಗಟ್ಟಾಗಿ ಹೋರಾಟ ನಡೆಸಬೇಕಾದ ಆದ್ಯ ಕರ್ತವ್ಯ ನಮ್ಮ ಎಲ್ಲಾ ಸಂಘಟನೆಗಳ ಮೇಲಿದೆ ಎಂದು ಸಂಘಟನೆ ಹೇಳಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯನವರು ಈ ತೀರ್ಪಿನಂತೆ ವರದಿಯನ್ನು ಜಾರಿಗೊಳಿಸುವುದಾಗಿ ಭರವಸೆ ನೀಡಿರುವುದು ಸ್ವಾಗತಾರ್ಹವಾಗಿದೆ. ರಾಜ್ಯ ಸರ್ಕಾರ ಯಾವ ಒತ್ತಡಕ್ಕೂ ಮಣಿಯದೆ ಜಾರಿಗೆ ಕ್ರಮವಹಿಸಬೇಕು ಎಂದು ಡಿ.ಎಚ್.ಎಸ್. ಒತ್ತಾಯಿಸಿದೆ.





ಕರ್ನಾಟಕ ಸರಕಾರ, ಅಂಗಡಿ ಮತ್ತು ವಾಣಿಜ್ಯ ಸಂಸ್ಥೆಗಳ ಕಾಯ್ದೆಗೆ ತಿದ್ದುಪಡಿ ಮಾಡಿ ಅಲ್ಲಿ ದುಡಿಯುವ ಮುಖ್ಯವಾಗಿ, ಐಟಿ, ಬಿಟಿ ಸಂಸ್ಥೆಗಳಲ್ಲಿ ದುಡಿಯುವ ಕಾರ್ಮಿಕರ ಕೆಲಸದ ಅವಧಿಯನ್ನು 14 ತಾಸುಗಳಿಗೆ ವಿಸ್ತರಿಸುವ ಪ್ರಸ್ಥಾಪ, ಪ್ರಸ್ತಾವನೆಯನ್ನು ವಿರೋಧಿಸಿ ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಕೆಐಟಿಯು ಸಂಘಟನೆಯು ಪ್ರತಿಭಟನೆ ನಡೆಸಿದ್ದರು.
ಎಡಿಎಲ್‌ಸಿ (ಕರ್ನಾಟಕ ಕಾರ್ಮಿಕ ಇಲಾಖೆ) ಡಾ.ಜಿ ಮಂಜುನಾಥ್ ಪ್ರತಿಭಟನಾ ಸ್ಥಳಕ್ಕೆ ಆಗಮಿಸಿ ಮನವಿ ಪತ್ರ ಸ್ವೀಕರಿಸಿದರು.

ಸರ್ಕಾರಿ ನೌಕರರು ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಚಟುವಟಿಕೆಗಳಲ್ಲಿ ಭಾಗವಹಿಸಲು ಇದ್ದ ನಿಷೇದವನ್ನು ಮೋದಿ ಸರಕಾರ ಹಿಂತೆಗೆದುಕೊಂಡಿದೆ. ಕೇಂದ್ರದ ಈ ನಿರ್ಧಾರಕ್ಕೆ ಕಾರಣಗಳೇನು? ಆರ್.ಎಸ್.ಎಸ್.ನಲ್ಲಿ ಏನಾದರೂ ಬದಲಾವಣೆಯಾಗಿದೆಯೇ? ಜನರ ನಡುವೆ ಒಡಕುಂಟು ಮಾಡಿ ರಾಜಕೀಯ ಅಧಿಕಾರ ಪಡೆಯುವ ಅದರ ತಂತ್ರ ಬದಲಾಗಿದೆಯೇ? 1948ರಲ್ಲಿ ಮಹಾತ್ಮ ಗಾಂಧೀಜಿಯವರ ಹತ್ಯೆ ಮತ್ತು 1992ರಲ್ಲಿ ಬಾಬರಿ ಮಸೀದಿ ಧ್ವಂಸದ ಸಂದರ್ಭದಲ್ಲಿ ದ್ವೇಷದ ವಿಷವನ್ನು ಎರಚಿದ ಕೆಟ್ಟ ಸಿದ್ಧಾಂತಕ್ಕೆ ಅದು ಇಂದಿಗೂ ಬದ್ಧವಾಗಿದೆ. ಜಾತಿ, ಧರ್ಮದ ಭೇದ ಮರೆತು ತಟಸ್ಥವಾಗಿ ಕಾರ್ಯನಿರ್ವಹಿಸಬೇಕಾದ ಸರಕಾರಿ ನೌಕರರು ಆರ್‌ಎಸ್‌ಎಸ್ ಚಟುವಟಿಕೆಗಳಲ್ಲಿ ತೊಡಗುವುದರಿಂದ, ಸಮಾಜಕ್ಕೆ ದೊಡ್ಡ ಅಪಾಯ ಎದುರಾಗಲಿದೆ. ಸರ್ಕಾರಿ ನೌಕರರು ಧಾರ್ಮಿಕ ಪ್ರಜ್ಞೆ ಮತ್ತು ಧಾರ್ಮಿಕ ತಾರತಮ್ಯದಿಂದ ಕಾರ್ಯನಿರ್ವಹಿಸಲು ಅವಕಾಶವಾಗುತ್ತದೆ. ಸರ್ಕಾರಿ ಯಂತ್ರವನ್ನು ಹಿಂದುತ್ವ ಮಾಡುವ ಉದ್ದೇಶದಿಂದ ಮೋದಿ ಸರ್ಕಾರ ಇಂತಹ ಕ್ರಮ ಕೈಗೊಂಡಿದೆ. ಇದು ಹೆಚ್ಚು ಅಪಾಯಕಾರಿಯಾಗಿ ಪರಿಣಮಿಸಿದೆ.

ಸರ್ಕಾರಿ ನೌಕರರಿಗೆ ಆರ್.ಎಸ್.ಎಸ್. ಸೇರಲು ಅವಕಾಶ
ಧಾರ್ಮಿಕ ತಾರತಮ್ಯದ ಕಾರ್ಯನಿರ್ವಹಣೆಯಿಂದ ಸಮಾಜಕ್ಕೆ ದೊಡ್ಡ ಅಪಾಯ

ಸಿ.ಸಿದ್ದಯ್ಯ

ಸರ್ಕಾರಿ ನೌಕರರು ರಾಷ್ಟ್ರೀಯ ಸ್ವಯಂ ಸೇವಕ ಸಂಘ (ಆರ್‌ಎಸ್‌ಎಸ್)ಕ್ಕೆ ಸೇರುವ ನಿಷೇಧವನ್ನು ಮೋದಿ ನೇತೃತ್ವದ ಎನ್.ಡಿ.ಎ. ಸರ್ಕಾರ ಹಿಂತೆಗೆದುಕೊಂಡಿದೆ. 2024 ಜುಲೈ 9 ರಂದು ಪ್ರಧಾನ ಮಂತ್ರಿಯವರ ಅಡಿಯಲ್ಲಿ ನೇರವಾಗಿ ಬರುವ ಸಿಬ್ಬಂದಿ ಮತ್ತು ತರಬೇತಿ ಇಲಾಖೆ (DoPT), 1966ರಿಂದ ಜಾರಿಯಲ್ಲಿದ್ದ ನಿಷೇಧವನ್ನು ಹಿಂಪಡೆದು ಯಾವುದೇ ಹಿಂಜರಿಕೆ ಇಲ್ಲದೆ ಹೊಸ ಆದೇಶವನ್ನು ಹೊರಡಿಸಿದೆ. ಆದರೆ, ಇದು ಬಹಿರಂಗಕ್ಕೆ ಬಂದಿದ್ದು ಜುಲೈ 22 ರಂದು. ಅಂದರೆ 13 ದಿನಗಳ ನಂತರ! ಅದೂ ಕೂಡಾ ಸರ್ಕಾರಿ ಮೂಲದಿಂದ ಬಹಿರಂಗಗೊಳ್ಳಲಿಲ್ಲ ಬದಲಾಗಿ, ಬಿಜೆಪಿ ಮಾಧ್ಯಮ ವಿಭಾಗದ ಮುಖ್ಯಸ್ಥ ಅಮಿತ್ ಮಾಳವೀಯ ಮಾಡಿದ "ಸರ್ಕಾರಿ ನೌಕರರು ಆರ್‌ಎಸ್‌ಎಸ್ ನ ಚಟುವಟಿಕೆಗಳಲ್ಲಿ ಭಾಗವಹಿಸದಂತೆ 58 ವರ್ಷಗಳ ಹಿಂದೆ ಆದೇಶ ಹೊರಡಿಸಲಾಗಿದೆ. ಸಂವಿಧಾನಕ್ಕೆ ವಿರುದ್ಧವಾದ ಈ ಆದೇಶವನ್ನು ಪ್ರಧಾನಿ ಮೋದಿ ನೇತೃತ್ವದ ಸರ್ಕಾರ ಹಿಂಪಡೆದಿರುವುದು ಸ್ವಾಗತಾರ್ಹ." ಎಂಬ ಟ್ವಿಟ್ ಮೂಲಕ!

1966 ರಲ್ಲಿ ಕೇಂದ್ರ ಸರ್ಕಾರವು ಆರೆಸ್ಸೆಸ್ ಮತ್ತು ಜಮಾತ್–ಎ–ಇಸ್ಲಾಮಿ ಆಯೋಜಿಸುವ ಚಟುವಟಿಕೆಗಳಲ್ಲಿ ಸರ್ಕಾರಿ ನೌಕರರು ಭಾಗವಹಿಸುವುದನ್ನು ನಿಷೇಧಿಸಿತು. ರಾಷ್ಟ್ರೀಯ ಸ್ವಯಂಸೇವಕ ಸಂಘ ಮತ್ತು ಜಮಾತ್–ಎ–ಇಸ್ಲಾಮಿಯ ಇವುಗಳ ಯಾವುದೇ ಚಟುವಟಿಕೆಗಳಲ್ಲಿ ಸರ್ಕಾರಿ ನೌಕರರು ಭಾಗವಹಿಸುವುದು ರಾಜಕೀಯ ಚಳುವಳಿ ಅಥವಾ ಚಟುವಟಿಕೆಯಲ್ಲಿ ಭಾಗವಹಿಸುವಿಕೆಗೆ ಸಮಾನವಾಗಿದೆ, ಆದ್ದರಿಂದ ಇದು ಕೇಂದ್ರ ನಾಗರಿಕ ಸೇವೆಗಳ (ನಡತೆ) ನಿಯಮ, 1964, 5 ರ ಉಪ–ನಿಯಮ (1) ರ ನಿಬಂಧನೆಗಳ ಉಲ್ಲಂಘನೆಯಾಗುತ್ತದೆ.

ಅದಾದ ನಂತರ ಅಟಲ್ ಬಿಹಾರಿ ವಾಜಪೇಯಿ ನೇತೃತ್ವದ ಬಿಜೆಪಿ ಆಡಳಿತದಲ್ಲಿಯೂ ಈ ನಿಷೇಧ ಮುಂದುವರಿದಿತ್ತು. ಕಳೆದ ಹತ್ತು ವರ್ಷಗಳ ಮೋದಿ ಆಡಳಿತದಲ್ಲಿಯೂ ನಿಷೇಧ ಮುಂದುವರೆಯಿತು. ವಾಜಪೇಯಿ ಸರ್ಕಾರದ ಅವಧಿಯಲ್ಲಿಯೂ, ಕಳೆದ ಹತ್ತು ವರ್ಷಗಳ ಮೋದಿ ಆಡಳಿತದಲ್ಲಿಯೂ ತೆಗೆದುಕೊಳ್ಳದ ನಿರ್ಧಾರವನ್ನು ಈಗ ಇದ್ದಕ್ಕಿದ್ದಂತೆ ಏಕೆ ತೆಗೆದುಕೊಂಡಿದೆ ಎಂಬುದು ಚರ್ಚೆಗೆ ಗ್ರಾಸವಾಗಿದೆ. ಸುಮಾರು 58 ವರ್ಷಗಳಷ್ಟು ಹಳೆಯದಾದ ನಿಷೇಧವನ್ನು ತೆಗೆದುಹಾಕುವ ಮೊದಲು ಏಕೆ ಕನಿಷ್ಠ ಚರ್ಚೆಯನ್ನೂ ನಡೆಸಲಿಲ್ಲ? ಒಂದು ಕಡೆ ಸಂಸತ್ತಿನ ಅಧಿವೇಶನಗಳು ಸಮೀಪಿಸುತ್ತಿದ್ದಂತೆ ಈ ಕುರಿತು ಚರ್ಚೆ ಮಾಡುವ ಬದಲು ಆದೇಶ ಹೊರಡಿಸುವ ಅಗತ್ಯವೇನಿತ್ತು? ಇತ್ತೀಚಿನ ಲೋಕಸಭೆ ಚುನಾವಣೆಯಲ್ಲಿ ಬಹುಮತ ಕಳೆದುಕೊಂಡಿರುವ ಬಿಜೆಪಿ, ಮುಂಬರುವ ರಾಜ್ಯಗಳ ಚುನಾವಣೆಯಲ್ಲಿ ಲಾಭ ಪಡೆಯಲು ಕೋಮುದ್ವೇಷ ಕೆರಳಿಸುವ ನಿರೀಕ್ಷೆ ಇದೆ. ಈ ಹಿನ್ನೆಲೆಯಲ್ಲಿ ಮೋದಿ ಸರ್ಕಾರ ಈ ವಿವಾದಾತ್ಮಕ ನಿರ್ಧಾರ ಕೈಗೊಂಡಿದೆ ಎಂಬ ವಾದ ಸತ್ಯಕ್ಕೆ ದೂರವಿಲ್ಲ. ಈ ಕ್ರಮವು ರಾಜಕೀಯ ಪ್ರೇರಿತವಾಗಿದೆ ಮತ್ತು ಅಧಿಕಾರಶಾಹಿಗಳ "ಹಿಂದುತ್ವೀಕರಣ" ವನ್ನು ಕಾನೂನುಬದ್ಧಗೊಳಿಸುತ್ತದೆ.

ಸಂವಿಧಾನದತ್ತವಾಗಿ ಜವಾಬ್ದಾರಿ ನಿರ್ವಹಿಸುತ್ತಿರುವ ಸರ್ಕಾರಿ ನೌಕರರು ಧಾರ್ಮಿಕ ಸಿದ್ಧಾಂತದ ಮೂಲಕ ನಡೆಯುವ ಆರ್‌ಎಸ್‌ಎಸ್ ಚಟುವಟಿಕೆಗಳಲ್ಲಿ ಭಾಗವಹಿಸಿದರೆ ಅದು ದೇಶಕ್ಕೆ ಅತ್ಯಂತ ಅಪಾಯಕಾರಿ.

ಸದ್ದಿಲ್ಲದೆ ಮಾಡಿದ್ದೇಕೆ?

ಕಳೆದ ಲೋಕಸಭೆ ಚುನಾವಣೆಯಲ್ಲಿ ಪ್ರಧಾನಿ ಮೋದಿ ಸೇರಿದಂತೆ ಬಿಜೆಪಿ ನಾಯಕರು 400 ಸೀಟು ಗೆಲ್ಲುತ್ತೇವೆ ಎಂದು ಹೇಳಿದ್ದರು. ಆದರೆ ಬಿಜೆಪಿ ಗೆದ್ದಿದ್ದು 240 ಸ್ಥಾನ ಮಾತ್ರ. ಅಲ್ಲದೆ, ಬಿಜೆಪಿಯ ಭದ್ರಕೋಟೆ ಎಂದು ಪರಿಗಣಿಸಲಾದ ಉತ್ತರಪ್ರದೇಶದಲ್ಲಿ ಬಿಜೆಪಿ ಹಿನ್ನಡೆ ಅನುಭವಿಸಿದೆ. 'ಚುನಾವಣಾ ಫಲಿತಾಂಶದ ನಂತರ ಆರೆಸ್ಸೆಸ್ ಮತ್ತು ಬಿಜೆಪಿ ನಡುವೆ ಸಂಘರ್ಷದ ವರದಿಗಳು ಬಂದಿದ್ದವು, ಆರೆಸ್ಸೆಸ್ ಅನ್ನು ಸಂತೃಪ್ತಿಗೊಳಿಸಲು ಅದರ ಮೇಲಿದ್ದ 58 ವರ್ಷಗಳ ನಿರ್ಭಂದವನ್ನು ಮೋದಿ ಸರ್ಕಾರ ತೆಗೆದುಹಾಕಿದೆ' ಎಂದು ಮಾದ್ಯಮಗಳಲ್ಲಿ ಚರ್ಚೆಗಳಾಗುತ್ತಿವೆ. ಮಾತ್ರವಲ್ಲ, ಈ ಚುನಾವಣೆಯಲ್ಲಿ ಆರೆಸ್ಸೆಸ್ ಸಕ್ರಿಯವಾಗಿ ತೊಡಗಿಕೊಳ್ಳಲಿಲ್ಲ ಎಂದೂ ಕೆಲ ಮಾದ್ಯಮಗಳು ಹೇಳುತ್ತಿವೆ. ಮೋದಿ ನೇತೃತ್ವದ ಬಿಜೆಪಿ ಮತ್ತು ಆರೆಸ್ಸೆಸ್ ನಡುವಿನ ಸ್ಪಷ್ಟವಾದ ಸೈದ್ಧಾಂತಿಕ ಉದ್ವಿಗ್ನತೆ, ಲೋಕಸಭಾ ಚುನಾವಣಾ ಪ್ರಚಾರದ ಸಂದರ್ಭದಲ್ಲಿ ಬಿಜೆಪಿ ಅಧ್ಯಕ್ಷ ಜೆ.ಪಿ.ನಡ್ಡಾ ಅವರು 'ಕೇಸರಿ ಪಕ್ಷವು ಹಿಂದಿನಂತೆ ಆರ್‌ಎಸ್‌ಎಸ್ ಮೇಲೆ ಅವಲಂಬಿತವಾಗಿಲ್ಲ' ಎಂದು ಹೇಳಿಕೆ ನೀಡಿದ್ದು, ಮೋದಿ ನೇತೃತ್ವದಲ್ಲಿ ಬಿಜೆಪಿಯ ಸ್ವಾಯತ್ತ ಕಾರ್ಯನಿರ್ವಹಣೆಯನ್ನು ಪ್ರತಿಪಾದಿಸಿದ್ದು, ಇವೆಲ್ಲವೂ ಆರೆಸ್ಸೆಸ್ ನ ತಂತ್ರಗಳೇ ವಿನಃ ಇದರಲ್ಲಿ ಸತ್ಯಾಂಶಗಳಿಲ್ಲ. ದೇಶದ ಜನತೆ ಬಿಜೆಪಿ ಆಡಳಿತದಿಂದ ಬೇಸತ್ತು ಅದರಿಂದ ದೂರವಾಗತೊಡಗಿದ್ದಾರೆ. ಇದನ್ನು ಅರಿತಿರುವ ಅರೆಸ್ಸೆಸ್ ಸೋಲನ್ನು ಬಿಜೆಪಿ ಮತ್ತು ಅದರ ಕೆಲ ನಾಯಕರ ಮೇಲೆ ಹೊರಿಸುವ ಮೂಲಕ ತಾನು ಸೋಲಿನ ಹೊಣೆಯಿಂದ ತಪ್ಪಿಸಿಕೊಳ್ಳುವ ಪ್ರಯತ್ನವಲ್ಲದೆ ಇದು ಬೇರೇನೂ ಅಲ್ಲ.



ತನ್ನ ಯಾವುದೇ ಯೋಜನೆ ಅಥವಾ ತಾನು ತೆಗೆದುಕೊಳ್ಳುವ ಯಾವುದೇ ನಿರ್ಧಾರಗಳನ್ನು ಸುದ್ದಿ ಮಾಧ್ಯಮಗಳ ಮೂಲಕ, ಸಾಮಾಜಿಕ ಜಾಲತಾಣಗಳ ಮೂಲಕ ವ್ಯಾಪಕವಾಗಿ ಪ್ರಚಾರ ಮಾಡುವ ಮೋದಿ ಸರ್ಕಾರ, ಸರ್ಕಾರಿ ನೌಕರರು ಆರೆಸ್ಸೆಸ್ ಸಂಘಟನೆಯ ಚಟುವಟಿಕೆಗಳಲ್ಲಿ ಭಾಗಿಯಾಗಬಾರದು ಎಂಬ ನಿಷೇಧ ತೆರವುಮಾಡಿದ ವಿಷಯಕ್ಕೆ ಸಂಬಂಧಿಸಿ ಯಾಕಾಗಿ ಪ್ರಚಾರ ಮಾಡಲಿಲ್ಲ? ಕನಿಷ್ಟಪಕ್ಷ ಈ ವಿಷಯವನ್ನು ಸರ್ಕಾರವೇ ಏಕೆ ಬಹಿರಂಗ ಪಡಿಸಲಿಲ್ಲ? ಇದನ್ನು ಬಿಜೆಪಿಯ ಮಾಧ್ಯಮ ವಿಭಾಗದ ಮೂಲಕವೇ ಏಕೆ ಬಹಿರಂಗಪಡಿಸಲಾಯಿತು? ಇಂತಹ ಪ್ರಶ್ನೆಗಳು ಮೂಡಿಬರುತ್ತವೆ.

ಆರೆಸ್ಸೆಸ್ ನಲ್ಲಿ ಏನಾದರೂ ಬದಲಾವಣೆಯಾಗಿದೆಯೇ?

1964ರ ಸೇವಾ ನಿಯಮಗಳ ಪ್ರಕಾರ ಕೇಂದ್ರ ಸರ್ಕಾರಿ ನೌಕರರು ಯಾವುದೇ ರಾಜಕೀಯ ಪಕ್ಷದ

ಪುಟ 6ಕ್ಕೆ

ದ್ವೇಷ ಮತ್ತು ಹಿಂಸಾಚಾರದ ಮೂಲಕ ರಾಷ್ಟ್ರದ ಸ್ವಾತಂತ್ರ್ಯವನ್ನು ಹಾಳುಮಾಡುವ?

ಗೃಹ ವ್ಯವಹಾರಗಳ ಸಚಿವಾಲಯದ ದಾಖಲೆಗಳಲ್ಲಿ ಲಭ್ಯವಿರುವ ಸಂವಹನದ ಕೆಲವು ಅಂಶಗಳು ಹೀಗಿವೆ:

ಫೆಬ್ರವರಿ 2, 1948 ರ ಅವರ ನಿರ್ಣಯದಲ್ಲಿ, ಭಾರತ ಸರ್ಕಾರವು "ನಮ್ಮ ದೇಶದಲ್ಲಿ ಕೆಲಸ ಮಾಡುತ್ತಿರುವ ದ್ವೇಷ ಮತ್ತು ಹಿಂಸಾಚಾರದ ಮೂಲಕ ರಾಷ್ಟ್ರದ ಸ್ವಾತಂತ್ರ್ಯವನ್ನು ಹಾಳುಮಾಡುವ ಮತ್ತು ಭಾರತದ ನ್ಯಾಯಯುತ ಹೆಸರನ್ನು ಹಾಳುಮಾಡುವ ಶಕ್ತಿಗಳನ್ನು ಬೇರುಸಹಿತ ಕಿತ್ತೊಗೆಯಲು ಸಂಕಲ್ಪವನ್ನು ಘೋಷಿಸಿತು. ಈ ನೀತಿಯ ಅನುಸಾರವಾಗಿ ಭಾರತ ಸರ್ಕಾರವು ಮುಖ್ಯ ಆಯುಕ್ತರ ಪ್ರಾಂತ್ಯಗಳಲ್ಲಿ ರಾಷ್ಟ್ರೀಯ ಸ್ವಯಂಸೇವಕ ಸಂಘವನ್ನು ಕಾನೂನುಬಾಹಿರವೆಂದು ಘೋಷಿಸಲು ನಿರ್ಧರಿಸಿದೆ. ರಾಜ್ಯಪಾಲರ ಪ್ರಾಂತ್ಯಗಳಲ್ಲಿಯೂ ಇದೇ ರೀತಿಯ ಕ್ರಮ ಕೈಗೊಳ್ಳಲಾಗುತ್ತಿದೆ.

ಅನಪೇಕ್ಷಿತ ಮತ್ತು ಅಪಾಯಕಾರಿ ಚಟುವಟಿಕೆಗಳನ್ನು ಸಂಘದ ಸದಸ್ಯರು ನಡೆಸುತ್ತಿದ್ದಾರೆ. ದೇಶದ ಹಲವಾರು ಭಾಗಗಳಲ್ಲಿ ರಾಷ್ಟ್ರೀಯ ಸ್ವಯಂಸೇವಕ ಸಂಘದ ವೈಯಕ್ತಿಕ ಸದಸ್ಯರು ಬೆಂಕಿ ಹಚ್ಚುವಿಕೆ, ದರೋಡೆ, ಡಕಾಯಿತಿ ಮತ್ತು ಕೊಲೆಗಳನ್ನು ಒಳಗೊಂಡ ಹಿಂಸಾಚಾರದಲ್ಲಿ ತೊಡಗಿದ್ದಾರೆ ಮತ್ತು ಅಕ್ರಮ ಶಸ್ತ್ರಾಸ್ತ್ರ ಮತ್ತು ಮದ್ದುಗುಂಡುಗಳನ್ನು ಸಂಗ್ರಹಿಸಿದ್ದಾರೆ ಎಂದು ಕಂಡುಬಂದಿದೆ. ಭಯೋತ್ಪಾದಕ ವಿಧಾನಗಳನ್ನು ಆಶ್ರಯಿಸಲು, ಬಂದೂಕುಗಳನ್ನು ಸಂಗ್ರಹಿಸಲು, ಸರ್ಕಾರದ ವಿರುದ್ಧ ಅಸಮಾಧಾನವನ್ನು ಸೃಷ್ಟಿಸಲು ಮತ್ತು ಪೊಲೀಸ್ ಮತ್ತು ಮಿಲಿಟರಿಯನ್ನು ವಶಪಡಿಸಿಕೊಳ್ಳಲು ಜನರನ್ನು ಉತ್ತೇಜಿಸುವ ಕರಪತ್ರಗಳನ್ನು ಅವರು ಪ್ರಸಾರ ಮಾಡುತ್ತಿರುವುದು ಕಂಡುಬಂದಿದೆ. ಈ ಚಟುವಟಿಕೆಗಳನ್ನು ಗೌಪ್ಯತೆಯ ಹೊದಿಕೆಯಡಿಯಲ್ಲಿ ನಡೆಸಲಾಗಿದೆ ಮತ್ತು ಸಂಘವನ್ನು ತನ್ನ ಸಾಂಸ್ಥಿಕ ಸಾಮರ್ಥ್ಯದಲ್ಲಿ ವ್ಯವಹರಿಸಲು ಈ ಚಟುವಟಿಕೆಗಳು ಎಷ್ಟು ಹೊಣೆಗಾರಿಕೆಯನ್ನು ನೀಡುತ್ತವೆ ಎಂಬುದನ್ನು ಸರ್ಕಾರವು ಕಾಲಕಾಲಕ್ಕೆ ಪರಿಗಣಿಸಿದೆ.

....ಸಂಘದ ಆಕ್ಷೇಪಾರ್ಹ ಮತ್ತು ಹಾನಿಕಾರಕ ಚಟುವಟಿಕೆಗಳು ನಿರಂತರವಾಗಿ ಮುಂದುವರೆದಿವೆ ಮತ್ತು ಸಂಘದ ಚಟುವಟಿಕೆಗಳಿಂದ ಪ್ರಾಯೋಜಿತ ಮತ್ತು ಪ್ರೇರಿತವಾದ ಹಿಂಸಾಚಾರದ ಆರಾಧನೆಯು ಅನೇಕ ಬಲಿಪಶುಗಳನ್ನು ಹೊಂದಿದೆ. ಇತ್ತೀಚಿನ ಮತ್ತು ಅತ್ಯಂತ ಅಮೂಲ್ಯವಾದದ್ದು ಗಾಂಧೀಜಿಯೇ.

ಈ ಪರಿಸ್ಥಿತಿಯಲ್ಲಿ ಉಗ್ರ ಸ್ವರೂಪದಲ್ಲಿ ಮತ್ತೆ ಕಾಣಿಸಿಕೊಳ್ಳುತ್ತಿರುವ ಹಿಂಸಾಚಾರವನ್ನು ತಡೆಯಲು ಪರಿಣಾಮಕಾರಿ ಕ್ರಮಗಳನ್ನು ಕೈಗೊಳ್ಳುವುದು ಸರ್ಕಾರದ ಬದ್ಧ ಕರ್ತವ್ಯವಾಗಿದೆ ಮತ್ತು ಈ ನಿಟ್ಟಿನಲ್ಲಿ ಮೊದಲ ಹೆಜ್ಜೆಯಾಗಿ ಸಂಘವನ್ನು ಕಾನೂನುಬಾಹಿರ ಸಂಘವೆಂದು ಘೋಷಿಸಲು ನಿರ್ಧರಿಸಿದೆ."

ಸರ್ಕಾರಿ ನೌಕರರಿಗೆ ಆರ್.ಎಸ್.ಎಸ್. ಸೇರಲು ಅವಕಾಶ.....

ಪುಟ 5 ರಿಂದ

ಸದಸ್ಯರಾಗಬಾರದು. ಅಷ್ಟೇ ಅಲ್ಲ. ರಾಜಕೀಯ ಚಟುವಟಿಕೆಗಳಿಗೆ ಅನುಕೂಲವಾಗುವ ಯಾವುದೇ ಆಂದೋಲನದಲ್ಲಿ ತೊಡಗಬಾರದು. ನವೆಂಬರ್ 30, 1966 ರಂದು, ಈ ನಿಬಂಧನೆಗಳನ್ನು ಆಧರಿಸಿ, ಕೇಂದ್ರ ಸರ್ಕಾರವು RSS ಮತ್ತು ಜಮಾತ್-ಎ-ಇಸ್ಲಾಮಿ ವಿರುದ್ಧ ಈ ನಿಷೇಧದ ಆದೇಶವನ್ನು ಹೊರಡಿಸಿತು. 1970 ಮತ್ತು 1980 ರ ದಶಕದಲ್ಲಿ ಕೇಂದ್ರವು ಈ ನಿರ್ದೇಶನಗಳಿಗೆ ಹೆಚ್ಚಿನ ಸ್ಪಷ್ಟೀಕರಣಗಳನ್ನು ನೀಡಿತು. ಇದೀಗ ಮೋದಿ ಸರಕಾರ ಆರೆಸ್ಸೆಸ್ ಅನ್ನು ಈ ಪಟ್ಟಿಯಿಂದ ಹೊರಗಿಟ್ಟಿದೆ. ಈ ನಿರ್ಧಾರಕ್ಕೆ ಕಾರಣಗಳೇನು? ಆರೆಸ್ಸೆಸ್ ನಲ್ಲಿ ಏನಾದರೂ ಬದಲಾವಣೆಯಾಗಿದೆಯೇ? ಜನರ ನಡುವೆ ಒಡಕನ್ನು ಉಂಟುಮಾಡಿ ರಾಜಕೀಯ ಅಧಿಕಾರ ಪಡೆಯುವ ಅದರ ತಂತ್ರ ಬದಲಾಗಿದೆಯೇ? ಖಂಡಿತಾ ಬದಲಾಗಿಲ್ಲ.

1948ರಲ್ಲಿ ಮಹಾತ್ಮ ಗಾಂಧೀಜಿಯವರ ಹತ್ಯೆ ಮತ್ತು 1992ರಲ್ಲಿ ಬಾಬರಿ ಮಸೀದಿ ಧ್ವಂಸದ ಸಂದರ್ಭದಲ್ಲಿ ದ್ವೇಷದ ವಿಷವನ್ನು ಹರಡಿದ ಕೆಟ್ಟ ಸಿದ್ಧಾಂತಕ್ಕೆ ಆರೆಸ್ಸೆಸ್ ಇಂದಿಗೂ ಬದ್ಧವಾಗಿದೆ. ನಿಜವಾಗಿ ಹೇಳಬೇಕೆಂದರೆ ಅದು ಅಂದಿಗಿಂತ ಇಂದು ಹೆಚ್ಚು ಅಪಾಯಕಾರಿಯಾಗಿ ಪರಿಣಮಿಸಿದೆ. ಹತ್ತು ವರ್ಷಗಳ ಅಧಿಕಾರದ ಅವಧಿಯಲ್ಲಿ ಕೋಮು ವಿಷಬೀಜ ಬಿತ್ತುವ ವಿಷಯಗಳನ್ನು ಪಠ್ಯಪುಸ್ತಕಗಳು ಮತ್ತು ಚಲನಚಿತ್ರ ಕಥೆಗಳಲ್ಲಿ ಸೇರಿಸಲಾಗಿದೆ. ಇದರಿಂದ ಜನರು ತಮ್ಮ ನೆರೆಹೊರೆಯವರ ಬಗ್ಗೆ ಅನುಮಾನ ವ್ಯಕ್ತಪಡಿಸುವಂತಾಗಿದೆ. ಇಂತಹ ಅಪಾಯವಿದ್ದರೂ ಆರೆಸ್ಸೆಸ್ ನಲ್ಲಿ ಯಾವ ಬದಲಾವಣೆಯಾಗಿದೆ ಎಂದು ಮೋದಿ ಸರ್ಕಾರ ಈ ನಿರ್ಧಾರ ಕೈಗೊಂಡಿದೆ? ಸರ್ಕಾರಿ ನೌಕರರು ಆರ್‌ಎಸ್‌ಎಸ್‌ಗೆ ಮಾತ್ರವಲ್ಲದೆ ಜಮಾತ್-ಎ-ಇಸ್ಲಾಮಿಗೆ ಸೇರುವುದನ್ನೂ ನಿಷೇಧಿಸಲಾಯಿತು. ಆದರೆ ಈಗ ಕೇಂದ್ರ ಸರ್ಕಾರ ಆರ್‌ಎಸ್‌ಎಸ್ ಮೇಲಿನ ಆ ನಿಷೇಧವನ್ನು ಮಾತ್ರ ತೆಗೆದುಹಾಕಿದೆ.

ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಲಿಲ್ಲ

1925ರ ಸೆಪ್ಟೆಂಬರ್ ನಲ್ಲಿ ವಿಜಯದಶಮಿಯಂದು ಆರ್‌ಎಸ್‌ಎಸ್ ಸ್ಥಾಪನೆಯಾಯಿತು. ಅದು ರಾಷ್ಟ್ರೀಯ ಆಂದೋಲನ ತೀವ್ರ ಸ್ವರೂಪ ಪಡೆದಿದ್ದ ಸಂದರ್ಭ. ಅಂತಹ ಸಂದರ್ಭದಲ್ಲಿ ರೂಪುಗೊಂಡ ಈ ಸಂಘಟನೆಯ ಉದ್ದೇಶ ಸ್ವಾತಂತ್ರ್ಯ ಹೋರಾಟವನ್ನು ತೀವ್ರಗೊಳಿಸುವುದಾಗಿರಲಿಲ್ಲ. ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸದೇ ಇರುವುದೇ ಇದಕ್ಕೆ ಸಾಕ್ಷಿ. ಜಾತಿ ಮತ್ತು ಧರ್ಮ, ಭಾರತೀಯ ರಾಷ್ಟ್ರೀಯತೆ ಮತ್ತು ಅದರ ಭಾಗವಾಗಿದ್ದ ಜಾತ್ಯತೀತ ಮತ್ತು ಪ್ರಜಾಪ್ರಭುತ್ವದ ಪರಿಕಲ್ಪನೆಗಳನ್ನು ಮೀರಿದ ಭಾರತೀಯ ಸ್ವಾತಂತ್ರ್ಯ ಹೋರಾಟವನ್ನು ಆರೆಸ್ಸೆಸ್ ಮೊದಲಿನಿಂದಲೂ ವಿರೋಧಿಸುತ್ತಾ ಬಂದಿದೆ. ಅದು ಮೂಲ ಭಾರತೀಯ ರಾಷ್ಟ್ರೀಯತೆಯಿಂದ ದೂರವಾಗುತ್ತಲೇ, ಹಿಂದೂ ರಾಷ್ಟ್ರೀಯತೆಯನ್ನು ಪೋಷಿಸಿತು. ಅಷ್ಟಕ್ಕೇ ನಿಲ್ಲದೆ ಮುಸ್ಲಿಮರು ಮತ್ತು ಕ್ರೈಸ್ತರನ್ನು ಗುರಿಯಾಗಿಸಿಕೊಂಡು ಅವರ ವಿರುದ್ಧ ದ್ವೇಷವನ್ನು ಹುಟ್ಟುಹಾಕಿತು.

ಮೊದಲ ಬಾರಿಗೆ ಪಟೇಲ್ ರಿಂದ ಆರೆಸ್ಸೆಸ್ ನಿಷೇಧ

ಆರೆಸ್ಸೆಸ್ ಅನ್ನು ಇದುವರೆಗೆ ಮೂರು ಬಾರಿ ನಿಷೇಧಿಸಲಾಗಿತ್ತು. ಮೊದಲ ಬಾರಿಗೆ 1948ರಲ್ಲಿ ಮಹಾತ್ಮ ಗಾಂಧಿಯವರ ಹತ್ಯೆಯ ನಂತರ, ಎರಡನೆಯ ಬಾರಿಗೆ 1975-77ರ ತುರ್ತುಪರಿಸ್ಥಿತಿ ಸಂದರ್ಭದಲ್ಲಿ. ಮೂರನೆಯ ಬಾರಿಗೆ 1992ರಲ್ಲಿ ಬಾಬರಿ ಮಸೀದಿ ಧ್ವಂಸದ ಸಂದರ್ಭದಲ್ಲಿ. ಮಹಾತ್ಮ ಗಾಂಧಿಯವರನ್ನು ಆರೆಸ್ಸೆಸ್ ಸದಸ್ಯನಾಗಿದ್ದ ನಾಥೂರಾಮ್ ಗೋಡ್ಸೆ ಹತ್ಯೆ ಮಾಡಿದ ಮೂರು ದಿನಗಳ ನಂತರ, ಫೆಬ್ರವರಿ 4, 1948 ರಂದು, ಭಾರತದ ಮೊದಲ ಉಪಪ್ರಧಾನಿ ಮತ್ತು ಗೃಹ ಸಚಿವ ಸರ್ದಾರ್ ವಲ್ಲಭಭಾಯಿ ಪಟೇಲ್ ಅವರು ಆರೆಸ್ಸೆಸ್ ಅನ್ನು ಮೊದಲ ಬಾರಿಗೆ ನಿಷೇಧಿಸಿದರು. ಭಾರತ ಸರ್ಕಾರವು ಫೆಬ್ರವರಿ 2, 1948 ರ ತನ್ನ ನಿರ್ಣಯದಲ್ಲಿ, "ನಮ್ಮ ದೇಶದಲ್ಲಿ ಕೆಲಸ ಮಾಡುತ್ತಿರುವ ದ್ವೇಷ ಮತ್ತು ಹಿಂಸಾಚಾರವು ರಾಷ್ಟ್ರದ ಸ್ವಾತಂತ್ರ್ಯವನ್ನು ಹಾಳುಮಾಡುವ ಮತ್ತು ಭಾರತದ ನ್ಯಾಯಯುತ ಹೆಸರನ್ನು ಕತ್ತಲೆಗೊಳಿಸುವ ಶಕ್ತಿಗಳನ್ನು ಬೇರುಸಹಿತ ಕಿತ್ತೊಗೆಯಲು ಸಂಕಲ್ಪ ಮಾಡುತ್ತದೆ" ಎಂದು ಘೋಷಿಸಿತು

ಆರೆಸ್ಸೆಸ್ ಹಿಂದೂ ಮಹಾಸಭಾದ "ಉಗ್ರವಾದಿ ವಿಭಾಗ" ಎಂದು ನಂಬಿದ್ದ ಪಟೇಲ್ ಅವರು "ಸರ್ಕಾರ ಮತ್ತು ಪ್ರಭುತ್ವದ ಅಸ್ತಿತ್ವಕ್ಕೆ ಸ್ಪಷ್ಟ ಬೆದರಿಕೆಯನ್ನು ರಚಿಸಿದ್ದಾರೆ..." ಎಂದಿದ್ದರು. ನಂತರ ಸೆಪ್ಟೆಂಬರ್ ತಿಂಗಳಲ್ಲಿ ಆರೆಸ್ಸೆಸ್ ಮುಖ್ಯಸ್ಥ ಎಂ.ಎಸ್.ಗೋಲ್ವಾಲ್ಕರ್ ಅವರಿಗೆ ಬರೆದ ಪತ್ರದಲ್ಲಿ, ಆರೆಸ್ಸೆಸ್ ಕಾರ್ಯಕರ್ತರು ಮತ್ತು ನಾಯಕರ ಭಾಷಣಗಳು "ಕೋಮು ವಿಷದಿಂದ ತುಂಬಿವೆ", ಅದಕ್ಕಾಗಿಯೇ ಗಾಂಧಿ ಕೊಲ್ಲಲ್ಪಟ್ಟರು ಎಂದು ಬರೆದಿದ್ದರು

ಒಂದು ವರ್ಷದ ನಂತರ, ಜುಲೈ 11, 1949 ರಂದು, ಗೋಲ್ವಾಲ್ಕರ್ ಅವರು, ಸಂವಿಧಾನ ಮತ್ತು ರಾಷ್ಟ್ರಧ್ವಜಕ್ಕೆ ನಿಷ್ಠರಾಗಿರಲು ಮತ್ತು ಸಾಮಾಜಿಕ ಮತ್ತು ಸಾಂಸ್ಕೃತಿಕ ಸಂಘಟನೆಯಾಗಿ ಉಳಿಯಲು ಅದರ ರಾಜಕೀಯ ಕೆಲಸವನ್ನು ನಿಲ್ಲಿಸುವುದಾಗಿ ಭರವಸೆ ನೀಡಿದ ನಂತರ ಆರೆಸ್ಸೆಸ್ ಮೇಲಿನ ನಿಷೇಧವನ್ನು ತೆಗೆದುಹಾಕಲಾಯಿತು.

ಜುಲೈ 18, 1948 ರಂದು ಪಟೇಲ್ ರವರು ಹಿಂದೂ ಮಹಾಸಭಾದ ನಾಯಕ ಶ್ಯಾಮ ಪ್ರಸಾದ್ ಮುಖರ್ಜಿ ಅವರಿಗೆ ಬರೆದ ಪತ್ರದಲ್ಲಿ, "ಹಿಂದೂ ಮಹಾಸಭಾದ ತೀವ್ರವಾದಿ ವಿಭಾಗವು [ಗಾಂಧಿ ಕೊಲ್ಲುವ] ಪಿತೂರಿಯಲ್ಲಿ ಭಾಗಿಯಾಗಿದೆ ಎಂಬುದರಲ್ಲಿ ನನ್ನ ಮನಸ್ಸಿನಲ್ಲಿ ಯಾವುದೇ ಸಂದೇಹವಿಲ್ಲ. ಆರೆಸ್ಸೆಸ್ ಚಟುವಟಿಕೆಗಳು ಸರ್ಕಾರ ಮತ್ತು ರಾಜ್ಯದ ಅಸ್ತಿತ್ವಕ್ಕೆ ಸ್ಪಷ್ಟ ಅಪಾಯವನ್ನುಂಟುಮಾಡಿವೆ. ನಿಷೇಧದ ಹೊರತಾಗಿಯೂ ಆ ಚಟುವಟಿಕೆಗಳು ಕಡಿಮೆಯಾಗಿಲ್ಲ ಎಂದು ನಮ್ಮ ವರದಿಗಳು ತೋರಿಸುತ್ತವೆ. ವಾಸ್ತವವಾಗಿ, ಸಮಯ ಕಳೆದಂತೆ, ಆರೆಸ್ಸೆಸ್ ವಲಯಗಳು ಹೆಚ್ಚು ಧಿಕ್ಕರಿಸುತ್ತಿವೆ ಮತ್ತು ಹೆಚ್ಚುತ್ತಿರುವ ಕ್ರಮದಲ್ಲಿ ತಮ್ಮ ವಿಧ್ವಂಸಕ ಚಟುವಟಿಕೆಗಳಲ್ಲಿ ತೊಡಗಿವೆ." ಎಂದು ಆರೋಪಿಸಿದರು.

ಸಮಾಜಕ್ಕೆ ದೊಡ್ಡ ಅಪಾಯ ಎದುರಾಗಲಿದೆ

ಮೋದಿ ಸರ್ಕಾರದ ಇಂದಿನ ನಿರ್ಧಾರದಿಂದಾಗಿ ಜಾತಿ, ಧರ್ಮದ ಭೇದ ಮರೆತು ತಟಸ್ಥವಾಗಿ ಕಾರ್ಯನಿರ್ವಹಿಸಬೇಕಾದ ಸರಕಾರಿ ನೌಕರರು ಆರೆಸ್ಸೆಸ್ ಚಟುವಟಿಕೆಗಳಲ್ಲಿ ಬಹಿರಂಗವಾಗಿ ತೊಡಗಲು ಅನುಕೂಲವಾಗಿದೆ. ಸರ್ಕಾರಿ ನೌಕರರು ಧಾರ್ಮಿಕ ಪ್ರಜ್ಞೆ ಮತ್ತು ಧಾರ್ಮಿಕ ತಾರತಮ್ಯದಿಂದ ಕಾರ್ಯನಿರ್ವಹಿಸಲು ಅನುಕೂಲವಾಗುತ್ತದೆ. ಸರ್ಕಾರಿ ಯಂತ್ರವನ್ನು ಹಿಂದುತ್ವ ಮಾಡುವ ಉದ್ದೇಶದಿಂದ ಮೋದಿ ಸರ್ಕಾರ ಇಂತಹ ಕ್ರಮ ಕೈಗೊಂಡಿದೆ. ಆ ಮೂಲಕ ಆರೆಸ್ಸೆಸ್‌ನ ಪ್ರಮುಖ ಗುರಿಯಾದ 'ಹಿಂದೂ ರಾಷ್ಟ್ರ' ನಿರ್ಮಾಣದ ಗುರಿಯ ಕಡೆಗೆ ಹೆಜ್ಜೆ ಹಾಕತೊಡಗಿದೆ. ಸಂವಿಧಾನದತ್ತವಾಗಿ ಜವಾಬ್ದಾರಿ ನಿರ್ವಹಿಸುತ್ತಿರುವ ಸರ್ಕಾರಿ ನೌಕರರು ಧಾರ್ಮಿಕ ಸಿದ್ಧಾಂತದ ಮೂಲಕ ನಡೆಯುವ ಆರ್‌ಎಸ್‌ಎಸ್ ಚಟುವಟಿಕೆಗಳಲ್ಲಿ ಭಾಗವಹಿಸಿದರೆ ಅದು ದೇಶಕ್ಕೆ ಅತ್ಯಂತ ಅಪಾಯಕಾರಿ. ಇದು ನಮ್ಮ ಸಂವಿಧಾನದ ಆಶಯಗಳಿಗೆ ವಿರುದ್ಧವಾದುದಾಗಿದೆ. ಇದನ್ನು ಎದುರಿಸಲು ಎಡ, ಪ್ರಜಾಸತ್ತಾತ್ಮಕ ಮತ್ತು ಜಾತ್ಯಾತೀತ ಶಕ್ತಿಗಳು ಹಿಂದೆಂದಿಗಿಂತಲೂ ಹೆಚ್ಚಾಗಿ ಇಂದು ಪಣತೊಡಬೇಕಿದೆ.

ರಾಜ್ಯಪಾಲರ ಕಚೇರಿಯ ದುರ್ಬಳಕೆಗೆ..........

ಪುಟ 3 ರಿಂದ

ಮಸಿ ಬಳಿಯುವಂತೆ ಮಾಡುವ ಕೆಲಸಗಳಿಗೆ ತಾನು ನೇಮಿಸುವ ರಾಜ್ಯಪಾಲರ ಕಚೇರಿಗಳನ್ನು ಬಿಜೆಪಿ ನೇತೃತ್ವದ ಕೇಂದ್ರ ಸರಕಾರ ಎಳ್ಳಷ್ಟೂ ಸಂಕೋಚವಿಲ್ಲದೇ ಬಳಕೆ ಮಾಡಿಕೊಳ್ಳುತ್ತಿರುವುದು ಈಗಾಗಲೇ ಜಗಜ್ಜಾಹೀರಾಗಿದೆ. ಕರ್ನಾಟಕದ ರಾಜ್ಯಪಾಲರ ಕಚೇರಿಯೂ ಈಗ ಅಧಿಕೃತವಾಗಿ ಈ ಸಾಲಿಗೆ ಬಂದಂತೆ ನಡೆದುಕೊಳ್ಳುತ್ತಿರುವುದು ಪ್ರಜಾಪ್ರಭುತ್ವದ ಆರೋಗ್ಯದ ದೃಷ್ಟಿಯಿಂದ ಖಂಡಿತ ಒಳ್ಳೆಯ ಬೆಳವಣಿಗೆ ಅಲ್ಲ. ಬದಲಾಗಿ ಮಸಿ ಬಳಿಯುವಂತಹದ್ದು.

ಈ ವಿಷಯದಲ್ಲಿ ರಾಜ್ಯ ಸಚಿವ ಸಂಪುಟವು ಮುಖ್ಯಮಂತ್ರಿಗಳ ಗೈರು ಹಾಜರಿಯಲ್ಲಿ ಸಭೆ ಸೇರಿ ರಾಜ್ಯಪಾಲರು ತಮ್ಮ ಶೋಕಾಸ್ ನೋಟಿಸ್ ಅನ್ನು ವಾಪಸ್ ಪಡೆಯಬೇಕೆಂದು ಅವರಿಗೆ ಸಲಹೆ ನೀಡಲು ತೀರ್ಮಾನಿಸಿದೆ. ಮುಡಾ ನಿವೇಶನ ಹಂಚಿಕೆಯಲ್ಲಿ ಯಾರೇ ಆಗಲಿ ಅಕ್ರಮ, ಭ್ರಷ್ಟಾಚಾರ ನಡೆಸಿದ್ದಲ್ಲಿ ಆ ಬಗೆಗೆ ತನಿಖೆಯಾಗಬೇಕು. ಕಠಿಣವಾದ ಶಿಕ್ಷೆಯಾಗಬೇಕು. ಆದರೆ ರಾಜ್ಯಗಳಲ್ಲಿರುವ ವಿರೋಧ ಪಕ್ಷಗಳ ಸರಕಾರಗಳನ್ನು ಹಣಿಯಲು ಸದಾಕಾಲ ಹೊಂಚು ಹಾಕುತ್ತಿರುವ ಪ್ರಜಾಪ್ರಭುತ್ವ ವಿರೋಧಿ ಮತ್ತು ಒಕ್ಕೂಟತತ್ವ ವಿರೋಧಿಯಾದ ಬಿಜೆಪಿಯ ದುಷ್ಟ ಹುನ್ನಾರಗಳಿಗೆ ಅವಕಾಶವಾಗದಂತೆ ಜನತೆ ಎಚ್ಚರ ವಹಿಸಬೇಕಾದ ಅಗತ್ಯವೂ ಇದೆ. ನೇಮಕಗೊಂಡಿರುವ ಆಯೋಗ ತನ್ನ ವಿಚಾರಣೆ ತೀವ್ರಗೊಳಿಸಲಿ.

ಈ ನಿಟ್ಟಿನಲ್ಲಿ ಜನರ ಮುಂದೆ ವಾಸ್ತವಿಕ ಸತ್ಯಗಳನ್ನು ಇರಿಸುವ ಕೆಲಸವನ್ನು ಒಂದು ರಾಜಕೀಯ ಪಕ್ಷವಾಗಿ ಕಾಂಗ್ರೆಸ್ ಕೈಗೊಳ್ಳಲಿ. ವಿರೋಧ ಪಕ್ಷಗಳ ಸರ್ಕಾರಗಳನ್ನ ಅಸ್ಥಿರಗೊಳಿಸಿ ಉರುಳಿಸುವ ದುಷ್ಟ ಆಟವನ್ನು ಬಿಜೆಪಿ ಮತ್ತು ಕೇಂದ್ರ ಸರ್ಕಾರ ಕೈಬಿಡಲಿ.

ಲೋಕಸಭಾ ಚುನಾವಣೆ ನಡೆದ ನಂತರದಲ್ಲಿ ಈ ಸರ್ಕಾರ ಉರುಳಿ ಹೋಗುತ್ತೆ ಎಂಬ ಮಾತುಗಳನ್ನು ಬಿಜೆಪಿ ನಾಯಕರು ಚುನಾವಣೆಗೂ ಮೊದಲೇ ಅಬ್ಬರದಲ್ಲಿ ಆಡುತ್ತಿದ್ದರು ಎನ್ನುವುದನ್ನು ಮರೆಯಲಾಗುವುದಿಲ್ಲ. ಮತ್ತು ಈ ಸರ್ಕಾರವನ್ನು ಉರುಳಿಸಲು ಕಾಂಗ್ರೆಸ್ ಒಳಗಿನ ಗುಂಪುಗಾರಿಕೆಯನ್ನು ಬಳಸಲು ಅವರು ಯತ್ನಿಸಿದ್ದರು ಕೂಡ. ಸದನದ ಹೊರಗೆ ಮತ್ತು ಒಳಗೆ ಪ್ರಜಾಸತ್ತಾತ್ಮಕ ರೀತಿಯಲ್ಲಿ ಚರ್ಚೆಗಳನ್ನು ನಡೆಸಿ, ಸಾಧ್ಯವಿರುವ ಕ್ರಮಗಳನ್ನು ಕೈಗೊಂಡ ಬಳಿಕವೂ ಪ್ರಾಮಾಣಿಕವಾಗಿ ವಿಷಯಗಳನ್ನು ಪರಿಗಣಿಸುವ ಯಾವ ಇಚ್ಛೆಯನ್ನು ತೋರಿಸದ ಬಿಜೆಪಿ ಮತ್ತು ಜೆಡಿಎಸ್ ಗಳು ಇದೀಗ ನೇರವಾಗಿ ರಾಜ್ಯಪಾಲರ ಅಧಿಕಾರವನ್ನು ದುರ್ಬಳಕೆ ಮಾಡಲು ಹೊರಟಿವೆ. ಮೈಸೂರಿನ ಮುಡಾದಲ್ಲಿ ನಡೆದಿದೆ ಎನ್ನಲಾದ ಒಟ್ಟು ಹಗರಣದಲ್ಲಿ ಜೆಡಿಎಸ್ ಮತ್ತು ಬಿಜೆಪಿ ನಾಯಕರುಗಳು ನಡೆಸಿರುವ ಅಕ್ರಮಗಳು ಹೊರ ಬರುತ್ತಿವೆ. ವಿಚಾರಣೆಯಲ್ಲಿ ಇದೆಲ್ಲವೂ ಬಯಲಾಗಬಹುದು ಎನ್ನುವ ಭೀತಿಯನ್ನು ಬಿಜೆಪಿ ಮತ್ತು ಜೆಡಿಎಸ್ ನಾಯಕರನ್ನು ಕಾಡುತ್ತಿದೆ. ಹಾಗಾಗಿ ಯಾವುದೇ ಸೂಕ್ತ ಕ್ರಮಗಳನ್ನು ಒಪ್ಪದೇ ಪಾದಯಾತ್ರೆ ಅಂತಹ ಬೀದಿರಂಪಾಟದ ತನ್ನ ರಾಜಕೀಯ ಬೇಳೆ ಬೇಯಿಸಿಕೊಳ್ಳಲು, ಸರ್ಕಾರವನ್ನೇ ಉರುಳಿಸಲು ಹೆಣಗುತ್ತಿವೆ. ಬಂದ ಎಲ್ಲಾ ಆರೋಪಗಳ ವಿಷಯಗಳ ಬಗ್ಗೆ ವಿಚಾರಣೆಗಾಗಿ ಆಯೋಗವನ್ನು ರಚಿಸಿದ ನಂತರವೂ ಈ ಕ್ರಮಗಳನ್ನು ಅನುಸರಿಸುತ್ತಿರುವುದು ಸರ್ವಥಾ ಸಮರ್ಥನೀಯವಲ್ಲ, ಸೂಕ್ತವಲ್ಲ. ಇವೇ ಬಿಜೆಪಿ ಜೆಡಿಎಸ್ ಪಕ್ಷಗಳ ದುರುದ್ದೇಶವನ್ನು ಎತ್ತಿ ತೋರಿಸುತ್ತದೆ.

ಇದೊಂದು ವಿರೋಧ ಪಕ್ಷಗಳ ಪ್ರಜಾಸತ್ತಾತ್ಮಕವಾಗಿ ಆಯ್ಕೆಯಾದ ರಾಜ್ಯ ಸರಕಾರಗಳನ್ನು ಅಸ್ಥಿರಗೊಳಿಸುವ ರಾಜಕೀಯ ನಡೆ. ರಾಜ್ಯಪಾಲರ ಕಚೇರಿಯನ್ನು ಬಿಜೆಪಿ ದುರ್ಬಳಕೆ ಮಾಡಿರುವುದು ಇದೇ ಮೊದಲೇನಲ್ಲ. ಈ ಹಿಂದೆ ಯಡಿಯೂರಪ್ಪರವರಿಗೆ ಸರಕಾರ ರಚಿಸಲು ಬಹುಮತವಿಲ್ಲದಿದ್ದರೂ ಅವಕಾಶ ಮಾಡಿಕೊಡಲಾಗಿತ್ತು. ಅಂದು ಕಾಂಗ್ರೆಸ್ ಹಾಗೂ ಜೆಡಿಎಸ್ ಪಕ್ಷಗಳು ಬಿಜೆಪಿಗೆ ಬೆಂಬಲ ನೀಡುವುದಿಲ್ಲವೆಂದು ಘೋಷಿಸಿದ್ದವು ಮತ್ತು ಬಿಜೆಪಿಗೆ ಬಹುಮತಕ್ಕೆ ಯಾವುದೇ ಪಾರದರ್ಶಕ ಬೆಂಬಲವಿರಲಿಲ್ಲ. ವಿಧಾನಸಭೆಯಲ್ಲಿ ಬಹುಮತ ಸಾಬೀತು ಪಡಿಸಲು ಸಾಕಷ್ಟು ಕಾಲಾವಕಾಶ ನೀಡುವ, ಆ ಮೂಲಕ ವಿರೋಧ ಪಕ್ಷಗಳ ಸದಸ್ಯರನ್ನು ಸೆಳೆಯುವ ಹುನ್ನಾರಕ್ಕೆ ಅವಕಾಶ ನೀಡಲಾಗಿತ್ತು. ನಂತರ ಹೈಕೋರ್ಟ್ ಮಧ್ಯಪ್ರವೇಶದೊಂದಿಗೆ ಸಮಯ ಮಿತಿ ವಿಧಿಸಿದ್ದರಿಂದ ಅಂತಹವುಗಳಿಗೆ ಸಮಯ ದೊರೆಯದೆ ಬಿಜೆಪಿಯ ಕುತಂತ್ರ ಹಾಗೂ ರಾಜ್ಯಪಾಲರ ಕಛೇರಿಯ ದುರ್ಬಳಕೆ ಸೋಲಿಸಲ್ಪಟ್ಟುದು ಇದೀಗ ಇತಿಹಾಸ.

ರಾಜ್ಯಪಾಲರು ರಾಜ್ಯ ಸರಕಾರದ ಪ್ರತಿನಿಧಿಯೇ ಹೊರತು ಚುನಾಯಿತ ರಾಜ್ಯ ಸರಕಾರವನ್ನು ನಿಯಂತ್ರಿಸುವ ರಾಜ್ಯ ಸರಕಾರದ ಮೇಲಿನ ಉಸ್ತುವಾರಿಯಲ್ಲ, ಮೇಲಾಧಿಕಾರಿಯೂ ಅಲ್ಲ.

ಇಂತಹ ಸಂದರ್ಭದಲ್ಲಿ ರಾಜ್ಯದ ಜನತೆ ಬಿಜೆಪಿ-ಜೆಡಿಎಸ್ ಮೈತ್ರಿಕೂಟದ ದುಷ್ಟ ಆಟಗಳಿಗೆ ಅವಕಾಶವನ್ನು ಕೊಡಕೂಡದು ಮತ್ತು ಅದರ ವಿರುದ್ಧ ತೀವ್ರ ಪ್ರತಿರೋಧವನ್ನು ಒಡ್ಡಬೇಕು.

ಕರ್ನಾಟಕದ ಸಚಿವ ಸಂಪುಟ ರಾಜ್ಯಪಾಲರ ಶೋಕಾಸ್ ನೋಟೀಸನ್ನು ಹಿಂತೆಪಡೆಯುವಂತೆ ಕೋರಿರುವುದನ್ನು ಪರಿಗಣಿಸಿ, ಅವರು ಅಗತ್ಯ ಕ್ರಮ ವಹಿಸುವುದು ಈ ಹಂತದಲ್ಲಿಯೂ ವಹಿಸಬಹುದಾದ ಕನಿಷ್ಠ ಸೌಜನ್ಯದ ಗೌರವಾನ್ವಿತ ನಡೆ. ●



ಜನಗಣತಿ ನಡೆಸಲು ಹಿಂಜರಿಕೆ ಏಕೆ?

ಪ್ರಕಾಶ್ ಕಾರತ್

ಪ್ರತಿ ಹತ್ತು ವರ್ಷಗಳಿಗೆ ನಡೆಸಬೇಕಾಗಿದ್ದ ಜನಗಣತಿಯನ್ನು, 2021 ರಲ್ಲಿಯೇ ನಡೆಸಬೇಕಾಗಿತ್ತು. ಇಲ್ಲಿಯವರೆಗೆ ನಡೆಸಲಾಗಿಲ್ಲ ಏಕೆ? ಕೇಂದ್ರ ಬಜೆಟ್ 2024–25 ರಲ್ಲಿ, ಜನಗಣತಿ ನಡೆಸಲು ಯಾವುದೇ ಬಗೆಯ ಗಣನೀಯ ನಿಬಂಧನೆಯನ್ನು ಕೂಡ ಮಾಡಲಾಗಿಲ್ಲ. ಜಿಲ್ಲೆಗಳು, ತಾಲೂಕುಗಳು, ಬ್ಲಾಕ್ ಅಥವಾ ಗ್ರಾಮ ಮಟ್ಟಗಳಂತಹ ಆಡಳಿತಾತ್ಮಕ ಗಡಿಗಳ ಆಧಾರದ ಪ್ರಕಾರ ಜನಗಣತಿಯನ್ನು ನಡೆಸಲು ಅಗತ್ಯವಿರುವ ಆಡಳಿತಾತ್ಮಕ ಗಡಿಗಳನ್ನು ಜೂನ್ 2024 ರೊಳಗೆ ಮಾಡಲಾಗುತ್ತದೆ ಎಂಬ ಗಡುವನ್ನು ಕೇಂದ್ರವು ನೀಡಿತ್ತು. ಆ ದಿನವು ಮುಗಿದಿದೆ. ಹಾಗಾಗಿ ಈ ಗಡುವಿನ ದಿನವನ್ನು ಕೂಡ ಕೇಂದ್ರವು ಇನ್ನೂ ವಿಸ್ತರಿಸಿಲ್ಲವೇಕೆ?

ಹಾಗಾಗಿ 2020ರಲ್ಲಿ ಆರಂಭವಾಗಬೇಕಿದ್ದ 2021ರ ಜನಗಣತಿ ಅನಿರ್ದಿಷ್ಟವಾಗಿ ವಿಳಂಬವಾಗುತ್ತಿದೆ. ಆ ಸಮಯದಲ್ಲಿ, ಕೋವಿಡ್ ನಂತರವೇ ಜನಗಣತಿ ಕಾರ್ಯಾಚರಣೆಯನ್ನು ನಡೆಸಬಹುದು ಎಂದು ಸರ್ಕಾರ ಹೇಳಿತ್ತು, ಆದರೆ ಈಗ, ಮೂರು ವರ್ಷಗಳು ಕಳೆದು ಹೋಗಿವೆ. ಹೀಗಾಗಿ 2024 ರಲ್ಲೂ ಜನಗಣತಿ ನಡೆಯುವ ಯಾವುದೇ ಲಕ್ಷಣಗಳು ಕಾಣುತ್ತಿಲ್ಲ. ಕೋವಿಡ್ ನಂತರ ಜನಗಣತಿ ನಡೆಸಲಾಗದ ನಾಲ್ಕು ದೇಶಗಳಲ್ಲಿ ಭಾರತವು ಒಂದಾಗಿದೆ.

ಬ್ರಿಟಿಷರ ಆಳ್ವಿಕೆಯ ಕಾಲದಿಂದಲೂ ಪ್ರತಿ ಹತ್ತು ವರ್ಷಗಳಿಗೊಮ್ಮೆ ಜನಗಣತಿಯನ್ನು ತಪ್ಪದೆ ನಡೆಸಲಾಗುತ್ತಿದೆ. 1941 ರಲ್ಲಿ, ಎರಡನೆಯ ಮಹಾಯುದ್ಧದ ಸಮಯದಲ್ಲಿ, ಜನಗಣತಿಯನ್ನು ಮೊಟಕುಗೊಳಿಸಿದ ಆಧಾರದ ಮೇಲೆ ನಡೆಸಲಾಯಿತು. ಜನಗಣತಿಯು ಜನಸಂಖ್ಯೆಯ ಎಣಿಕೆಯನ್ನು ಮಾತ್ರವಲ್ಲದೆ, ಕುಟುಂಬದ ದತ್ತಾಂಶ, ಕೃಷಿಕ ವರ್ಗಗಳು ಮತ್ತು ಗ್ರಾಮೀಣ ಪ್ರದೇಶಗಳಲ್ಲಿನ ಕೃಷಿ ಕೂಲಿಕಾರರನ್ನು ಒಳಗೊಂಡಿರುವ ಸಮಗ್ರ ಡೇಟಾವನ್ನು ಸಹ ಒದಗಿಸುತ್ತದೆ. ಇದು ನಗರ–ಗ್ರಾಮೀಣ ಜನಸಂಖ್ಯೆ, ಭಾಷಾ–ಮಾತನಾಡುವ ಗುಂಪುಗಳು ಮತ್ತು ಪರಿಶಿಷ್ಟ ಜಾತಿಗಳು ಮತ್ತು ಪರಿಶಿಷ್ಟ ಪಂಗಡಗಳ ಬಗ್ಗೆ ಡೇಟಾವನ್ನು ಸಹ ಒದಗಿಸುತ್ತದೆ. ಹಾಗಾಗಿ, ಪ್ರತಿ ಹತ್ತು ವರ್ಷಗಳಿಗೆ ನಡೆಯುವ ಈ ಜನಗಣತಿ ಪ್ರಕ್ರಿಯೆಯು ಪ್ರಮುಖವಾಗಿದೆ.

ಈ ಡೇಟಾ ಸಂಪನ್ಮೂಲಗಳು ಎಲ್ಲಾ ಹಂತಗಳಲ್ಲಿ ನೀತಿ ಯೋಜಕರು ಮತ್ತು ನಿರ್ವಾಹಕರನ್ನು ವಿವಿಧ ವರ್ಗದ ಜನರ ಅಗತ್ಯತೆಗಳನ್ನು ಪೂರೈಸುವ ಹೊಸ ನೀತಿಗಳನ್ನು ರೂಪಿಸಿ ವಿನ್ಯಾಸಗೊಳಿಸಲು ಅನುವು ಮಾಡಿಕೊಡುತ್ತದೆ. ಉದಾಹರಣೆಗೆ, ರಾಷ್ಟ್ರೀಯ ಆಹಾರ ಭದ್ರತಾ ಕಾಯಿದೆಯ ಪ್ರಕಾರ, ಗ್ರಾಮೀಣ ಜನಸಂಖ್ಯೆಯ ಶೇಕಡಾ 75 ರಷ್ಟು ಮತ್ತು ನಗರ ಜನಸಂಖ್ಯೆಯ ಶೇಕಡಾ 50 ರಷ್ಟು ಜನರು ಕಾಯಿದೆಯ ಅಡಿಯಲ್ಲಿ ಒಳಗೊಳ್ಳುತ್ತಾರೆ. ಜನಗಣತಿ ಅಂಕಿಅಂಶಗಳ ಆಧಾರದಲ್ಲಿಯೇ ಸೌಲಭ್ಯಗಳನ್ನು ಇವರಿಗೆ ಒದಗಿಸಲಾಗುತ್ತದೆ. ಇದಲ್ಲದೆ, "ಸಂಬಂಧಿತ ಪ್ರಕಟಿಸಿದ ಅಂಕಿ ಅಂಶಗಳನ್ನು ಜನಗಣತಿಯ ಪ್ರಕಾರ ಜನಸಂಖ್ಯೆಯ ಆಧಾರದ ಅಂದಾಜಿನ ಮೇಲೆ ಲೆಕ್ಕ ಹಾಕಲಾಗುತ್ತದೆ". ಅದರಂತೆ, 2021ರ ಜನಗಣತಿಯನ್ನು ಬಳಸಿಕೊಂಡು, ಒಂದು ಅಂದಾಜಿನಂತೆ ಸುಮಾರು 81.5 ಕೋಟಿ ಜನರು ಕಾಯಿದೆಯ ವ್ಯಾಪ್ತಿಗೆ ಒಳಪಟ್ಟಿದ್ದಾರೆ ಎಂದು ಪರಿಗಣಿಸಲಾಗಿದೆ. ಇದರಿಂದಾಗಿ ಮಾರ್ಚ್ 2024 ರಲ್ಲಿ ಯೋಜಿತ ಜನಸಂಖ್ಯೆಯನ್ನು ಆಧರಿಸಿದ ಲೆಕ್ಕಾಚಾರವು ಆ ಸಂಖ್ಯೆಯನ್ನು 93 ಕೋಟಿ ಎಂದು ಅಂದಾಜಿಸಿದೆ. ಅಂದರೆ ಜನಗಣತಿ ನಡೆಸದ ಕೊರತೆಯಿಂದಾಗಿ 11 ಕೋಟಿ ಜನರು ಸಬ್ಸಿಡಿ ಅಥವಾ ಉಚಿತ ಧಾನ್ಯಗಳಿಂದ ವಂಚಿತರಾಗಿದ್ದಾರೆ. ಇದು ಅವೈಜ್ಞಾನಿಕ ಪ್ರಕ್ರಿಯೆಗೆ ಉದಾಹರಣೆಯಾಗಿದೆ.

ಸಂಸತ್ತು ಮತ್ತು ರಾಜ್ಯ ಶಾಸಕಾಂಗಗಳಲ್ಲಿ ಮಹಿಳೆಯರಿಗೆ ಮೂರನೇ ಒಂದು ಭಾಗದಷ್ಟು ಮೀಸಲಾತಿ ಒದಗಿಸುವ ಸಾಂವಿಧಾನಿಕ ತಿದ್ದುಪಡಿಯನ್ನು ಮಾಡಲಾಗಿದೆ. ಇದರಂತೆ, ಜನಗಣತಿಯ ನಂತರ ಇದನ್ನು ಜಾರಿಗೆ ತರಬೇಕಾಗಿದೆ. ಆ ನಂತರ ಸೀಮಾರೇಖೆಯನ್ನು ನಡೆಸಲಾಗುವುದು ಎಂದು ಷರತ್ತನ್ನು ವಿಧಿಸಲಾಗಿದೆ. ಜನಗಣತಿಯನ್ನು ನಡೆಸದೆ ಇದ್ದರೆ, (ಕನಿಷ್ಠ ಎಂದರೆ, 2029 ರಲ್ಲಿ ಜಾರಿಗೆ ಎಂದು ಹೇಳಿದ್ದರೂ) ಈ ಮೀಸಲಾತಿ ಮಹಿಳೆಯರಿಗೆ ಭವಿಷ್ಯದಲ್ಲಿ ತುಂಬಾ ದೂರವೆಂದೆನಿಸುತ್ತದೆ.

ಜನಗಣತಿ ನಡೆಸದಿರುವ ಕೊರತೆಯ ಮತ್ತೊಂದು ಪತನಗೊಳ್ಳುವ ಅಂಶವೆಂದರೆ ನಗರೀಕರಣಗೊಂಡ ಅನೇಕ ಹಳ್ಳಿಗಳು ಮತ್ತು ಪುರಸಭೆಗಳು, ಆಡಳಿತ ಮತ್ತು ಸೌಲಭ್ಯಗಳೊಂದಿಗೆ ಶಾಸನಬದ್ಧ ಪಟ್ಟಣದ ಸ್ಥಾನಮಾನವನ್ನು ಪಡೆಯಲು ಸಾಧ್ಯವಾಗುವುದಿಲ್ಲ.

ಜನಗಣತಿಯನ್ನು ನಡೆಸದಿರುವ ಹಾನಿಕಾರಕ ಪರಿಣಾಮವೆಂದರೆ ಸಂಸತ್ತಿನ ಮತ್ತು ಶಾಸಕಾಂಗ ಕ್ಷೇತ್ರಗಳ ಗಡಿಗಳ ಪರಿಮಿತಿಗಳನ್ನು ಪುನರ್ ರಚಿಸಲು ಸಾಧ್ಯವಾಗದೇ ಇರುವುದು. ಪ್ರಜಾಪ್ರಭುತ್ವದಲ್ಲಿ, ಪ್ರತಿಯೊಬ್ಬ ವ್ಯಕ್ತಿಯ ಮತವನ್ನು ಸಮಾನ ಹಕ್ಕುಗಳಿಗೆ ಹೊಂದುವಷ್ಟು ಕ್ಷೇತ್ರಗಳನ್ನು ಗುರುತಿಸುವುದು ಅತ್ಯಗತ್ಯವಾಗಿದೆ. ಇದು ಪ್ರಜಾಪ್ರಭುತ್ವದ ಮೂಲ ಆಶಯ.

ಹೀಗಿರುವಾಗ, ಜನಗಣತಿ ನಡೆಸಲು ಆದೇಶ ಹೊರಡಿಸಲು ಸರ್ಕಾರ ಒಲವು ತೋರಿಸುತ್ತಿಲ್ಲವೇಕೆ? ಹಿಂಜರಿಕೆಯೆ? ಕಳೆದ ಕೆಲವು ವರ್ಷಗಳಲ್ಲಿ ವೈಜ್ಞಾನಿಕ ಆಧಾರದ ಮೇಲೆ ನಡೆಸಿದ ಅಂಕಿ ಅಂಶಗಳ ಸಾಮಾನ್ಯ ಸಮೀಕ್ಷೆಗಳನ್ನು ತಿರಸ್ಕರಿಸಿದ್ದು ಹಾಗೂ ವಿವಿಧ ಸಮೀಕ್ಷೆಗಳನ್ನು ಬಿಜೆಪಿ ಸರ್ಕಾರ ನಿಗ್ರಹಿಸಿ ಅಥವಾ ಸಮೀಕ್ಷೆಯ ಅಂಕಿಅಂಶಗಳ ನಿಯತಾಂಕಗಳನ್ನು ವಿರೂಪಗೊಳಿಸಿ ಬದಲಾಯಿಸಿರುವುದನ್ನು ನಾವು ನೋಡಿದ್ದೇವೆ. ಇವೆಲ್ಲ ಕಾರಣಗಳಿಂದಲೇ ಜನಗಣತಿ ನಡೆಸದೆ ಇರಲು ಹಿಂಜರಿಕೆ ಉಂಟಾಗಿದೆ ಎನ್ನಬಹುದು.

ಬಿಜೆಪಿ ಮತ್ತು ಆರ್‌ಎಸ್‌ಎಸ್ ತಮ್ಮ ಕಾರ್ಯಸೂಚಿಯ ಭಾಗವಾಗಿ ಅತಾರ್ಕಿಕತೆಯನ್ನು ಅಥವಾ ಅವೈಜ್ಞಾನಿಕ ರೂಪಕಗಳನ್ನು ಉತ್ತೇಜಿಸುವ ಪೂರಕ ನೀತಿಗಳನ್ನು ರೂಪಿಸುವ ಒಂದು ರಾಜಕೀಯ ಒಳಸಂಚಿನ ತುಣುಕು ಮಾತ್ರ ಇದಾಗಿದೆ. ಈ ಕಾರ್ಯಸೂಚಿಯು ಹಿಂದುತ್ವ ಸಿದ್ಧಾಂತದಿಂದ ನಡೆಸಲ್ಪಡುತ್ತದೆ. ಇದಕ್ಕೆ ಕಾರಣಗಳು ನಮ್ಮ ಕಣ್ಮುಂದೆ ಗೋಚರಿಸುತ್ತಿವೆ. ಅಸ್ಸಾಂ ರಾಜ್ಯದ ಮುಖ್ಯಮಂತ್ರಿ ಹಿಮಂತ ಬಿಸ್ವಾ ಶರ್ಮಾ ರವರು ಹೇಳುತ್ತಿರುವಂತೆ, 2041ರ ಜನಗಣತಿಯ ಹೊತ್ತಿಗೆ ಮುಸ್ಲಿಮರು ಹಿಂದೂಗಳನ್ನು ಹಿಂದಿಕ್ಕುತ್ತಾರೆ ಎಂದು ಪದೇ ಪದೇ ಪ್ರತಿಪಾದಿಸುತ್ತಿರುವುದು ಇದಕ್ಕೆ ಸಾಕ್ಷಿ ಭೂತ ಉದಾಹರಣೆಯಾಗಿದೆ. ಬಿಜೆಪಿ ಮತ್ತು ಆರ್‌ಎಸ್‌ಎಸ್ ನವರ ವೈಜ್ಞಾನಿಕ ವಿರೋಧಿ ಧೋರಣೆಗೆ ಹಿಡಿದ ಕನ್ನಡಿ ಇದಾಗಿದೆ. ಇಂತಹ ಭಾಗಲಬ್ಧವಲ್ಲದ ಆಧಾರದ ಅಂಕಿಅಂಶಗಳ ಮೇಲೆ, ಅಸ್ಸಾಂನಲ್ಲಿ ಮುಸ್ಲಿಂ ವಿರೋಧಿ ಕಾನೂನುಗಳು ಮತ್ತು ಕ್ರಮಗಳನ್ನು ಯಥೇಚ್ಛವಾಗಿ ಜಾರಿಗೆ ತರಲಾಗುತ್ತಿದೆ. ಇದು ಪ್ರಜಾಪ್ರಭುತ್ವ ಹಕ್ಕುಗಳ–ಧಮನಿಸುವ ಕ್ರಿಯೆಯಾಗಿದೆ.

ಹೀಗಾಗಿ, ಬಿಜೆಪಿ ಮತ್ತು ಹಿಂದುತ್ವ ಶಕ್ತಿಗಳ ವೈಜ್ಞಾನಿಕ ವಿರೋಧಿ ದೃಷ್ಟಿಕೋನಕ್ಕೆ ಜನಗಣತಿ ಬಲಿಯಾಗುವ ಸಾಧ್ಯತೆಯನ್ನು ತಳ್ಳಿ ಹಾಕುವಂತಿಲ್ಲ. ವೈಜ್ಞಾನಿಕ ದತ್ತಾಂಶಗಳಿಂದ ನಡೆಸಲ್ಪಡುವ ನೀತಿ ರೂಪಕಗಳು ಜನಗಣತಿಯಿಂದ ಮಾತ್ರ ಸಾಧ್ಯ. ಆದ್ದರಿಂದ, ಸಮಾಜದ ಎಲ್ಲಾ ತುಳಿತಕ್ಕೊಳಗಾದ ವರ್ಗಗಳಿಗೆ ನ್ಯಾಯವನ್ನು ಖಚಿತಪಡಿಸಿಕೊಳ್ಳಲು, ಈಗಾಗಲೇ ಹೆಚ್ಚು ವಿಳಂಬವಾಗಿರುವ 2021ರ ಜನಗಣತಿಯನ್ನು ಮುಂದಿನ ವರ್ಷವೇ ನಡೆಸಬೇಕು. ಹಾಗಾಗಿ ಅದರ ಪೂರ್ವಸಿದ್ಧತಾ ಕೆಲಸ–ಕಾರ್ಯಗಳನ್ನು ಈ ವರ್ಷವೇ ಕೈಗೊಳ್ಳಬೇಕು ಎಂದು ಒತ್ತಾಯಿಸುವುದು ಅನಿವಾರ್ಯವಾಗಿದೆ. ಇದು ಎಲ್ಲಾ ಪ್ರಜಾಸತ್ತಾತ್ಮಕ ವಿಭಾಗಗಳು ಮತ್ತು ಪ್ರತಿಪಕ್ಷಗಳ ಒಮ್ಮತದ ಬೇಡಿಕೆಯಾಗಬೇಕು.

ಅನು: ನಾಗರಾಜ ನಂಜುಂಡಯ್ಯ

ದೋಸ್ತಿಗಳ ಪಾದಯಾತ್ರೆ....... ಪುಟ 3 ರಿಂದ

ತನಿಖೆ ಕೇವಲ ಸಿದ್ದರಾಮಯ್ಯನವರಿಗೆ ಮಾತ್ರವೇ ನಿಲ್ಲದೆ 2006ರಿಂದ ನಡೆದಿರುವ ಎಲ್ಲವುಗಳನ್ನು ಆಯೋಗ ಪರಿಶೀಲಿಸುವುದು ಜೆಡಿಎಸ್ ನಾಯಕರ ಆತಂಕಕ್ಕೂ ಕಾರಣವಾಗಿರಬಹುದು. ಪಾದಯಾತ್ರೆ ನಡೆಸುವುದರ ಮೂಲಕ ತನ್ನ ಸಂಘಟನಾ ನೆಲೆ ಮತ್ತು ರಾಜಕೀಯ ಪ್ರಭಾವವನ್ನು ಬಲಪಡಿಸಿಕೊಳ್ಳುವ ದೂರಗಾಮಿ ದೃಷ್ಟಿಯನ್ನು ಬಿಜೆಪಿ ಹೊಂದಿರುವಾಗ ಜೆಡಿಎಸ್ ಒಂದೆಡೆ ತನ್ನ ಮೇಲಿನ ಆರೋಪಗಳಿಂದ ಹೇಗೆ ಬಚಾವಾಗುವುದು, ತನ್ನ ನೆಲೆಯಲ್ಲಿ ಬಿಜೆಪಿ ನುಸುಳದಂತೆ ಹೇಗೆ ತಡೆಯುವುದು ಎನ್ನುವ ಪ್ರಶ್ನೆಯನ್ನೂ ಎದುರಿಸುತ್ತದೆ.

ಇದರ ವಿರುದ್ಧ ಕಾಂಗ್ರೆಸ್ ಸಹ ಕೇಂದ್ರ ಸರ್ಕಾರದ ತಾರತಮ್ಯ, ರಾಜ್ಯಕ್ಕೆ ಹಣಕಾಸು ನೀಡುವುದರಲ್ಲಿ ಆಗಿರುವ ಅನ್ಯಾಯ, ಇಡಿ ಸಿಬಿಐ ನಂತಹ ಸಂಸ್ಥೆಗಳ ದುರ್ಬಳಕೆಗಳನ್ನು ಅದೇ ಬೆಂಗಳೂರು–ಮೈಸೂರು ಹಾದಿಯ ಉದ್ದಕ್ಕೂ ಬಹಿರಂಗ ಸಭೆಗಳನ್ನು ನಡೆಸುವುದರ ಮೂಲಕವಾಗಿ ಕೌಂಟರ್ ಕೊಡಲು ಹೊರಟಿದೆ. ಸ್ವತಃ ಹಗರಣ ಮತ್ತು ಭ್ರಷ್ಟಾಚಾರಗಳಲ್ಲಿರುವ ಬಿಜೆಪಿ ಮತ್ತು ಜೆಡಿಎಸ್ ಗಳಿಗೆ ಪಾದಯಾತ್ರೆಯನ್ನು ನಡೆಸುವ ನೈತಿಕತೆ ಇದೆಯೇ ಎನ್ನುವ ಪ್ರಶ್ನೆಯನ್ನು ಈ ಪ್ರಚಾರ ಸಭೆಗಳಲ್ಲಿ ಎತ್ತುವುದಾಗಿ ಕಾಂಗ್ರೆಸ್ ನಾಯಕರು ಹೇಳುತ್ತಿದ್ದಾರೆ.

ಇದೇನೇ ನಡೆದರೂ ಮೂಡಾದಂತಹ ಸಂಸ್ಥೆಗಳಲ್ಲಿ ಹಾಗೆ ವಿವಿಧ ಇಲಾಖೆ ಮತ್ತು ಸಾರ್ವಜನಿಕವಾಗಿಯೂ ನಡೆಯುತ್ತಿರುವ ಇಂತಹ ಅಕ್ರಮ ಹಗರಣಗಳನ್ನು ಮೂಲದಲ್ಲಿ ತಡೆಯುವ, ಇದಕ್ಕೆ ಕಾರಣರಾದವರಿಗೆ ಕಠಿಣವಾಗಿ ಶಿಕ್ಷಿಸುವ ಯಾವ ಪ್ರಧಾನ ಉದ್ದೇಶಗಳು ಕಂಡುಬರುವುದಿಲ್ಲ. ಕೇವಲ ಅವರವರನ್ನೇ ಕಾಪಾಡಿಕೊಳ್ಳಲು ನಡೆಸುವ ಕಸರತ್ತುಗಳು ಆಗಿರುವುದನ್ನು ಬಿಟ್ಟರೆ ನಿಜಕ್ಕೂ ರಾಜ್ಯದ ಜನತೆಗೆ ಇದರಿಂದ ಆಗುವ ಪ್ರಯೋಜನ ಏನು ಎನ್ನುವುದು ಹಾಗೆ ಉಳಿಯುವ ಪ್ರಶ್ನೆ!

ಪರಿಶಿಷ್ಟ ಜಾತಿಗಳ ಉಪವರ್ಗೀಕರಣಕ್ಕೆ ಸುಪ್ರೀಂ ಕೋರ್ಟ್ ಅನುಮತಿ

“ಪರಿಶಿಷ್ಟ ಜಾತಿಗಳ ಹಿಂದುಳಿದ ವಿಭಾಗಗಳನ್ನು ಒಳಗೊಳ್ಳಲು ಸರಕಾರಗಳು ಸೂಕ್ತ ಕ್ರಮಗಳನ್ನು ರೂಪಿಸಬೇಕು”

ಸುಪ್ರೀಂ ಕೋರ್ಟ್‌ನ 7 ನ್ಯಾಯಾಧೀಶರ ಪೀಠವು (6–1 ಬಹುಮತದಿಂದ) ಪರಿಶಿಷ್ಟ ಜಾತಿಗಳ ಉಪ ವರ್ಗೀಕರಣಕ್ಕೆ ಅನುಮತಿಯಿದೆ ಎಂದು ಹೇಳಿದೆ. ಪರಿಶಿಷ್ಟ ಜಾತಿ ಪ್ರವರ್ಗಗಳಲ್ಲಿ ಹೆಚ್ಚು ಹಿಂದುಳಿದವರಿಗೆ ಪ್ರತ್ಯೇಕ ಕೋಟಾಗಳಿಗೆ ಕೂಡ ಸುಪ್ರೀಂ ಕೋರ್ಟ್ ಅನುಮತಿ ನೀಡಿದೆ. ಉಪ–ವರ್ಗದ ಪ್ರಾತಿನಿಧ್ಯ ಅಸಮರ್ಪಕವಾಗಿದೆಯೆಂಬುದನ್ನು ಪ್ರಾಯೋಗಿಕ ದತ್ತಾಂಶದ ಆಧಾರದ ಮೇಲೆ ರಾಜ್ಯವು ಉಪ–ವರ್ಗೀಕರಣವನ್ನು ಸಮರ್ಥಿಸಬೇಕೆಂದು ಸುಪ್ರೀಂ ಕೋರ್ಟ್ ನಿರ್ದೇಶಿಸಿದೆ.

ಸುಪ್ರೀಂ ಕೋರ್ಟ್‌ನ ನಿರ್ದೇಶನದ ಪ್ರಕಾರ ಸರ್ಕಾರಗಳು ಈಗ ಪರಿಶಿಷ್ಟ ಜಾತಿಗಳ ಹಿಂದುಳಿದ ವಿಭಾಗಗಳಿಗೆ ಅವರ ಪರಿಸ್ಥಿತಿಗಳನ್ನು ಉತ್ತಮಪಡಿಸಲು ಸೌಲಭ್ಯಗಳನ್ನು ಒದಗಿಸುವುದನ್ನು ಖಚಿತಪಡಿಸಿಕೊಳ್ಳಲು ಅಗತ್ಯವಿರುವ ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳಬೇಕು.

ಪರಿಶಿಷ್ಟ ಜಾತಿಗಳೊಳಗಿನ ಹಿಂದುಳಿದ ವಿಭಾಗಗಳನ್ನು ಅನ್ವಯಾತ್ಮಕ ಕ್ರಿಯೆಯಲ್ಲಿ ಒಳಗೊಳ್ಳುವುದನ್ನು ಖಚಿತಪಡಿಸಿ ಕೊಳ್ಳಲು ಸೂಕ್ತ ಕ್ರಮಗಳನ್ನು ರೂಪಿಸಬೇಕು ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಸರ್ಕಾರಗಳಿಗೆ ಕರೆ ನೀಡಿದೆ.

ಜನರ ಕಳೆ ಕಸಿದ ಮಳೆ

ರಾಜ್ಯದಲ್ಲಿ ಈ ಬಾರಿ ಮಳೆಯ ಸದ್ದು ಜೋರಾಗಿಯೇ ಆರಂಭವಾಗಿದೆ. ಬಹಳಷ್ಟು ಜಿಲ್ಲೆಗಳಲ್ಲಿ ಜಲಾಶಯಗಳು ಭರ್ತಿಯಾಗಿವೆ. ಮುಂಗಾರಿಗೂ ಮುನ್ನ ಮಳೆ ಧರೆಗಿಳಿಯುತ್ತಿದ್ದಂತೆ ರೈತರಲ್ಲಿ ಮಂದಹಾಸ ಮೂಡಿತ್ತು. ಆದರೆ ಮಳೆ ನಿರೀಕ್ಷೆಗೂ ಮೀರಿ ಆರ್ಭಟಿಸಿದ್ದರಿಂದ ಬಹಳಷ್ಟು ಜಿಲ್ಲೆಗಳಲ್ಲಿ ಅನಾಹುತ ಸೃಷ್ಟಿಯಾಗಿದೆ. ಹೊಲಗದ್ದೆಗಳಿಗೆ ನೀರು ಹರಿದು ಬೆಳೆ ಹಾನಿಯಾಗಿದೆ. ಮನೆಗಳು ಕುಸಿದು ಬಿದ್ದಿವೆ. ರಸ್ತೆಯಲ್ಲ ಜಲಾವೃತಗೊಂಡು ಅನೇಕ ಕಡೆಗಳಲ್ಲಿ ಗುಡ್ಡ ಕುಸಿದಿದೆ. ಬಹಳಷ್ಟು ಕಡೆ ಪ್ರಾಣಹಾನಿಯೂ ಸಂಭವಿಸಿದೆ.



ಗುರುರಾಜ ದೇಸಾಯಿ

ಕರ್ನಾಟಕದ ಕರಾವಳಿಯಲ್ಲಿ ಕಳೆದ ಒಂದು ವಾರದಿಂದ ನಿರಂತರವಾಗಿ ಮಳೆಯಾಗುತ್ತಿದೆ. ಅಷ್ಟೇ ಅಲ್ಲದೆ ಮಲೆನಾಡಿನಲ್ಲೂ ಮಳೆ ಜೋರಾಗಿದೆ. ಇನ್ನುಳಿದಂತೆ ಬೀದರ್, ಧಾರವಾಡ, ಗದಗ, ಹಾವೇರಿ, ಕಲಬುರಗಿ, ಕೊಪ್ಪಳ, ರಾಯಚೂರು, ವಿಜಯಪುರ, ಯಾದಗಿರಿ, ಬೆಂಗಳೂರು ಗ್ರಾಮಾಂತರ, ಬೆಂಗಳೂರು ನಗರ, ಚಾಮರಾಜನಗರ, ಚಿಕ್ಕಬಳ್ಳಾಪುರ, ಚಿಕ್ಕಮಗಳೂರು, ದಾವಣಗೆರೆ, ಹಾಸನ, ಕೊಡಗು, ಕೋಲಾರ, ಮಂಡ್ಯ, ಮೈಸೂರು, ರಾಮನಗರ, ತುಮಕೂರಿನಲ್ಲಿ ಮಳೆಯಾದ ಬಗ್ಗೆ ವರದಿಯಾಗಿದೆ.

ಕಳೆದ ವರ್ಷ ಮುಂಗಾರು ಅವಧಿಯಲ್ಲಿ ವಾಡಿಕೆ ಪ್ರಮಾಣಕ್ಕಿಂತ ಶೇ. 25ರಷ್ಟು, ಹಿಂಗಾರು ಅವಧಿಯಲ್ಲಿ ಶೇ. 38ರಷ್ಟು ಮಳೆ ಕೊರತೆ ಉಂಟಾಗಿತ್ತು. ಇದರಿಂದ ರಾಜ್ಯದಲ್ಲಿ ಭೀಕರ ಬರ ಸೃಷ್ಟಿಯಾಗಿತ್ತು. ಹಲವು ನಗರ ಮತ್ತು ಗ್ರಾಮಾಂತರ ಪ್ರದೇಶದಲ್ಲಿ ಕುಡಿಯುವ ನೀರಿಗೂ ಸಮಸ್ಯೆ ಉಂಟಾಗಿತ್ತು. ಆದರೆ ಮುಂಗಾರು ಅವಧಿಯ ನಾಲ್ಕು ತಿಂಗಳ ಪೈಕಿ ಪ್ರಸಕ್ತ ಜೂನ್ ಮತ್ತು ಜುಲೈ ಅವಧಿಯಲ್ಲಿ ಸುರಿದ ಮಳೆಯು 1994ರ ನಂತರ ಸುರಿದ ಅತಿ ಹೆಚ್ಚು ಹಾಗೂ ದಾಖಲೆಯ ಮಳೆಯಾಗಿದೆ ಎಂದು ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರ (ಕೆಎಸ್‌ಎನ್‌ಡಿಎಂಸಿ) ಅಂಕಿ–ಅಂಶಗಳು ದೃಢಪಡಿಸಿವೆ.



ಜುಲೈನಲ್ಲಿ ವಾಡಿಕೆಗಿಂತಲೂ ಶೇ.48 ಜಾಸ್ತಿ ಮಳೆ

ಜುಲೈನಲ್ಲಿ 263 ಮಿ.ಮೀ. ಮಳೆಯಾಗುವುದು ವಾಡಿಕೆ. ಆದರೆ ಈ ಬಾರಿ ಜುಲೈ 1 ರಿಂದ 30ರ ವರೆಗೆ ರಾಜ್ಯದಲ್ಲಿ 390 ಮಿ.ಮೀ.ನಷ್ಟು ಮಳೆ ಸುರಿದಿದೆ. ವಾಡಿಕೆಗಿಂತ ಶೇ.48 ಹೆಚ್ಚಾಗಿ ಮಳೆಯಾಗಿದೆ ಎಂದು ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರ ತಿಳಿಸಿದೆ.

ರಾಜ್ಯದಲ್ಲಿ 1994ರಿಂದ 2024ರ ಜೂನ್ ಮತ್ತು ಜುಲೈ ಅವಧಿಯಲ್ಲಿ ವಾಡಿಕೆಗಿಂತ ಕಡಿಮೆ ಮಳೆಯಾದ ವರ್ಷಗಳೇ ಹೆಚ್ಚಾಗಿವೆ. ಒಟ್ಟು 18 ವರ್ಷಗಳ ಅವಧಿಯಲ್ಲಿ ವಾಡಿಕೆ ಪ್ರಮಾಣಕ್ಕಿಂತ ಮಳೆ ಕಡಿಮೆಯಾಗಿದೆ. ಪ್ರಸಕ್ತ ವರ್ಷ ಸೇರಿದಂತೆ 12 ವರ್ಷ ಮಾತ್ರ ವಾಡಿಕೆಗಿಂತ ಹೆಚ್ಚಿನ ಪ್ರಮಾಣದ ಮಳೆಯಾಗಿದೆ.

ಜೂನ್–ಜುಲೈ ಮಳೆ ವಿವರ

ಪ್ರದೇಶ	ವಾಡಿಕೆ	ಸುರಿದ ಮಳೆ	ಶೇಕಡಾ
ದಕ್ಷಿಣ ಒಳನಾಡು	142	202	42
ಉತ್ತರ ಒಳನಾಡು	216	283	31
ಮಲೆನಾಡು	936	1,199	28
ಕರಾವಳಿ	1,940	2,409	24
ಒಟ್ಟು	463	593	28

ಮಿ.ಮೀ.ಗಳಲ್ಲಿ

ಹಲವೆಡೆ ಗುಡ್ಡ ಕುಸಿತ, ಸಾವು ನೋವು

ಮುಂಗಾರು ಮಳೆಯ ಅಬ್ಬರಕ್ಕೆ ಪಶ್ಚಿಮ ಘಟ್ಟಗಳು ನಲುಗಿ ಹೋಗಿವೆ. ಮಳೆಯ ರೌದ್ರ ನರ್ತನಕ್ಕೆ ಹಲವೆಡೆ ಭೂಕುಸಿತ ಉಂಟಾಗಿ ಆತಂಕದ ವಾತಾವರಣ ಸೃಷ್ಟಿಯಾಗಿದೆ. ಮಲೆನಾಡು, ಕರಾವಳಿ ಭಾಗದಲ್ಲಿ ಬೆಟ್ಟ–ಗುಡ್ಡಗಳು ಕುಸಿದು ಬೀಳುತ್ತಿದ್ದು ರಸ್ತೆ ಸಂಚಾರಕ್ಕೆ ಅಡಚಣೆಯಾಗಿದೆ.

ಜುಲೈ 15ರ ರಾತ್ರಿ ಶಿರೂರಿನ ರಾಷ್ಟ್ರೀಯ ಹೆದ್ದಾರಿ 66ರಲ್ಲಿ ಗುಡ್ಡ ಕುಸಿಯಿತು. ಘಟನೆಯಲ್ಲಿ ಆಟವಾಡುತಿದ್ದ ಪುಟ್ಟ ಕಂದಮ್ಮಗಳು, ಟೀ ಅಂಗಡಿಯಲ್ಲಿ ಚಹ ಸವಿಯುತಿದ್ದ ಟ್ರಕ್ ಚಾಲಕರು, ಗುಡ್ಡದ ಬದಿಯಲ್ಲಿ ವಿಶ್ರಾಂತಿ ಪಡೆಯುತಿದ್ದ ಚಾಲಕ, ಮನೆಯಲ್ಲಿ ಅಡುಗೆ ಮಾಡುತಿದ್ದ ಮಹಿಳೆ ಸೇರಿ 11 ಜನ ಭೂ ಕುಸಿತ ದುರಂತದಲ್ಲಿ ಕಾಣೆಯಾದರು. ಸತತ ಕಾರ್ಯಾಚರಣೆ ನಂತರ ಗಂಗಾವಳಿ ನದಿ ತೀರದ ಭಾಗದಲ್ಲಿ ಎಂಟು ಶವಗಳು ದೊರೆತಿತ್ತು. ಆದರೆ, ಕೇರಳ ಮೂಲದ ಅರ್ಜುನ್, ಶಿರೂರಿನ ಲೋಕೇಶ್ ನಾಯ್ಕ, ಜಗನ್ನಾಥ ನಾಯ್ಕ ಇನ್ನೂ ಪತ್ತೆಯಾಗಿಲ್ಲ. ಶೋಧಕಾರ್ಯವನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿದೆ.

ಮಂಗಳೂರು ಹಾಗೂ ಘಟ್ಟದ ಮೇಲಿನ ಪ್ರದೇಶಗಳಿಗೆ ಸಂಪರ್ಕ ಕಲ್ಪಿಸುವ ಶಿರಾಡಿ ಘಾಟ್‌ನಲ್ಲಿ ಗುಡ್ಡ ಕುಸಿತದಿಂದ ಸಂಚಾರ ದುಸ್ತರವಾಗಿದೆ. ಮತ್ತೊಂದೆಡೆ, ಚಾರ್ಮಾಡಿ ಘಾಟ್ ರಸ್ತೆಯಲ್ಲಿಯೂ ಅಲ್ಲಲ್ಲಿ ಭೂಕುಸಿತವಾಗುತ್ತಿದೆ. ಪುತ್ತೂರು, ಬೆಳ್ತಂಗಡಿ, ಉಡುಪಿಯಲ್ಲಿ ಗುಡ್ಡ ಕುಸಿದು ಅಪಾರ ಹಾನಿ ಸೃಷ್ಟಿಯಾಗಿದೆ.

ನಿರಂತರವಾಗಿ ಗುಡ್ಡ, ಭೂಮಿ ಕುಸಿಯುತ್ತಿರುವುದು ಜನರಲ್ಲಿ ಆತಂಕದ ವಾತಾವರಣ ಉಂಟುಮಾಡಿದೆ. ಮಳೆ ಬೇಕು, ಬೇಕು ಎನ್ನುತ್ತಿದ್ದ ಜನ ಈಗ ಮಳೆ ಸಾಕಪ್ಪ ಎಂದು ಹೇಳುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಉತ್ತರ ಕರ್ನಾಟಕದ ಹಲವು ಜಿಲ್ಲೆಗಳಲ್ಲಿ ಜನರು ಪ್ರವಾಹದ ಭೀತಿಯಲ್ಲಿ ಪರದಾಡುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಹಲವು ಕಡೆ ಸೇತುವೆಗಳು, ರಸ್ತೆಗಳು, ಮಳೆಯ ಅಬ್ಬರಕ್ಕೆ ಕೊಚ್ಚಿಕೊಂಡು ಹೋಗಿದ್ದು, ಜನಜೀವನ ಅಸ್ತವ್ಯಸ್ತವಾಗಿದೆ. ಜಲಾಶಯಗಳು ಭರ್ತಿಯಾಗಿ ಭಾರಿ ಪ್ರಮಾಣದ ನೀರನ್ನು ಹೊರ ಬಿಡುತ್ತಿದ್ದು, ನದಿ ಪಾತ್ರದ ಜನರು ಎಚ್ಚರಿಕೆಯಿಂದ ಇರುವಂತೆ ಸೂಚನೆ ನೀಡಲಾಗಿದೆ. ಈ ಭಾಗದಲ್ಲಿ ಜನರು ಜೀವ ಕೈಯಲ್ಲಿ ಹಿಡಿದು ಜೀವನ ಸಾಗಿಸುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ.

44,000 ಹೆಕ್ಟರ್ ಬೆಳೆ ಕೃಷಿ ಭೂಮಿಯಲ್ಲಿ ಹಾನಿ

ರಾಜ್ಯದ ಬಹುತೇಕ ಭಾಗಗಳಲ್ಲಿ ಈ ಬಾರಿ ನೈರುತ್ಯ ಮುಂಗಾರು ಮಳೆ ಅಬ್ಬರಿಸಿದ್ದು, ಪರಿಣಾಮ ಕಳೆದ ಎರಡು ತಿಂಗಳಲ್ಲಿ ತೋಟಗಾರಿಕೆ ಮತ್ತು ಕೃಷಿ ಸೇರಿ ಒಟ್ಟು 45,397 ಹೆಕ್ಟೇರ್ ಪ್ರದೇಶದಲ್ಲಿ ಬೆಳೆ ಹಾನಿ ಸಂಭವಿಸಿದೆ.

ಅತೀ ಹೆಚ್ಚಿನ ಪ್ರಮಾಣದಲ್ಲಿ ಜಲಾಶಯಗಳಿಗೆ ಮಳೆ ನೀರು ಹರಿದುಬಂದ ಕಾರಣ, ಬೆಳಗಾವಿ ಜಿಲ್ಲೆಯ ಗೋಕಾಕ, ಅಥಣಿ, ಹುಕ್ಕೇರಿ, ನಿಪ್ಪಾಣಿ, ಮೂಡಲಗಿ, ಚಿಕ್ಕೋಡಿ ತಾಲ್ಲೂಕುಗಳಲ್ಲಿ ಮತ್ತು ಬಾಗಲಕೋಟೆಯ ಕೆಲವು ಭಾಗಗಳಲ್ಲಿ ಭಾರಿ ಪ್ರವಾಹ ಉಂಟಾಗಿದೆ. ಕಾವೇರಿ ಜಲಾನಯನ ಪ್ರದೇಶಗಳ ಎಲ್ಲ ನಾಲ್ಕು ಅಣೆಕಟ್ಟುಗಳಿಗೂ ಹೆಚ್ಚಿನ ಪ್ರಮಾಣದಲ್ಲಿ ಒಳ ಹರಿವು ಉಂಟಾಗಿದೆ ಎಂದು ಕಂದಾಯ ಇಲಾಖೆ ಹೇಳಿದೆ.

ಬೆಳಗಾವಿ ಜಿಲ್ಲೆಯಲ್ಲಿ ಅತೀ ಹೆಚ್ಚು 26,674 ಹೆಕ್ಟೇರ್ ಪ್ರದೇಶದಲ್ಲಿ, ಬಾಗಲಕೋಟೆಯಲ್ಲಿ 15,455 ಹೆಕ್ಟೇರ್ ಪ್ರದೇಶದಲ್ಲಿ ಕೃಷಿ ಹಾನಿ ಉಂಟಾಗಿದೆ. ನಷ್ಟದ ಪ್ರಮಾಣವನ್ನು ಸಮೀಕ್ಷೆ ಮಾಡಬೇಕಿದೆ. ಮಳೆಯಿಂದ 380 ಗ್ರಾಮಗಳಲ್ಲಿ ಸಮಸ್ಯೆಯಾಗಿದೆ. 278 ಜಾನುವಾರುಗಳು ಬಲಿಯಾಗಿವೆ. 1,064 ಮನೆಗಳು ಸಂಪೂರ್ಣ, 5,406 ಮನೆಗಳು ಭಾಗಶಃ ಹಾನಿಗೊಳಗಾಗಿವೆ. ಚಿಕ್ಕಮಗಳೂರಿನಲ್ಲಿ ಅತೀ ಹೆಚ್ಚು 353, ಉತ್ತರ ಕನ್ನಡದಲ್ಲಿ 183, ಹಾಸನದಲ್ಲಿ 153 ಮನೆಗಳಿಗೆ ತೀವ್ರ ಹಾನಿಯಾಗಿದೆ. ಒಟ್ಟು 23,284 ಜನರನ್ನು ಸುರಕ್ಷಿತ ಸ್ಥಳಗಳಿಗೆ ಸ್ಥಳಾಂತರಿಸಲಾಗಿದೆ. ಎರಡು ತಿಂಗಳಲ್ಲಿ 54ಕ್ಕೂ ಹೆಚ್ಚು ಜನ ಮಳೆ ಆರ್ಭಟಕ್ಕೆ ಬಲಿಯಾಗಿದ್ದಾರೆ.

ಧಾರಕಾರ ಮಳೆ ಎಸ್ಕಾಂಗಳಿಗೆ 96.66 ಕೋಟಿ ರೂ. ನಷ್ಟ

ರಾಜ್ಯದಲ್ಲಿ ಸುರಿಯುತ್ತಿರುವ ಧಾರಕಾರ ಮಳೆಯಿಂದಾಗಿ ಎಸ್ಕಾಂಗಳಿಗೆ ಒಟ್ಟಾರೆ 96.66 ಕೋಟಿ ರೂ. ನಷ್ಟವಾಗಿದೆ. “ಮಳೆ ಮತ್ತು ಗಾಳಿಯಿಂದ 53,816 ಕಂಬಗಳು, 3,924 ಟ್ರಾನ್ಸ್ ಫಾರ್ಮರ್ ಗಳು, 1,120 ಕಿ.ಮೀ. ವಿದ್ಯುತ್ ತಂತಿಗಳು ಹಾನಿಗೊಳಗಾಗಿದ್ದು. ಈ ಪೈಕಿ 51,119 ಕಂಬಗಳು, 3,918 ಟ್ರಾನ್ಸ್ ಫಾರ್ಮರ್ ಗಳು, 1,063 ಕಿ.ಮೀ. ವಿದ್ಯುತ್ ತಂತಿಗಳನ್ನು ದುರಸ್ತಿಗೊಳಿಸುವ ಕಾರ್ಯ ಪೂರ್ಣಗೊಂಡಿದೆ. ಬಾಕಿ ಉಳಿದ ಕೆಲಸಗಳನ್ನು ತ್ವರಿತವಾಗಿ ಪೂರ್ಣಗೊಳಿಸಿ ಸಮರ್ಪಕ ವಿದ್ಯುತ್ ಪೂರೈಕೆಗೆ ಎಸ್ಕಾಂ ಸಿಬ್ಬಂದಿ ಸತತವಾಗಿ ಶ್ರಮಿಸುತ್ತಿದ್ದಾರೆ.

ಭಾರಿ ಮಳೆ ಬೀಳುತ್ತಿರುವ ಮಲೆನಾಡು, ಕರಾವಳಿ ಮತ್ತು ಬೆಳಗಾವಿ ಭಾಗಗಳಲ್ಲಿ ನೀರಿನ ಮಧ್ಯೆಯೂ ಸಿಬ್ಬಂದಿ ಕೆಲಸ ಮಾಡುತ್ತಿದ್ದಾರೆ. ಹೆಚ್ಚು ಹಾನಿ ಸಂಭವಿಸಿರುವ ಪ್ರದೇಶಗಳಿಗೆ ಹೆಚ್ಚುವರಿ ಲೈನ್ ಮೆನ್ ಗಳನ್ನು ನೇಮಿಸುವುದರ ಜತೆಗೆ ಗುತ್ತಿಗೆದಾರರ ನೆರವಿನೊಂದಿಗೆ ತಂಡಗಳನ್ನು ಮಾಡಿ ಪರಿಹಾರ ಕಾರ್ಯಗಳನ್ನು ಕೈಗೊಳ್ಳಲಾಗುತ್ತಿದೆ. ವಿದ್ಯುತ್ ಮರು ಸಂಪರ್ಕಕ್ಕೆ ಕಂಬಗಳು, ಕಂಡಕ್ಟರ್ ಗಳು, ತಂತಿಗಳ ಕೊರತೆಯಾಗದಂತೆ ಮೊದಲೇ ಸಂಗ್ರಹಿಸಿಟ್ಟುಕೊಂಡಿದೆ.

ಪ್ರಸಕ್ತ ವರ್ಷ ರಾಜ್ಯದಲ್ಲಿ ಉತ್ತಮ ಮಳೆಯಾಗಿದ್ದು, ಕೇವಲ 2 ತಿಂಗಳಲ್ಲಿ ಬಹುತೇಕ ಜಲಾಶಯಗಳು ಭರ್ತಿಯಾಗಿವೆ. ಪ್ರಮುಖ 14 ಜಲಾಶಯಗಳ ಪೈಕಿ 8 ಜಲಾಶಯಗಳು ತುಂಬಿವೆ.

ಕೆಆರ್‌ಎಸ್ ಜಲಾಶಯ: ದಕ್ಷಿಣ ಭಾರತದ ಅತಿ ಉದ್ದನೆಯ ನದಿ ಕಾವೇರಿಗೆ ನಿರ್ಮಿಸಿರುವ ಕೃಷ್ಣರಾಜ ಸಾಗರ (ಕೆಆರ್‌ಎಸ್) ಎರಡು ವರ್ಷಗಳ ಬಳಿಕ ಸಂಪೂರ್ಣ ಭರ್ತಿಯಾಗಿದೆ. ಸದ್ಯ ಜಲಾಶಯದಲ್ಲಿ ಗರಿಷ್ಠ ಮಟ್ಟ 124 ಅಡಿಗೆ ನೀರು ತಲುಪಿದ್ದು, 49 ಟಿಎಂಸಿಯಷ್ಟು ನೀರು ಸಂಗ್ರಹವಾಗಿದೆ. ಇನ್ನು ಜಲಾಶಯದಿಂದ 90 ಸಾವಿರ ಕ್ಯೂಸೆಕ್ಸ್ ನೀರನ್ನು ಹೊರಬಿಡಲಾಗುತ್ತಿದೆ. 50 ಸಾವಿರ ಕ್ಯೂಸೆಕ್ಸ್ ಗಿಂತಲೂ ಅಧಿಕ ಒಳಹರಿವು ಇದೆ.

ಹೇಮಾವತಿ ಜಲಾಶಯ: ಹಾಸನದ ಹೇಮಾವತಿ ನದಿಗೆ ಗೊರೂರಿನಲ್ಲಿ ಈ ಜಲಾಶಯ ನಿರ್ಮಿಸಲಾಗಿದೆ. ಸದ್ಯ ಈ ಜಲಾಶಯವು ಕಳೆದ ಮೂರು ದಿನಗಳಿಂದ ಭರ್ತಿಯಾಗಿದ್ದು, ನದಿಗೆ ನೀರು ಹರಿಬಿಡಲಾಗುತ್ತಿದೆ. ನೀರಿನಮಟ್ಟ ಗರಿಷ್ಠ 890 ಮೀಟರ್ ತಲುಪಿದೆ. ಸದ್ಯ ಜಲಾಶಯದಲ್ಲಿ 35.3 ಟಿಎಂಸಿ ನೀರಿದೆ. ಕಳೆದ ವರ್ಷ ಇದೇ ಅವಧಿಯಲ್ಲಿ 25 ಟಿಎಂಸಿ ನೀರಿತ್ತು.

ಕಬಿನಿ ಜಲಾಶಯ: ಪ್ರಸಕ್ತ ವರ್ಷ ಕರ್ನಾಟಕದಲ್ಲಿ ಮೊದಲು ಭರ್ತಿಯಾದ ಜಲಾಶಯ ಕಬಿನಿ. ಜುಲೈ ಮೊದಲ ವಾರದಲ್ಲಿಯೇ ಈ ಜಲಾಶಯ ಭರ್ತಿಯಾಗಿದ್ದು, ನದಿ ನೀರು ಬಿಡುಗಡೆ ಮಾಡಲಾಗಿತ್ತು. ಜಲಾಶಯದಲ್ಲಿ ಸದ್ಯ ಗರಿಷ್ಟ 695 ಅಡಿಯಷ್ಟು ನೀರಿದೆ. 18.4 ಟಿಎಂಸಿಯಷ್ಟು ನೀರು ಸಂಗ್ರಹವಾಗಿದೆ. ಇನ್ನು ಕಳೆದ ವರ್ಷ ಇದೇ ಅವಧಿಯಲ್ಲಿ 18 ಟಿಎಂಸಿ ನೀರಿತ್ತು.

ಹಾರಂಗಿ ಜಲಾಶಯ: ಹಾರಂಗಿ ಕಾವೇರಿ ನದಿಯ ಮುಖ್ಯ ಉಪನದಿಗಳಲ್ಲಿ ಒಂದು. ಇದಕ್ಕೆ ಸುವರ್ಣಾವತಿ ಎಂಬ ಹೆಸರೂ ಇದೆ. ಈ ನದಿ ಮಡಿಕೇರಿ ತಾಲೂಕಿನ ಬೋರೋ ಬೆಟ್ಟದಲ್ಲಿ ಉಗಮವಾಗಿ ಕುಶಾಲನಗರದ ಕೂಡಿಗೆ ಎಂಬಲ್ಲಿ ಕಾವೇರಿ ನದಿಯನ್ನು ಸೇರುತ್ತದೆ. ಹುದುಗೂರು ಎಂಬಲ್ಲಿ ಈ ನದಿಗೆ ಅಡ್ಡಲಾಗಿ ಡ್ಯಾಂ ನಿರ್ಮಿಸಲಾಗಿದೆ. ಈ ಡ್ಯಾಂನಲ್ಲಿ 870 ಮೀಟರ್ ನಷ್ಟು ನೀರಿದೆ. 7.5 ಟಿಎಂಸಿ ನೀರು ಸಂಗ್ರಹವಾಗಿದೆ. ಕಳೆದ ವರ್ಷ 6.6 ಟಿಎಂಸಿ ನೀರಿತ್ತು.

ತುಂಗಭದ್ರಾ ಜಲಾಶಯ: ಮಧ್ಯ ಹಾಗೂ ಕಲ್ಯಾಣ ಕರ್ನಾಟಕ ಜನರ ಜೀವನದಿ ತುಂಗಭದ್ರಾ ಜಲಾಶಯ. ರಾಜ್ಯದ ಅತಿ ದೊಡ್ಡ ಜಲಾಶಯಗಳ ಪೈಕಿ ಇದೂ ಒಂದು. ಕೆಆರ್‌ಎಸ್ ಜಲಾಶಯದ ದುಪ್ಪಟ್ಟು ನೀರು ಸಂಗ್ರಹ ಸಾಮರ್ಥ್ಯ ಹೊಂದಿದೆ. ಕಳೆದ ಎರಡು ವಾರದಿಂದ ಜಲಾಶಯಕ್ಕೆ ಭಾರೀ ನೀರು ಹರಿದು ಬರುತ್ತಿದೆ. ಕಳೆದ ಎರಡು ದಿನಗಳಿಂದ ಕ್ರಸ್ಟ್‌ಗೇಟ್‌ಗಳನ್ನು ತೆರೆದು ನದಿಗೆ ನೀರು ಹರಿಸಲಾಗುತ್ತಿದೆ. ಸದ್ಯ ಜಲಾಶಯದಲ್ಲಿ

ಪುಟ 10 ಕ್ಕೆ

ಪರಸ್ಪರ ದೂಷಣೆಯ ಸಮಯವಲ್ಲ, ಒಟ್ಟಾಗಿ ಎದುರಿಸಬೇಕಾದ ಗಂಭೀರ ಸಂದರ್ಭ–ಪಿ. ವಿಜಯನ್



ಸಂಸತ್ತಿನಲ್ಲಿ ಜುಲೈ 30ರಂದು ಕೇಂದ್ರ ಗೃಹ ಮಂತ್ರಿಗಳು, ಕೇಂದ್ರ ಸರಕಾರ ಏಳು ದಿನಗಳ ಮುಂಚೆಯೇ ಜುಲೈ 23ರಂದು ಕೇರಳ ಸರಕಾರಕ್ಕೆ ಭಾರೀ ಮಳೆ ಮತ್ತು ಭೂಕುಸಿತಗಳ ಸಾಧ್ಯತೆಯ ಎಚ್ಚರಿಕೆಯನ್ನು ಕೊಟ್ಟಿತ್ತು, ಅದೇ ದಿನ ಎನ್‌ಡಿಆರ್‌ಎಫ್‌ನ 9 ತಂಡಗಳನ್ನು ಕಳಿಸಿತ್ತು, ರಾಜ್ಯ ಸರಕಾರ ಈ ಎಚ್ಚರಿಕೆಗಳಿಗೆ ಕಿವಿಗೊಟ್ಟು ತೊಂದರೆಗೆ ಒಳಗಾಗಬಹುದಾದ ಸಮುದಾಯಗಳನ್ನು ವರ್ಗಾಯಿಸಿದ್ದರೆ, ಜನ ವಯನಾಡಿನಲ್ಲಿ ಪ್ರಾಣ ಕಳಕೊಳ್ಳುತ್ತಿರಲಿಲ್ಲ ಎಂದು ದೂಷಿಸಿದ್ದಾರೆ.

ಆದರೆ ಇದು ಸತ್ಯಸಂಗತಿಗಳಿಗೆ ಹೊಂದಿಕೆಯಾಗದ ಸಂಗತಿ ಎಂದು ಇದನ್ನು ನಿರಾಕರಿಸುತ್ತ ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರು ವಾಸ್ತವ ಸ್ಥಿತಿಯ ಬಗ್ಗೆ ವಿವರಗಳನ್ನು ಕೊಡುತ್ತ ಹೇಳಿದ್ದಾರೆ. ವಾಸ್ತವ ಸಂಗತಿಯೆಂದರೆ ಜುಲೈ 23ರಿಂದ ಜುಲೈ 28ರ ನಡುವೆ ಕೇಂದ್ರೀಯ ಹವಾಮಾನ ಇಲಾಖೆ ಕೇರಳದಲ್ಲಿ ಭಾರೀ ಮಳೆಯ ಯಾವುದೇ ಕಿತ್ತಳೆ ಅಲರ್ಟನ್ನು ನೀಡಲಿಲ್ಲ ಎಂದಿರುವ ಅವರ ಹೇಳಿಕೆ "ಇದೀಗ ಒಬ್ಬರನ್ನೊಬ್ಬರು ದೂಷಿಸುವ ಸಂದರ್ಭವಲ್ಲ, ಈಗ ನಾವು ಒಂದು ದುರಂತವನ್ನು ಎದುರಿಸುತ್ತಿದ್ದೇವೆ. ....ಇಂತಹ ಗಂಭೀರ ಕ್ಷಣದಲ್ಲಿ ಎಲ್ಲವನ್ನೂ ಒಟ್ಟಿಗೆ ಇಡುವುದು ಅತ್ಯಗತ್ಯ. ಇದಕ್ಕೆ ರಾಜ್ಯ ಸರ್ಕಾರ ಆದ್ಯತೆ ನೀಡುತ್ತಿದೆ. ಅದಕ್ಕೆ ಎಲ್ಲರೂ ಸಹಕರಿಸಬೇಕು" ಎಂದು ವಿನಂತಿಸಿದೆ.

ಜುಲೈ 23ರಿಂದ ಜುಲೈ 28ರ ನಡುವೆ ಕೇಂದ್ರೀಯ ಹವಾಮಾನ ಇಲಾಖೆ ಕೇರಳದಲ್ಲಿ ಭಾರೀ ಮಳೆಯ ಯಾವುದೇ ಕಿತ್ತಳೆ ಅಲರ್ಟನ್ನು ನೀಡಲಿಲ್ಲ. ಜುಲೈ 29ರಂದು ವಯನಾಡ್ ಜಿಲ್ಲೆಗೆ ಮಾತ್ರ ಕಿತ್ತಳೆ ಅಲರ್ಟನ್ನು ನೀಡಿತು. ವಯನಾಡಿಗೆ ಕೆಂಪು ಅಲರ್ಟನ್ನು ಮತ್ತು ಭಾರೀ ಮಳೆಯ ಸಾಧ್ಯತೆಯನ್ನು ಜುಲೈ 30ರಂದು ಭೂಕುಸಿತದ ನಂತರ ಪ್ರಕಟಿಸಲಾಯಿತು ಎಂದು ಅವರು ಈ ಹೇಳಿರುವುದನ್ನು ಮಾಧ್ಯಮಗಳಲ್ಲಿ ಬಂದಿರುವ ವರದಿಗಳೂ ಸಮರ್ಥಿಸುತ್ತವೆ.

ಆಗಸ್ಟ್ 2ರ ದಿ ಹಿಂದೂ ದೈನಿಕದಲ್ಲಿ ಪ್ರಕಟವಾದ ಈ ಕುರಿತ ಮಾಹಿತಿಗಳನ್ನು ಬಾಕ್ಸ್‌ನಲ್ಲಿ ಕೊಡಲಾಗಿದೆ.

ಜುಲೈ 31ರಂದು ಕೇರಳ ಮುಖ್ಯಮಂತ್ರಿಗಳು ನೀಡಿರುವ ಹೇಳಿಕೆಯ ಪೂರ್ಣಪಾಠವನ್ನು ಮುಂದೆ ಕೊಡಲಾಗಿದೆ.

ಜುಲೈ 31ರಂದು ಪಿಣರಾಯಿ ವಿಜಯ್ ನೀಡಿರುವ ಹೇಳಿಕೆಯ ಪೂರ್ಣ ಪಾಠ ಈ ಕೆಳಗಿನಂತಿದೆ:

ಇದು ಒಬ್ಬರನ್ನೊಬ್ಬರು ದೂಷಿಸುವ ಸಮಯವಲ್ಲ. ಆದರೆ ಕೇಂದ್ರ ಗೃಹಮಂತ್ರಿಗಳು, ತಾವು ಒಂದು ಎಚ್ಚರಿಕೆಯನ್ನು ನೀಡಿದ್ದೆವು, ಕೇರಳ ಸರಕಾರ ಅದಕ್ಕೆ ಸೂಕ್ತವಾಗಿ ಸ್ಪಂದಿಸಲಿಲ್ಲ ಎಂದು ಹೇಳಿರುವುದಾಗಿ ರಾಜ್ಯಸಭೆಯಿಂದ ಬಂದಿರುವ ವರದಿಗಳು ಸೂಚಿಸುತ್ತವೆ.

ವಿನಾಶ ಪೀಡಿತ ಪ್ರದೇಶಗಳಲ್ಲಿ ಕಿತ್ತಳೆ ಅಲರ್ಟ್ ಜಾರಿಯಲ್ಲಿತ್ತು. 115 ರಿಂದ 204 ಮಿ.ಮೀ ಮಳೆಯಾಗಲಿದೆ ಎಂದು ಕೇಂದ್ರ ಹವಾಮಾನ ಕೇಂದ್ರ ಎಚ್ಚರಿಕೆ ನೀಡಿತ್ತು. ವಾಸ್ತವವಾಗಿ ಅದಕ್ಕಿಂತ ಬಹಳ ಹೆಚ್ಚು ಮಳೆ ಸುರಿಯಿತು. ಮೊದಲ 24 ಗಂಟೆಗಳಲ್ಲಿ ಒಟ್ಟು 200 ಮಿ.ಮೀ. ಮತ್ತು ನಂತರದ 24 ಗಂಟೆಗಳಲ್ಲಿ 372 ಮಿ.ಮೀ. ಮಳೆಯಾಗಿದೆ. 48 ಗಂಟೆಗಳಲ್ಲಿ ಒಟ್ಟು 572 ಮಿ.ಮೀ. ಮಳೆಯಾಗಿದೆ. ಇದು ಆರಂಭಿಕ ಎಚ್ಚರಿಕೆಗಿಂತ ಎಷ್ಟೋ ಹೆಚ್ಚು. ಈ ದುರಂತದ ಮೊದಲು ಈ ಪ್ರದೇಶವು ಎಂದೂ ರೆಡ್ ಅಲರ್ಟ್‌ನಲ್ಲಿ ಇರಲಿಲ್ಲ. ಆದರೆ ಈ ಘಟನೆಯ ನಂತರ, ಬೆಳಿಗ್ಗೆ ಆರು ಗಂಟೆಗೆ ಈ ಪ್ರದೇಶದಲ್ಲಿ ರೆಡ್ ಅಲರ್ಟ್ ಪ್ರಕಟಿಸಲಾಯಿತು.

ಇನ್ನೊಂದು ವಿಷಯ:

ಜುಲೈ 23ರಿಂದ ಜುಲೈ 28ರ ನಡುವೆ ಕೇಂದ್ರೀಯ ಹವಾಮಾನ ಇಲಾಖೆ ಕೇರಳದಲ್ಲಿ ಭಾರೀ ಮಳೆಯ ಯಾವುದೇ ಕಿತ್ತಳೆ ಅಲರ್ಟನ್ನು ನೀಡಲಿಲ್ಲ. ಜುಲೈ 29ರಂದು ವಯನಾಡ್ ಜಿಲ್ಲೆಗೆ ಮಾತ್ರ ಕಿತ್ತಳೆ ಅಲರ್ಟನ್ನು ನೀಡಿತು. ವಯನಾಡಿಗೆ ಕೆಂಪು ಅಲರ್ಟನ್ನು ಮತ್ತು ಭಾರೀ ಮಳೆಯ ಸಾಧ್ಯತೆಯನ್ನು ಜುಲೈ 30ರಂದು ಬೆಳಿಗ್ಯೆ 6ಗಂಟೆಗೆ ಭೂಕುಸಿತದ ನಂತರ ಪ್ರಕಟಿಸಲಾಯಿತು.

ಜುಲೈ 29ರಂದು ಅಪರಾಹ್ನ 2 ಗಂಟೆಗೆ, ಭಾರತದ ಭೂವೈಜ್ಞಾನಿಕ ಸರ್ವೆ ಸಂಸ್ಥೆ (ಜಿಎಸ್‌ಐ) ಜುಲೈ 30 ಮತ್ತು 31ರಂದು ಒಂದು ಹಸಿರು ಅಲರ್ಟನ್ನು ನೀಡಿ, ಸಣ್ಣ ಪ್ರಮಾಣದ ಭೂಕುಸಿತ ಅಥವ ಬಂಡೆಸ್ಫೋಟದ ಸಾಧ್ಯತೆ ಇದೆ ಎಂದು ಹೇಳಿತು. ಆದರೆ ಆ ವೇಳೆಗಾಗಲೇ, ಭಾರೀ ಮಳೆ ಸುರಿದಿತ್ತು ಮತ್ತು ಭೂಕುಸಿತ ನಡೆದಿತ್ತು. ಅವರು ನೀಡಿದ ಎಚ್ಚರಿಕೆಯನ್ನು ಇಲ್ಲಿ ನೋಡಬಹುದು.

ಇದು ಕೇಂದ್ರ ಸರ್ಕಾರದ ಸ್ವಾಮ್ಯದ ಸಂಸ್ಥೆಯಾಗಿದೆ. ಜುಲೈ 23ರಿಂದ ಜುಲೈ 28 ರವರೆಗೆ ಪ್ರತಿದಿನ ಕೇರಳಕ್ಕೆ ಕೇಂದ್ರ ಹವಾಮಾನ ಇಲಾಖೆ ನೀಡಿರುವ ಮಳೆ ಎಚ್ಚರಿಕೆಯನ್ನು ಪರಿಶೀಲಿಸಿದರೆ, ಭಾರೀ ಮಳೆಗೆ ಒಂದು ದಿನವೂ ಆರೆಂಜ್ ಅಲರ್ಟ್ ಇಲ್ಲ ಎಂಬುದು ಸತ್ಯ. ಜುಲೈ 29 ರಂದು ಮಧ್ಯಾಹ್ನ 1 ಗಂಟೆಗೆ ನೀಡಲಾದ ಎಚ್ಚರಿಕೆಯಲ್ಲೂ ವಯನಾಡು ಜಿಲ್ಲೆಗೆ ಆರೆಂಜ್ ಅಲರ್ಟ್ ಮಾತ್ರ ನೀಡಲಾಗಿದೆ. ವಯನಾಡಿನಲ್ಲಿ ಭೂಕುಸಿತದ ನಂತರ, ಜುಲೈ 30ರಂದು ಬೆಳಿಗ್ಗೆ 6 ಗಂಟೆಗೆ ವಯನಾಡಿನಲ್ಲಿ ರೆಡ್ ಅಲರ್ಟ್ ಮತ್ತು ಭಾರೀ ಮಳೆಯ ಸಾಧ್ಯತೆಯನ್ನು ಘೋಷಿಸಲಾಯಿತು. ಅದೇ ದಿನ, ಭಾರತೀಯ ಭೂವಿಜ್ಞಾನ ಇಲಾಖೆಯು ವಯನಾಡು ಜಿಲ್ಲೆಗೆ 30 ಮತ್ತು 31 ರಂದು ಮಧ್ಯಾಹ್ನ 2 ಗಂಟೆಗೆ ಭೂಕುಸಿತ/ಬಂಡೆ ಸ್ಫೋಟಗಳ ಬಗ್ಗೆ ಹಸಿರು ಎಚ್ಚರಿಕೆ ನೀಡಿದೆ. ಹಸಿರು ಎಂದರೆ ಸಣ್ಣಪುಟ್ಟ ಭೂಕುಸಿತ/ಜಾರುವ ಸಾಧ್ಯತೆ ಇರುತ್ತದೆ. ಆದರೆ ಅಷ್ಟರಲ್ಲಾಗಲೇ ಭಾರೀ ಮಳೆ ಸುರಿದು ಅವಘಡ ಸಂಭವಿಸಿದೆ.

ಜುಲೈ 23ರಿಂದ 29 ರವರೆಗೆ ಆಯೋಗವು ಪ್ರವಾಹ ಎಚ್ಚರಿಕೆಗಳನ್ನು ನೀಡುವ ಜವಾಬ್ದಾರಿಯಿರುವ ಕೇಂದ್ರೀಯ ಜಲ ಆಯೋಗ ಇರುವಳಿಂಜಿಪುಳ ಅಥವಾ ಚಾಲಿಯಾರ್‌ಗೆ ಪ್ರವಾಹದ ಯಾವುದೇ ಎಚ್ಚರಿಕೆ ನೀಡಲಿಲ್ಲ. ಕೇಂದ್ರ ಗೃಹಮಂತ್ರಿಗಳು ಸಂಸತ್ತಿಗೆ ಸತ್ಯ–ಸಮಂಜಸವಲ್ಲದ ಮಾಹಿತಿಯನ್ನು ನೀಡಿದ್ದಾರೆ.

ಕೇರಳದ ಕೋರಿಕೆಯ ಮೇರೆಗೆ, ಮಳೆಗಾಲದ ಆರಂಭದಲ್ಲಿ ಎನ್‌ಡಿಆರ್‌ಎಫ್ ತಂಡವನ್ನು ಲಭ್ಯಗೊಳಿಸಲಾಯಿತು. ಕೇರಳವು 9 ಎನ್‌ಡಿಆರ್‌ಎಫ್ ತಂಡಗಳ ಬೇಡಿಕೆಯನ್ನು ಇಟ್ಟಿತ್ತು. ಸರ್ಕಾರ ಅದಾಗಲೇ ವಯನಾಡು ಜಿಲ್ಲೆಯಲ್ಲಿ ಒಂದು ತಂಡವನ್ನು ನಿಯೋಜಿಸಿತ್ತು. ಪ್ರವಾಹ ಅಥವ ಭೂಕುಸಿತ ಸೇರಿದಂತೆ ಇತರ ನೈಸರ್ಗಿಕ ವಿಪತ್ತುಗಳ ಮುಂಗಡ ಮಾಹಿತಿಗಳಿದ್ದ ಎಲ್ಲ ಪ್ರದೇಶಗಳಲ್ಲಿ ಸಿದ್ಧತೆಗಳನ್ನು ಮಾಡಲಾಗಿತ್ತು.

ಮಾನ್ಸೂನ್ ಆರಂಭದ ದಿನದಿಂದ, ಕೇಂದ್ರ ಹವಾಮಾನ ವೀಕ್ಷಣಾಲಯದ ಭಾಗವಾಗಿ ವಿವಿಧ ರೀತಿಯ ಹವಾಮಾನ ಎಚ್ಚರಿಕೆಗಳನ್ನು ಸ್ವೀಕರಿಸಲಾಗುತ್ತದೆ. ಪ್ರತಿ ಪ್ರದೇಶದಲ್ಲಿ ಸೂಕ್ತ ಭದ್ರತಾ ವ್ಯವಸ್ಥೆಗಳನ್ನು ಸಿದ್ಧಪಡಿಸಲಾಗಿದೆ. ನಿನ್ನೆ ಹೇಳಿದಂತೆ, ಎಚ್ಚರಿಕೆಗಳನ್ನು ನೀಡಲಾಗಿದೆ ಮತ್ತು ಎಲ್ಲಾ ಹತ್ತಿರದ ಪ್ರದೇಶಗಳಲ್ಲಿ, ವಿಶೇಷವಾಗಿ ಕೆಂಪು ವಲಯದ ಭಾಗವಾಗಿರುವ ಜನರನ್ನು ಸ್ಥಳಾಂತರಿಸಲಾಗಿದೆ.

ಅಷ್ಟೇ ಅಲ್ಲ, ಪ್ರವಾಹ, ಭೂಕುಸಿತ ಸೇರಿದಂತೆ ಇತರೆ ಪ್ರಾಕೃತಿಕ ವಿಕೋಪ ಸಂಭವಿಸುವ ಸಾಧ್ಯತೆಗಳ ಬಗ್ಗೆ ಮೊದಲೇ ಮಾಹಿತಿ ಬಂದಿರುವ ಎಲ್ಲ ಪ್ರದೇಶಗಳಲ್ಲಿ ಈ ರೀತಿಯ ಸಿದ್ಧತೆ ನಡೆದಿದೆ. ಅದರ ಭಾಗವಾಗಿ ಅನೇಕ ಅಪಘಾತಗಳನ್ನು ತಪ್ಪಿಸಲಾಗಿದೆ. ಆದರೆ ಈ ದುರಂತ ಪ್ರಾರಂಭವಾದ ಕೇಂದ್ರಬಿಂದು ಆರು ಕಿಲೋಮೀಟರ್ ದೂರದಲ್ಲಿದೆ. ಇಂತಹ ಸ್ಥಳದಲ್ಲಿ ಇಂತಹ ಅನಾಹುತವನ್ನು ಸಾಮಾನ್ಯವಾಗಿ ಯಾರೂ ನಿರೀಕ್ಷಿಸುವುದಿಲ್ಲ. ಅವುಗಳನ್ನು ತೊಡೆದುಹಾಕುವುದು ಸಾಮಾನ್ಯವಾಗಿ ಯೋಚಿಸುವ ವಿಷಯವಲ್ಲ.

ಹವಾಮಾನ ಬದಲಾವಣೆ ನಮ್ಮ ಪರಿಸರದಲ್ಲಿ ಮಹತ್ವದ ಬದಲಾವಣೆಗಳನ್ನು ತಂದಿದೆ. ಈ ಬದಲಾವಣೆಗಳನ್ನು ಎದುರಿಸಲು ಮತ್ತು ಹೊಂದಿಕೊಳ್ಳಲು ನಾವು ಮುಂದಾಗಿ ಕ್ರಮಗಳನ್ನು ಕೈಗೊಳ್ಳಬೇಕಾದ ಅಗತ್ಯವಿದೆ. ಇಂತಹ ಪ್ರಶ್ನೆಗಳು ಎದುರಾದಾಗ, ಇದರಲ್ಲಿ ತೊಡಗಿಸಿಕೊಳ್ಳುವುದು ನಮ್ಮ ಕೆಲಸವಲ್ಲ ಎಂದು ಪುಟ 10 ಕ್ಕೆ

ಕೇಂದ್ರ ಗೃಹಮಂತ್ರಿಗಳೂ, ಕೇರಳ ಪಡೆದ 'ಮುನ್ನೆಚ್ಚರಿಕೆ'ಗಳೂ

'ದಿ ಹಿಂದೂ' ದೈನಿಕ ಇದು ಆಗಸ್ಟ್ 2 ರಂದು ಪ್ರಕಟಿಸಿದ' ಕೇರಳ ಪಡೆದ ಮುನ್ನೆಚ್ಚರಿಕೆಗಳೇನು?' ಎಂಬ ವರದಿಯಲ್ಲಿನ ಮಾಹಿತಿಗಳನ್ನು ಪರಿಶೀಲಿಸಿದರೆ, ಕೇಂದ್ರೀಯ ಹವಾಮಾನ ಏಜೆನ್ಸಿಗಳು ಕೇರಳ ಭೂಕುಸಿತದ ಬಗ್ಗೆ ನೀಡಿದ 'ಅಲರ್ಟ್'ಗಳು ಅಂದರೆ ಎಚ್ಚರಿಕೆಗಳ ಬಗ್ಗೆ ಕೇಂದ್ರ ಗೃಹಮಂತ್ರಿಗಳು ನೀಡಿರುವ ಹೇಳಿಕೆ ಸತ್ಯಕ್ಕೆ ಎಷ್ಟು ಹತ್ತಿರ ಅಥವ ದೂರವಾಗಿವೆ ಎಂಬುದನ್ನು ತಿಳಿಯಬಹುದು.

ಈ 'ಅಲರ್ಟ್'ಗಳು ಅಥವ ಎಚ್ಚರಿಕೆಗಳಲ್ಲಿ ನಾಲ್ಕು ಮಟ್ಟಗಳಿವೆ. ಹಸಿರು ಅಲರ್ಟ್ ಅತಿ ಕೆಳಮಟ್ಟದ್ದು, ಅದರ ಮೇಲೆ ಹಳದಿ ಮಟ್ಟ, ನಂತರ ಕಿತ್ತಳೆ ಅಲರ್ಟ್ ಮತ್ತು ಕೊನೆಯದಾಗಿ ಕೆಂಪು ಅಲರ್ಟ್.

ಚಿತ್ರ–1 ನೋಡಿ: ಜುಲೈ 26ರ ಬೆಳಿಗ್ಗೆ 10 ಗಂಟೆಗೆ ಭಾರತ ಸರಕಾರದ ಹವಾಮಾನ ಇಲಾಖೆ(ಐಎಂಡಿ) ನೀಡಿದ ಮುನ್ಸೂಚನೆಯ ಪ್ರಕಾರ 26ರಿಂದ 30ರ ನಡುವೆ ಕೇರಳದ ಮಲಪ್ಪುರಂ, ಕೊಹಿಕೊಡ್ ಮತ್ತು ವಾಯನಾಡ್ ಬಿಟ್ಟು ಬೇರೆಲ್ಲ ಕಡೆಗಳಲ್ಲಿ ಹಸಿರು ಎಚ್ಚರಿಕೆ ಇತ್ತು. ವಾಯ್‌ನಾಡಿನಲ್ಲೂ ಜುಲೈ 28 ಮತ್ತು 30ರಂದು ಹಸಿರು ಅಲರ್ಟ್ ಮತ್ತು ಉಳಿದ 3 ದಿನಗಳಲ್ಲಿ ಹಳದಿ ಅಲರ್ಟ್ ಇತ್ತಷ್ಟೇ.

District Rainfall Forecast For Kerala and Lakshadweep


26 July 2024 — Time of Issue: 1000 HRS IST

District		26-Jul	27-Jul	28-Jul	29-Jul	30-Jul
Thiruvananthapuram	Intensity:	L to M	L to M	L to M	L to M	L to M
	Probability:	Very Likely	Very Likely	Very Likely	Very Likely	Very Likely
Kollam	Intensity:	L to M	L to M	L to M	L to M	L to M
	Probability:	Very Likely	Very Likely	Very Likely	Very Likely	Very Likely
Pathanamthitta	Intensity:	L to M	L to M	L to M	L to M	L to M
	Probability:	Very Likely	Very Likely	Very Likely	Very Likely	Very Likely
Alappuzha	Intensity:	L to M	L to M	L to M	L to M	L to M
	Probability:	Very Likely	Very Likely	Very Likely	Very Likely	Very Likely
Kottayam	Intensity:	L to M	L to M	L to M	L to M	L to M
	Probability:	Very Likely	Very Likely	Very Likely	Very Likely	Very Likely
Ernakulam	Intensity:	L to M	L to M	L to M	L to M	L to M
	Probability:	Very Likely	Very Likely	Very Likely	Very Likely	Very Likely
Idukki	Intensity:	L to M	L to M	L to M	L to M	L to M
	Probability:	Very Likely	Very Likely	Very Likely	Very Likely	Very Likely
Thrissur	Intensity:	L to M	L to M	L to M	L to M	L to M
	Probability:	Very Likely	Very Likely	Very Likely	Very Likely	Very Likely
Palakkad	Intensity:	L to M	L to M	L to M	L to M	L to M
	Probability:	Very Likely	Very Likely	Very Likely	Very Likely	Very Likely
Malappuram	Intensity:	ISOL. H	L to M	L to M	ISOL. H	L to M
	Probability:	Very Likely	Very Likely	Very Likely	Very Likely	Very Likely
Kozhikode	Intensity:	ISOL. H	ISOL. H	ISOL. H	ISOL. H	L to M
	Probability:	Very Likely	Very Likely	Very Likely	Very Likely	Very Likely
Wayanad	Intensity:	ISOL. H	ISOL. H	L to M	ISOL. H	L to M
	Probability:	Very Likely	Very Likely	Very Likely	Very Likely	Very Likely

ಜುಲೈ 29ರಂದು ಐಎಂಡಿ ಪತ್ರಿಕಾಹೇಳಿಕೆ ಅಂದು ಕೇರಳ ಮತ್ತು ಮಾಹೆಯಲ್ಲಿ "ಅಲ್ಲಲ್ಲಿ ಭಾರಿ ಮಳೆಯಾಗುವ ಸಂಭವವಿದೆ" ಎಂದು ಹೇಳಿತ್ತು. ಭೂಕುಸಿತ ಜುಲೈ 30ರ ಮುಂಜಾವಿನಲ್ಲಿ ಸಂಭವಿಸಿತು.

ಕೆಂಪು ಎಚ್ಚರಿಕೆಯ ಸೂಚನೆ ನೀಡಿದ್ದು ಜುಲೈ 30ರ ಅಪರಾಹ್ನ 1.30ರ ಹೇಳಿಕೆಯಲ್ಲಷ್ಟೆ. ಆ ವೇಳೆಗಾಗಲೇ ಭೂಕುಸಿತಗಳು ಸಂಭವಿಸಿದ್ದವು.

ಐಎಂಡಿಯ ಉಪಸಂಸ್ಥೆಯಾದ ಅಗ್ರೊಮೆಟ್ ಜುಲೈ 26ರಂದು ನೀಡಿದ ಮುನ್ಸೂಚನೆಯಲ್ಲಿ ಜುಲೈ 30ರಂದು 15 ಸೆ.ಮೀ. ಮಳೆಯ ಮುನ್ಸೂಚನೆ ನೀಡಿತ್ತು. ಆದರೆ ವಿನಾಶಕ್ಕೆ ಒಳಗಾದ ಜಾಗಗಳಲ್ಲಿ 24 ಗಂಟೆಗಳಲ್ಲಿ 37.2 ಸೆ.ಮೀ. ಮತ್ತು 48 ಗಂಟೆಗಳಲ್ಲಿ 57.2 ಸೆ.ಮೀ. ಮಳೆ ಸುರಿಯಿತು.



ಜುಲೈ 26ರಂದು 20 ಸೆ.ಮೀ. ಮಳೆಯಾಗಬಹುದು ಎಂದು ಮುನ್ಸೂಚನೆ ನೀಡಲಾಗಿತ್ತು ಎಂದು ಗೃಹಮಂತ್ರಿಗಳು ರಾಜ್ಯಸಭೆಗೆ ತಿಳಿಸಿದರು. ಆದರೆ ಜುಲೈ 26ರ ಐಎಂಡಿ ಪತ್ರಿಕಾ ಹೇಳಿಕೆ ಇಂತಹ ಯಾವುದೇ ಎಚ್ಚರಿಕೆಯನ್ನು ಕೊಟ್ಟಿರಲಿಲ್ಲ, ಹಿಂದಿನ ಹೇಳಿಕೆಗಳಲ್ಲಿ ಕೊಟ್ಟಂತೆ 'ಹಳದಿ' ಎಚ್ಚರಿಕೆ ಮಾತ್ರವೇ ಇತ್ತು ಎಂದು 'ದಿ ಹಿಂದೂ' ವರದಿ ಹೇಳುತ್ತದೆ.

ಚಿತ್ರ–2 ಭಾರತ ಸರಕಾರದ ಪ್ರಾಯೋಗಿಕ ಮಳೆಯಿಂದಾಗುವ ಭೂಕುಸಿತಗಳ ಮುನ್ಸೂಚನೆಯ ಬುಲೆಟಿನ್ ಜುಲೈ 29ರಂದು ಹೊರಡಿಸಿದ ಮುನ್ಸೂಚನೆ. ಇದರಲ್ಲಿ ದಿನ 1 (ಜುಲೈ 29, 14–30ರಿಂದ ಜುಲೈ 30 14–30ರ ವರೆಗೆ ಮತ್ತು ದಿನ 2 (ಜುಲೈ 30, 14–30ರಿಂದ ಜುಲೈ 31, 14–30) ಕ್ಕೆ ಹಸಿರು ಮುನ್ಸೂಚನೆ ನೀಡಿತ್ತು. ಅಂದರೆ ಭೂಕುಸಿತಗಳ ಸಾಧ್ಯತೆ ಬಹಳ ಕಡಿಮೆ!

'ದಿ ಹಿಂದೂ'ನಲ್ಲಿ ಪ್ರಕಟವಾಗಿರುವ ಈ ವರದಿ ಕೇಂದ್ರ ಗೃಹಮಂತ್ರಿಗಳ ದೂಷಣೆ ಎಷ್ಟು ಟೊಳ್ಳು ಎಂಬುದನ್ನು ಬಯಲಿಗೆ ತಂದಿದೆ ಎಂದು ಈ ಬಗ್ಗೆ ಸಿಪಿಐ(ಎಂ) ಸಂಸತ್ ಸದಸ್ಯ ಜಾನ್ ಬ್ರಿಟ್ಟಾಸ್ ಟಿಪ್ಪಣಿ ಮಾಡಿದ್ದಾರೆ.

ಕಟ್ಟಡ ಕಾರ್ಮಿಕರ ಕಲ್ಯಾಣ ಮಂಡಳಿಯಲ್ಲಿನ ಭ್ರಷ್ಟಾಚಾರವನ್ನು ನ್ಯಾಯಾಂಗ ತನಿಖೆಗೊಳಪಡಿಸಿ: ಸಿಪಿಐ(ಎಂ) ಆಗ್ರಹ

"ಹೈಕೋರ್ಟ್ ಆದೇಶದಂತೆ ಶೈಕ್ಷಣಿಕ ಧನಸಹಾಯ ಪಾವತಿಸಬೇಕು ಮತ್ತು ಮಂಡಳಿಯಲ್ಲಿ ನೊಂದಾಯಿತ ಕಟ್ಟಡ ಕಾರ್ಮಿಕರಿಗೆ ವಿತರಿಸಲು ಪೌಷ್ಟಿಕಾಂಶ ಪದಾರ್ಥ ಖರೀದಿ, ಕಾರ್ಮಿಕರ ಮಕ್ಕಳಿಗೆ ವಿತರಿಸಲು ಲ್ಯಾಪ್‌ಟಾಪ್ ಖರೀದಿ, ವೈದ್ಯಕೀಯ ತಪಾಸಣೆ ಇವುಗಳ ಮೂಲಕ ನಡೆಸಲಾಗುವ ವ್ಯಾಪಕ ಭ್ರಷ್ಟಾಚಾರದಿಂದ ಕಲ್ಯಾಣ ಮಂಡಳಿಯನ್ನು ಮುಕ್ತಗೊಳಿಸಬೇಕು" ಎಂದು ಆಗ್ರಹಿಸಿ, ಕರ್ನಾಟಕ ರಾಜ್ಯ ಕಟ್ಟಡ ಕಾರ್ಮಿಕ ಸಂಘಗಳ ಸಮನ್ವಯ ಸಮಿತಿ ನೇತೃತ್ವದಲ್ಲಿ ರಾಜ್ಯದ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರು 2024ರ ಆಗಸ್ಟ್ 5ರಂದು ಬೆಂಗಳೂರಿನಲ್ಲಿ ಮುಖ್ಯಮಂತ್ರಿ ಮನೆ ಚಲೋ ನಡೆಸಲು ನಿರ್ಧರಿಸಿದ್ದಾರೆ. ಈ ಹೋರಾಟಕ್ಕೆ ಬೆಂಬಲ ನೀಡಿರುವ ಭಾರತ ಕಮ್ಯೂನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ) ರಾಜ್ಯ ಸಮಿತಿಯು, ಇದೊಂದು ನ್ಯಾಯಯುತ ಹೋರಾಟವಾಗಿದ್ದು, ಪಕ್ಷ ಅದಕ್ಕೆ ಸಂಪೂರ್ಣ ಬೆಂಬಲ ವ್ಯಕ್ತಪಡಿಸುತ್ತದೆ ಎಂದು ಹೇಳಿದೆ.

ಹಿಂದಿನ ಬೊಮ್ಮಾಯಿ ನೇತೃತ್ವದ ಬಿಜೆಪಿ ಸರ್ಕಾರದಲ್ಲಿ ಕಾರ್ಮಿಕ ಸಚಿವರಾಗಿದ್ದ ಶಿವರಾಂ ಹೆಬ್ಬಾರ್ ಅವರು ಆಹಾರದ ಕಿಟ್, ಟೂಲ್ ಕಿಟ್ ಇತ್ಯಾದಿಗಳ ಹೆಸರಿನಲ್ಲಿ ಸಾವಿರಾರು ಕೋಟಿ ಹಣವನ್ನು ಮನಸೋಇಚ್ಛೆ ಖರ್ಚು ಮಾಡಿದ್ದರು. ಇದೀಗ, ಕಾಂಗ್ರೆಸ್ ಸರ್ಕಾರದ ಕಾರ್ಮಿಕ ಸಚಿವ ಸಂತೋಷ್ ಲಾಡ್ ಅವರು ಖರೀದಿಗಳನ್ನು ನಿಲ್ಲಿಸಿ ಕಾರ್ಮಿಕರಿಗೆ ನೇರ ಹಣ ವರ್ಗಾವಣೆಯ ಮೂಲಕ ಸೌಲಭ್ಯ ವಿತರಿಸಲಾಗುವುದೆಂದು ಘೋಷಿಸಿದ್ದರು. ಆದರೆ, ಕಾರ್ಮಿಕರ ಹೆಸರಲ್ಲಿ ಮತ್ತೆ ಲ್ಯಾಪ್ ಟಾಪ್ ಖರೀದಿ ಮೂಲಕ, ಖಾಸಗಿ ಆಸ್ಪತ್ರೆಗಳಿಂದ ವೈದ್ಯಕೀಯ ತಪಾಸಣೆ ನಡೆಸುವ ಮೂಲಕ, ಪೌಷ್ಟಿಕಾಂಶ ಕಿಟ್ ಖರೀದಿ (ಆಯುರ್ವೇದ ಪೌಡರ್) ಮೂಲಕ, ಕೌಶಲ್ಯ ತರಬೇತಿ ಇತ್ಯಾದಿಗಳ ಮೂಲಕ ನೂರಾರು ಕೋಟಿ ರೂಪಾಯಿ ಅನಗತ್ಯ ಖರ್ಚು ಮಾಡುತ್ತಿದ್ದಾರೆ. ಇದನ್ನು ಗಮನಿಸಿದಾಗ, ಹಿಂದಿನ ಭ್ರಷ್ಟ ಬಿಜೆಪಿಗಿಂತ ಕಾಂಗ್ರೆಸ್ ಸರ್ಕಾರ ಭಿನ್ನವಾಗಿಲ್ಲ ಎನ್ನುವ ಭಯ ನಿರ್ಮಾಣ ಕಾರ್ಮಿಕರಲ್ಲಿ ಮನೆ ಮಾಡಿದೆ. ಈ ಎಲ್ಲ ಖರೀದಿಗಳನ್ನು ನ್ಯಾಯಾಂಗ ತನಿಖೆಗೆ ಒಳಪಡಿಸಿ ಸತ್ಯವೇನೆಂದು ಕಾರ್ಮಿಕರು ತಿಳಿಯುವಂತೆ ಕ್ರಮವಹಿಸಬೇಕೆಂದು ಸಿಪಿಐ(ಎಂ) ಒತ್ತಾಯಿಸಿದೆ.

ಕಲ್ಯಾಣ ಮಂಡಳಿಯಲ್ಲಿ 14 ಸಾವಿರ ಕೋಟಿ ರೂ. ಸೆಸ್ ಸಂಗ್ರಹವಾಗಿದೆ. ಅದರಲ್ಲಿ ರೂ. 6500 ಕೋಟಿ ಖರ್ಚಾಗಿದ್ದು, ಸುಮಾರು ರೂ. 6700 ಕೋಟಿ ನಿಧಿ ಬಾಕಿ ಇದೆ ಎನ್ನುವ ಮಾಹಿತಿ ಲಭ್ಯವಾಗಿದೆ. ರಾಜ್ಯದಲ್ಲಿ 2007 ರಿಂದ ಅಸ್ತಿತ್ವದಲ್ಲಿರುವ ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕ ಕಲ್ಯಾಣ ಮಂಡಳಿಯು ಕಟ್ಟಡ ಕಾರ್ಮಿಕರಿಗಾಗಿ 19 ಸೌಲಭ್ಯಗಳನ್ನು ಘೋಷಿಸಿದೆ. ಮಕ್ಕಳ ಶಿಕ್ಷಣ, ಮದುವೆ, ವೈದ್ಯಕೀಯ ವೆಚ್ಚ, ಅಪಘಾತದಿಂದಾಗುವ ಮರಣ ಹಾಗೂ ಸಹಜ ಮರಣ, ಹೆರಿಗೆ ಸೌಲಭ್ಯ ಮೊದಲಾದ ಕೆಲವೇ ಸೌಲಭ್ಯಗಳ ಹೊರತು ಪಡಿಸಿ ಇತರೆ ಸೌಲಭ್ಯಗಳನ್ನು ಜಾರಿಗೊಳಿಸದಿರುವುದನ್ನು ಸಿಪಿಐ(ಎಂ) ಖಂಡಿಸಿದೆ.

ಬೋಗಸ್ ಲೇಬರ್ ಕಾರ್ಡ್ ನಿಯಂತ್ರಣದ ಹೆಸರಿನಲ್ಲಿ ಶೈಕ್ಷಣಿಕ ಧನಸಹಾಯ, ಮದುವೆ, ವೈದ್ಯಕೀಯ ವೆಚ್ಚ, ಹೆರಿಗೆ ಸೌಲಭ್ಯ ಮೊದಲಾದ ಸೌಲಭ್ಯಗಳಿಗೆ ಅರ್ಜಿ ಸಲ್ಲಿಸಲು ಸಾಧ್ಯವಾಗದಂತೆ ಮಾಡಲಾಗಿದೆ. ವಿವಿಧ ಸೌಲಭ್ಯಗಳಿಗಾಗಿ ಸಲ್ಲಿಸಲಾದ ಸಾವಿರಾರು ಅರ್ಜಿಗಳಿಗೆ ಧನಸಹಾಯ ಪಾವತಿ ಸರಿಯಾಗಿ ಆಗುತ್ತಿಲ್ಲ. ಅಲ್ಲದೆ ಶೈಕ್ಷಣಿಕ ಧನಸಹಾಯವನ್ನು ಶೇ. 60ರಿಂದ ಶೇ. 80ರವರೆಗೆ ಕಡಿತ ಮಾಡಿರುವುದು ಅತ್ಯಂತ ಖಂಡನಾರ್ಹ ನಡೆಯಾಗಿದೆ. ಕಲ್ಯಾಣ ಮಂಡಳಿಯು ಶೈಕ್ಷಣಿಕ ಧನಸಹಾಯ ಕಡಿತ ಮಾಡಿದ್ದನ್ನು ಪ್ರಶ್ನಿಸಿ ಕರ್ನಾಟಕ ರಾಜ್ಯ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕ ಫೆಡರೇಷನ್ ಹೈಕೋರ್ಟ್ ನಲ್ಲಿ ಅರ್ಜಿ ಹಾಕಿ ಇಬ್ಬರು ಬಡ ಕಾರ್ಮಿಕರ ಮಕ್ಕಳಿಗೆ ದಂಡ ಸಹಿತ ಧನಸಹಾಯ ಕೊಡಿಸಿರುವುದು ಶ್ಲಾಘನೀಯವಾಗಿದೆ. ಇದು ಸರಕಾರದ ಕಾರ್ಮಿಕ ವಿರೋಧಿ ನಡೆಯನ್ನು ಎತ್ತಿ ತೋರಿದೆ.

ಹತ್ತಾರು ವರ್ಷಗಳಿಂದ ಕಾನೂನು ರಚನೆ ಮತ್ತು ಕಲ್ಯಾಣ ಮಂಡಳಿ ಜಾರಿಗಾಗಿ ಹೋರಾಡಿದ್ದ ಹಾಗೂ ಕಾರ್ಮಿಕರನ್ನು ಸಂಘಟಿಸಿದ್ದ ಕಾರ್ಮಿಕ ಸಂಘಗಳನ್ನು ಸಚಿವರು, ಅಧಿಕಾರಿಗಳು ಉದ್ದೇಶಪೂರ್ವಕವಾಗಿ ದೂರವಿಟ್ಟಿದ್ದಾರೆ. ಕಲ್ಯಾಣ ಮಂಡಳಿಯ ಸಭೆ ನಡೆಸದೇ ಹಲವು ತೀರ್ಮಾನ ಕೈಗೊಳ್ಳುತ್ತಿದ್ದಾರೆ. ಕಾರ್ಮಿಕರು ಸಲ್ಲಿಸಿದ ಮನವಿ, ಹೋರಾಟಕ್ಕೂ ಕಿವಿಗೊಡುತ್ತಿಲ್ಲ. ಸಚಿವರ ಈ ನಡೆ ಒಪ್ಪತಕ್ಕದ್ದಲ್ಲ. ಮಂಡಳಿಯಲ್ಲಿರುವ ನಿಧಿ ಕಾರ್ಮಿಕರ ಕಲ್ಯಾಣಕ್ಕೆ ಮಾತ್ರವೇ ಬಳಕೆಯಾಗಬೇಕು ಮತ್ತು ಘೋಷಿಸಲಾದ ಸೌಲಭ್ಯಗಳು ಕಾರ್ಮಿಕರ ಖಾತೆಗೆ ನೇರ ಹಣ ವರ್ಗಾವಣೆ ಮೂಲಕ ಸಿಗಬೇಕು. ಮಂಡಳಿಯ ಅನಗತ್ಯ ಖರೀದಿಗಳ ಟೆಂಡರ್ ಗಳನ್ನು ಕೂಡಲೇ ತಡೆದು, ಈಗಾಗಲೇ ನಡೆದಿರುವ ಎಲ್ಲ ಖರೀದಿಗಳ ವ್ಯವಹಾರಗಳ ತನಿಖೆ ನಡೆಸಿ ತಪ್ಪಿತಸ್ಥರಿಗೆ ಶಿಕ್ಷೆ ನೀಡಬೇಕೆಂದು ಆಗ್ರಹಿಸಿರುವ ಸಿಪಿಐ(ಎಂ), ಹೋರಾಟಕ್ಕೆ ಮುಂದಾಗಿರುವ ಕಾರ್ಮಿಕ ಸಂಘಗಳ ಜತೆ ಮಾತುಕತೆ ನಡೆಸಿ ಅವರ ಬೇಡಿಕೆಗಳನ್ನು ಇತ್ಯರ್ಥ್ಯ ಪಡಿಸಲು ಮುಖ್ಯಮಂತ್ರಿಗಳು ಹಾಗೂ ಕಾರ್ಮಿಕ ಸಚಿವರು ಅಗತ್ಯ ಕ್ರಮವಹಿಸಬೇಕೆಂದು ಒತ್ತಾಯಿಸಿದೆ.

ಇಸ್ರೇಲಿನಿಂದ ಪ್ಯಾಲೇಸ್ಟಿನಿಯನ್ನರ ನರಮೇಧದ ವಿರುದ್ಧ ಆಗಸ್ಟ್ 3ರಂದು ದೇಶವ್ಯಾಪಿ ಪ್ರತಿಭಟನೆ–ಎಡಪಕ್ಷಗಳ ಕರೆ

ವಿಶ್ವಸಂಸ್ಥೆಯ ನಿರ್ಣಯದ ಲಜ್ಜೆಗೆಟ್ಟ ಉಲ್ಲಂಘನೆಗಳು, ಗಾಜಾದಲ್ಲಿ ಇಸ್ರೇಲ್ ನಡೆಸಿದ ನರಮೇಧದ ವಿರುದ್ಧ ಅಂತರರಾಷ್ಟ್ರೀಯ ನ್ಯಾಯಾಲಯ(ಐಸಿಜೆ) ತೀರ್ಪುಗಳು ಮತ್ತು ಪ್ಯಾಲೆಸ್ಟೈನ್ ಜನರ ವಿರುದ್ಧ ಇಂತಹ ನರಮೇಧದ ಉಲ್ಬಣದ ಹಿನ್ನೆಲೆಯಲ್ಲಿ ಭಾರತದ ಎಡ ಪಕ್ಷಗಳು ಸಿಪಿಐ(ಎಂ), ಸಿಪಿಐ, ಆರ್‌ಎಸ್‌ಪಿ, ಎಐಎಫ್‌ಬಿ ಮತ್ತು ಸಿಪಿಐ–ಎಂಎಲ್ ಅಮೇರಿಕಾ ಸಂಯುಕ್ತ ಸಂಸ್ಥಾನಗಳ ಬೆಂಬಲದೊಂದಿಗೆ ಇಸ್ರೇಲ್ ನಡೆಸುತ್ತಿರುವ ನರಮೇಧ ಮತ್ತು ದೌರ್ಜನ್ಯದ ವಿರುದ್ಧ ಪ್ಯಾಲೆಸ್ತೀನ್ ಜನತೆಯೊಂದಿಗೆ ತಮ್ಮ ಸೌಹಾರ್ದವನ್ನು ವ್ಯಕ್ತಪಡಿಸಬೇಕು ಎಂದು ಭಾರತದ ಜನತೆಗೆ ಕರೆ ನೀಡಿವೆ.

ಎಡಪಕ್ಷಗಳು ಈ ಕೆಳಗಿನ ಆಗ್ರಹಗಳನ್ನು ಮಾಡಿವೆ:

* ತಕ್ಷಣದ ಕದನ ವಿರಾಮ ಮತ್ತು 1947ರ ಪೂರ್ವದ ಗಡಿಗಳು ಮತ್ತು ಪೂರ್ವ ಜೆರುಸಲೆಮ್ ಅನ್ನು ರಾಜಧಾನಿಯಾಗಿ ಹೊಂದಿರುವ ಪ್ಯಾಲೇಸ್ಟಿನಿಯನ್ ಪ್ರಭುತ್ವಕ್ಕೆ ಮಾನ್ಯತೆ
* ಇಸ್ರೇಲ್ ಮೇಲೆ ತಕ್ಷಣ ಮಿಲಿಟರಿ ಮತ್ತು ಶಸ್ತ್ರಾಸ್ತ್ರಗಳು ಹಾಗೂ ಮಿಲಿಟರಿ ಉಪಕರಣಗಳ ಆಮದು ಮತ್ತು ರಫ್ತಿನ ಮೇಲೆ ನಿರ್ಬಂಧವನ್ನು ವಿಧಿಸಬೇಕು ಮತ್ತು ಎಲ್ಲಾ ರೀತಿಯ ಮಿಲಿಟರಿ ಸಹಕಾರವನ್ನು ನಿಲ್ಲಿಸಬೇಕು.
* ಇಸ್ರೇಲ್‌ನಲ್ಲಿ ಕೈಗಾರಿಕಾ ಚಟುವಟಿಕೆಗಾಗಿ ಭಾರತೀಯ ಕಾರ್ಮಿಕರ ಸಹಕಾರ ಮತ್ತು ಚಲನೆಯ ಮೇಲೆ ತಕ್ಷಣವೇ ನಿರ್ಬಂಧಗಳನ್ನು ವಿಧಿಸಬೇಕು.
* ರಾಜತಾಂತ್ರಿಕ ಹಣಕಾಸು ಮತ್ತು ಆರ್ಥಿಕ ನಿರ್ಬಂಧಗಳನ್ನು ಒಳಗೊಂಡಂತೆ ಇಸ್ರೇಲ್ ಮೇಲೆ ಕಾನೂನು ನಿರ್ಬಂಧಗಳನ್ನು ವಿಧಿಸಬೇಕು.
* ಇಸ್ರೇಲ್‌ನ ವರ್ಣಭೇದ ಆಳ್ವಿಕೆಯನ್ನು ಕೊನೆಗೊಳಿಸಲು ಮತ್ತು ಅಪರಾಧಿಗಳನ್ನು ಹೊಣೆಗಾರರನ್ನಾಗಿ ಮಾಡಲು ವರ್ಣಭೇದ ನೀತಿಯ ವಿರುದ್ಧ ವಿಶ್ವ ಸಂಸ್ಥೆಯ ವಿಶೇಷ ಸಮಿತಿಯನ್ನು ಬಳಸಬೇಕು.

ಇದಲ್ಲದೆ, ಈ ಎಡಪಕ್ಷಗಳು ಭಾರತ ಸರ್ಕಾರದ ಮುಂದೆ ಈ ಕೆಳಗಿನ ಒತ್ತಾಯಗಳನ್ನು ಮಂಡಿಸಿವೆ:

1. ಇಸ್ರೇಲ್‌ಗೆ ಮಿಲಿಟರಿ ಶಸ್ತ್ರಾಸ್ತ್ರಗಳು ಮತ್ತು ಮದ್ದುಗುಂಡುಗಳ ಪೂರೈಕೆಗಾಗಿ ವಿವಿಧ ಭಾರತೀಯ ಕಂಪನಿಗಳಿಗೆ ನೀಡಿರುವ ಎಲ್ಲಾ ರಫ್ತು ಪರವಾನಗಿಗಳು ಮತ್ತು ಅನುಮತಿಗಳನ್ನು ರದ್ದುಗೊಳಿಸಬೇಕು.
2. ಇಸ್ರೇಲ್‌ನಿಂದ ಎಲ್ಲಾ ಶಸ್ತ್ರಾಸ್ತ್ರ ಆಮದುಗಳನ್ನು ನಿಲ್ಲಿಸಬೇಕು.
3. ವಸಾಹತುಶಾಹಿ ವರ್ಣಭೇದ ನೀತಿಯ ತತ್ವಗಳ ಆಧಾರದ ಮೇಲೆ ಇಸ್ರೇಲ್‌ನ ಅಕ್ರಮ ಮಿಲಿಟರಿ ಆಕ್ರಮಣ ಮತ್ತು ನರಮೇಧದೊಂದಿಗೆ ಎಲ್ಲಾ ಸ್ವರೂಪಗಳ ಶಾಮೀಲನ್ನು ಕೊನೆಗೊಳಿಸಬೇಕು.

ಸ್ವಾತಂತ್ರ್ಯ ಪೂರ್ವದಿಂದಲೂ ನಮ್ಮ ಪರಂಪರೆಗೆ ಅನುಗುಣವಾಗಿ ಭಾರತ ಸರ್ಕಾರದ ರಾಜಕೀಯ ಮತ್ತು ರಾಜತಾಂತ್ರಿಕ ಪ್ರತಿರೋಧವನ್ನು ಖಚಿತಪಡಿಸಿಕೊಳ್ಳಬೇಕು ಎಂದು ಎಡ ಪಕ್ಷಗಳು ಜನರನ್ನು ಕೂಡ ಆಗ್ರಹಿಸಿವೆ. ಪಶ್ಚಿಮ ಏಷ್ಯಾದ ಪರಿಸ್ಥಿತಿಯು ಶಾಂತಿ ಮತ್ತು ಘನತೆಯನ್ನು ರಕ್ಷಿಸಲು ಜಾಗತಿಕ ಪ್ರಜಾಪ್ರಭುತ್ವದ ಅಭಿಪ್ರಾಯವು ಒತ್ತಿ ಹೇಳಬೇಕಾದ ಹಂತವನ್ನು ತಲುಪಿದೆ ಎಂದು ತಾವು ನಂಬಿರುವುದಾಗಿ ಎಡ ಪಕ್ಷಗಳು ಹೇಳಿವೆ.

ಆಗಸ್ಟ್ 3ರಂದು ಭಾರತೀಯ ಜನರನ್ನು ಎಲ್ಲಾ ಎಡಪಕ್ಷಗಳು ಜಂಟಿಯಾಗಿ ಮತ್ತು ಸ್ವತಂತ್ರವಾಗಿ ಪರಿಣಾಮಕಾರಿಯಾಗಿ ದೇಶಾದ್ಯಂತ ಒಗ್ಗೂಡಿಸಬೇಕು ಎಂದು ಎಡಪಕ್ಷಗಳು ತಮ್ಮ ಘಟಕಗಳಿಗೆ ಕರೆ ನೀಡಿವೆ.

ಜನರ ಕಳೆ ಕಸಿದ ಮಳೆ........ ಪುಟ 8 ರಿಂದ

497 ಮೀಟರ್ ನೀರಿದ್ದು, 102 ಟಿಎಂಸಿ ನೀರು ಶೇಖರಣೆಯಾಗಿದೆ. ಕಳೆದ ವರ್ಷ ಈ ವೇಳೆಗೆ 40 ಟಿಎಂಸಿ ನೀರಿತ್ತು.

ನಾರಾಯಣಪುರ ಜಲಾಶಯ: ಕೃಷ್ಣಾ ನದಿಗೆ ಅಡ್ಡಲಾಗಿ ನಾರಾಯಣಪುರ ಜಲಾಶಯ(ಬಸವಸಾಗರ ಜಲಾಶಯ)ಕಟ್ಟಲಾಗಿದೆ. ರಾಜ್ಯದ ಮೂರನೇ ದೊಡ್ಡ ಅಣೆಕಟ್ಟು ಎಂದು ಪ್ರಸಿದ್ಧಿ ಪಡೆದಿದೆ. ಇದು ಯಾದಗಿರಿ ಜಿಲ್ಲೆಯ ಸುರಪುರ ತಾಲ್ಲೂಕಿನ ನಾರಾಯಣಪುರ ಎಂಬಲ್ಲಿ ಇದೆ. ಮಹಾರಾಷ್ಟ್ರ, ಉತ್ತರ ಕರ್ನಾಟಕ ಭಾಗದಲ್ಲಿ ಜೋರು ಮಳೆಯಾದ ಪರಿಣಾಮ ಜಲಾಶಯ ಬಹುತೇಕ ಭರ್ತಿಯಾಗಿ ನದಿಗೆ ನೀರು ಹರಿಸಲಾಗುತ್ತಿದೆ. 490 ಮೀಟರ್ ಗಳಷ್ಟು ನೀರಿದ್ದು, 27 ಟಿಎಂಸಿಯಷ್ಟು ನೀರು ಸಂಗ್ರಹವಾಗಿದೆ. ಕಳೆದ ವರ್ಷ ಈ ವೇಳೆಗೆ 18 ಟಿಎಂಸಿ ನೀರಿತ್ತು.

ಆಲಮಟ್ಟಿ ಜಲಾಶಯ: ಆಲಮಟ್ಟಿಯ ಲಾಲ್ ಬಹದ್ದೂರ್ ಶಾಸ್ತ್ರಿ ಜಲಾಶಯವು ಉತ್ತರ ಕರ್ನಾಟಕದ ಜೀವನಾಡಿ. ಕೃಷ್ಣಾ ನೀರಾವರಿ ಯೋಜನೆ ಪ್ರಮುಖ ಜಲಾಶಯ. ಮಹಾರಾಷ್ಟ್ರ, ಬೆಳಗಾವಿ ಭಾಗದಲ್ಲಿ ಹೆಚ್ಚು ಮಳೆಯಾಗಿದ್ದು, ಜಲಾಶಯಕ್ಕೆ ಅಪಾರ ಪ್ರಮಾಣದ ನೀರು ಹರಿದುಬರುತ್ತಿದೆ. ಜಲಾಶಯದ ಗೇಟುಗಳನ್ನು ತೆರೆಯಲಾಗಿದೆ. 516 ಮೀಟರ್ ನಷ್ಟು ನೀರಿದ್ದು, 84 ಟಿಎಂಸಿ ನೀರು ಸಂಗ್ರಹವಾಗಿದೆ. ಕಳೆದ ವರ್ಷ ಈ ವೇಳೆಗೆ 80 ಟಿಎಂಸಿ ನೀರಿತ್ತು.

ಘಟಪ್ರಭಾ ಜಲಾಶಯ: ಘಟಪ್ರಭಾ ನದಿಗೆ ಗೋಕಾಕ ತಾಲೂಕಿನ ಧೂಪದಾಳ ಗ್ರಾಮದ ಹತ್ತಿರ ಈ ಡ್ಯಾಂ ನಿರ್ಮಿಸಲಾಗಿದೆ. ಈ ಜಲಾಶಯದಲ್ಲಿ 661 ಮೀಟರ್ ನೀರಿದ್ದು, 46.5 ಟಿಎಂಸಿ ನೀರು ಸಂಗ್ರಹವಾಗಿದೆ. ಜಲಾಶಯದಿಂದ ನದಿಗೆ ನೀರು ಬಿಡುಗಡೆ ಮಾಡಲಾಗಿದೆ.

ಎಚ್ಚೆತ್ತುಕೊಳ್ಳದ ಸರ್ಕಾರ

'ಪ್ರತಿ ಬಾರಿ ಮಳೆ ಸುರಿದಾಗಲೂ ಮನೆಗಳಿಗೆ ನೀರು ನುಗ್ಗಿ ಜನರ ಪ್ರಾಣ ಹಾಗೂ ಆಸ್ತಿಪಾಸ್ತಿಗೆ ಹಾನಿಯಾಗುತ್ತದೆ, ಗುಡ್ಡ ಕುಸಿಯುತ್ತವೆ, ರಸ್ತೆ ಸಂಚಾರ ಬಂದಾಗುತ್ತದೆ, ನದಿಗಳು ತುಂಬಿ ನದಿಪಾತ್ರದ ಜನರಿಗೆ ಸಂಕಷ್ಟ ಬರುತ್ತದೆ ಎಂಬ ಅಂಶಗಳು ಸರ್ಕಾರಕ್ಕೆ ಗೊತ್ತಿರುತ್ತದೆ. ಆದರೆ ಮುನ್ನೆಚ್ಚರಿಕಾ ಕ್ರಮಗಳನ್ನು ಸರ್ಕಾರ ತೆಗೆದುಕೊಳ್ಳುತ್ತಿಲ್ಲ ಎಂಬ ಆರೋಪಗಳು ಪದೇ ಪದೇ ಕೇಳಿ ಬರುತ್ತಿವೆ.

ಪರಸ್ಪರ ದೂಷಣೆಯ ಸಮಯವಲ್ಲ, ಒಟ್ಟಾಗಿ ಎದುರಿಸಬೇಕಾದ ಗಂಭೀರ ಸಂದರ್ಭ... ಪುಟ 9 ರಿಂದ

ಹೊಣೆಗಾರಿಕೆಯಿಂದ ತಪ್ಪಿಸಿಕೊಳ್ಳಬಹುದೇ? ಕೇಂದ್ರ ಸರಕಾರ ಈ ಪ್ರಶ್ನೆಯನ್ನು ಕೂಡ ಗಂಭೀರವಾಗಿ ಪರಿಗಣಿಸಬೇಕು. ಹವಾಮಾನ ಬದಲಾವಣೆಯನ್ನು ಎದುರಿಸುವ ಭಾಗವಾಗಿ ಮುಂಬರುವ ಅನಾಹುತಗಳನ್ನು ತಡೆಯಲು ಪರಿಣಾಮಕಾರಿ ಕ್ರಮಗಳನ್ನು ಕೈಗೊಳ್ಳಬೇಕು.

ಮತ್ತೊಮ್ಮೆ ಹೇಳುವುದಾದರೆ, ಇದು ಒಬ್ಬರನ್ನೊಬ್ಬರು ದೂಷಿಸುವ ಸಮಯವಲ್ಲ. ಈಗ ನಾವು ಒಂದು ದುರಂತವನ್ನು ಎದುರಿಸುತ್ತಿದ್ದೇವೆ. ಹಲವಾರು ಮಂದಿ ಹತಾಶ ಮತ್ತು ನಿರ್ಗತಿಕ ಸ್ಥಿತಿಯಲ್ಲಿದ್ದಾರೆ. ಉಳಿಸಬಹುದಾದವರನ್ನು ಉಳಿಸಲು, ನೆಲದಡಿಯಲ್ಲಿ ಹೂತುಹೋದವರನ್ನು ಹುಡುಕಿ ತೆಗೆಯಲು ಕಾರ್ಯಪ್ರವೃತ್ತರಾಗಬೇಕಿದೆ. ಈ ಪ್ರದೇಶವನ್ನು ಹಿಂದಿನ ಸ್ಥಿತಿಗೆ ತರಲು ಮತ್ತು ಕಳೆದುಹೋದ ಹಳ್ಳಿಯನ್ನು ಮತ್ತೆ ಕಟ್ಟಲು ಮುಂದೊತ್ತಬೇಕಾಗಿದೆ. ಇಂತಹ ಗಂಭೀರ ಕ್ಷಣದಲ್ಲಿ ಎಲ್ಲವನ್ನೂ ಒಟ್ಟಿಗೆ ಇಡುವುದು ಅತ್ಯಗತ್ಯ. ಇದಕ್ಕೆ ರಾಜ್ಯ ಸರ್ಕಾರ ಆದ್ಯತೆ ನೀಡುತ್ತಿದೆ. ಅದಕ್ಕೆ ಎಲ್ಲರೂ ಸಹಕರಿಸಬೇಕು.





ರೈಲುಗಳನ್ನು ಹಳಿತಪ್ಪಿಸಿದ 2024 ರ ಕೇಂದ್ರ ಬಜೆಟ್

ಜಿ.ಎಸ್.ಮಣಿ

(ದಿ ವೈರ್ ನಲ್ಲಿ ಪ್ರಕಟವಾದ ವಿ. ಶ್ರೀಧರ್ ಅವರ ಲೇಖನದ ಸಂಗ್ರಹಾನುವಾದ)

ಭಾರತೀಯ ರೈಲ್ವೇ ಜಗತ್ತಿನಲ್ಲೇ ಅತ್ಯಂತ ದೊಡ್ಡ ರೈಲು ಜಾಲ. ಜಗತ್ತಿನ ಅತಿ ಜನನಿಬಿಡ ದೇಶದ ಈ ರೈಲು ಜಾಲ ದೇಶಕ್ಕೆ ಅತ್ಯಂತ ಮುಖ್ಯ ಮೂಲಸೌಕರ್ಯ ಕೂಡ. ಇಂತಹ ಮೂಲ ಸೌಕರ್ಯವನ್ನು ಸುಸ್ಥಿತಿಯಲ್ಲಿ ಇರಿಸಿಕೊಂಡು ಸುರಕ್ಷೆಯ ಕಡೆಗೆ ಅತ್ಯಂತ ಹೆಚ್ಚಿನ ಗಮನ ನೀಡಿ ಬೆಳೆಸುವುದು ಯಾವುದೇ ಸರ್ಕಾರದ ಪರಮ ಕರ್ತವ್ಯ. 2024–25 ರ ಕೇಂದ್ರ ಬಜೆಟ್ ಅನ್ನು ನೋಡಿದರೆ ಈಗಿನ ಮೋದಿ ಸರ್ಕಾರಕ್ಕೆ ಅಂತಹ ಕಾಳಜಿಗಳಿಲ್ಲ ಎಂಬುದು ಸ್ಪಷ್ಟವಾಗಿ ಗೊತ್ತಾಗಿಬಿಡುತ್ತದೆ. ಕಾರ್ಯ ಸಾಮರ್ಥ್ಯದ ಸುಧಾರಣೆ ಮತ್ತು ಆರ್ಥಿಕಕ್ಕೆ ಅದು ನೀಡಬಹುದಾದ ನಿಜ ಮೌಲ್ಯಗಳ ಕಡೆಗೆ ಈ ಸರ್ಕಾರದ ಗಮನವಿಲ್ಲ ಎಂಬುದು ಬಜೆಟ್ಟಿನಲ್ಲಿ ಡಾಣಾಡಂಗುರವಾಗಿದೆ.

ಭಾರತದಲ್ಲಿ ರೈಲ್ವೇ ಸಲುವಾಗಿಯೇ ಒಂದು ಪ್ರತ್ಯೇಕ ಬಜೆಟ್ಟನ್ನು ಮಂಡಿಸುವ ಪರಿಪಾಠ ಮೊದಲಿನಿಂದಲೂ ಇತ್ತು. ಮೋದಿ ಸರ್ಕಾರ ಬಂದಮೇಲೆ ಇದನ್ನು ಬದಲಾಯಿಸಿ ರೈಲು ಬಜೆಟ್ಟನ್ನು ಸಾಮಾನ್ಯ ಬಜೆಟ್ಟಿನ ಜೊತೆಗೆ/ಒಳಗೇ ಮಂಡಿಸುವ ಪರಿಪಾಠವನ್ನು ಜಾರಿಗೆ ತಂದಿತು. ಹೀಗೆ ಮಾಡುವ ಜೊತೆಗೇ ಅದಕ್ಕಿರುವ ಮಹತ್ವವನ್ನು ಕಡಿಮೆ ಮಾಡಿ, ತನಗೆ ಬೇಕಾದಂತೆ ರೈಲ್ವೇ ನಡೆಸಲು ಅನುವು ಮಾಡಿಕೊಂಡಿತು. ಹೀಗಿರುವಾಗ, ಸಾಮಾನ್ಯ ಬಜೆಟ್ಟಿನಲ್ಲೇ ದೊಡ್ಡ ಹೂಡಿಕೆಯ ಮಾತುಗಳಿಲ್ಲ, ಇನ್ನು ರೈಲ್ವೇಯಲ್ಲಿ ಹೂಡಿಕೆಯ ಮಾತು ಹೇಗೆ ಬಂದೀತು?

ಹಾಗೆ ನೋಡಿದರೆ ಮೋದಿ ಸರ್ಕಾರದ ಹಿಂದಿನ ಆರ್ಥಿಕ ಸಲಹೆಗಾರರೊಬ್ಬರು ಹೇಳಿದಂತೆ, ರೈಲ್ವೇಯಲ್ಲಿ ಮಾಡಿದ ಹೂಡಿಕೆ ಒಂದಕ್ಕೆ ಐದು ಪಟ್ಟು ಬೆಳೆಯಬಲ್ಲ ಸಾಮರ್ಥ್ಯ ಹೊಂದಿದೆ. ಕೇಳುವವರಾರು? ಮೋದಿ ಸರ್ಕಾರಕ್ಕೆ ಬೇರೆ ಕಾರ್ಯಸೂಚಿಗಳಿವೆ!

ಐಷಾರಾಮಿ ಆದ್ಯತೆ

ವಂದೇ ಭಾರತ್, ಬುಲ್ಲೆಟ್ ಟ್ರೈನ್ ನಂತಹ ರೈಲುಗಳನ್ನು ತಂದು ಐಷಾರಾಮಿ ಪ್ರಿಯರಿಗೆ ಅನುಕೂಲ ಮಾಡಿಕೊಟ್ಟು, ಜನಸಾಮಾನ್ಯರು ಮತ್ತು ದೇಶದ ದುಡಿವ ಜನ ಪರದಾಡುವ ಸ್ಥಿತಿ ತಂದಿಟ್ಟು ಮೋಜು ನೋಡುವ ಕಾರ್ಯಸೂಚಿ ಅದರದ್ದು. ಇತ್ತೀಚಿನ ದಿನಗಳಲ್ಲಿ ಹಲವಾರು ರೈಲು ಅಪಘಾತಗಳನ್ನು ಕಂಡಿರುವ ದೇಶದಲ್ಲಿ ಜನರ ಸುರಕ್ಷೆ ಮೊದಲ ಆದ್ಯತೆಯಾಗಬೇಕಾಗಿತ್ತು. ಅಂತಹ ಆದ್ಯತೆ ಕಾಣುತ್ತಿಲ್ಲ. ರೈಲು ಸುರಕ್ಷತೆಯ ಆಯುಕ್ತರು ಅಪಘಾತಗಳ ಭೀಕರತೆಯ ಹಿನ್ನೆಲೆಯಲ್ಲಿ ಸುರಕ್ಷೆಯ ಕಡೆಗೆ ಹೆಚ್ಚಿನ ಗಮನ ಅಗತ್ಯ ಎಂದು ವರದಿ ನೀಡಿಯಾಗಿದೆ. ಸರ್ಕಾರದ ಗಮನ ಮಾತ್ರ ಹರಿದಂತೆ ಕಾಣುವುದಿಲ್ಲ.

ಒಟ್ಟಾರೆ ಬಜೆಟ್ಟಿನಲ್ಲಿ ದೊಡ್ಡದೇ ಅನ್ನಿಸುವಂತಹ ಮೊತ್ತವಾದ 11,11,111 ಕೋಟಿ ರೂಪಾಯಿಗಳನ್ನು 2024–25 ರ ಸಾಲಿಗೆ ತೆಗೆದಿರಿಸಲಾಗಿದೆ. ಇದರ ಆದ್ಯತೆ ಏನು ಎಂಬುದು ಸ್ಪಷ್ಟವಿಲ್ಲ. ಹಿಂದಿನ ಅನುಭವದ ಮೇಲೆ ನೋಡುವುದಾದರೆ, ಬಜೆಟ್ ನಲ್ಲಿ ಭಾರೀ ಮೊತ್ತ ಘೋಷಿತವಾಗಿ ಪ್ರಚಾರ ಪಡೆಯುತ್ತದೆ. ಪರಿಷ್ಕೃತ ನಿಜವಾದ ಅನುದಾನ (ಕಡಿತವಾಗಿ) ಮತ್ತು ನಿಜವಾದ ಖರ್ಚು ಇನ್ನೂ ಕಡಿಮೆಯಾಗಿರುತ್ತದೆ. ನಿಜವೇನೆಂದರೆ ಬಜೆಟ್ಟಿನಲ್ಲಿ ಒಂದು ಮೊತ್ತವನ್ನು ಘೋಷಿಸಿದ ಮೇಲೆ ಅದೇ ಮೌಲ್ಯದ ಕೆಲಸಗಳು ಆಗಬೇಕೆಂದಾದರೆ ಬೆಲೆ ಏರಿಕೆಯನ್ನು ಗಮನದಲ್ಲಿರಿಸಿಕೊಳ್ಳಬೇಕು. ತಪ್ಪಿದರೆ ಬೆಲೆ ಏರಿಕೆ ಈ ಕೆಲಸಗಳ ಮೌಲ್ಯವನ್ನು (ಅಂದರೆ ಒಟ್ಟು ಕೆಲಸವನ್ನು) ಕಡಿಮೆ ಮಾಡಿಬಿಡುತ್ತದೆ. ತಾತ್ಪರ್ಯವೇನೆಂದರೆ ಪರಿಷ್ಕೃತ ಅಂದಾಜಿನಲ್ಲಿ ಮೊತ್ತ ಹೆಚ್ಚಳವಾಗಬೇಕು. ಅದು ಆಗುತ್ತಿಲ್ಲ ಎಂಬುದು ಹಿಂದಿನ ಬಜೆಟ್ಟುಗಳನ್ನು ನೋಡಿದರೆ ಅನುಭವವಾಗುತ್ತದೆ.

ಕಣ್ಣು ಕಟ್ಟು

ಮೋದಿ ಸರ್ಕಾರದ ಇನ್ನೊಂದು ಕಣ್ಣು ಕಟ್ಟುವ ರೀತಿ ಕೆಳಗಿನದು. ಸರ್ಕಾರ ಹೂಡಿಕೆ ಮಾಡುವ ಬದಲು ರೈಲು ಹಣಕಾಸು ನಿಗಮದಿಂದ ಹೂಡಿಕೆ ಮಾಡಿಸುವುದು. ಈ ನಿಗಮ ರೈಲ್ವೇಯ ಆಸ್ತಿಗಳನ್ನು ಗುತ್ತಿಗೆ ನೀಡಿ ಸಂಪನ್ಮೂಲ ಕ್ರೋಡೀಕರಿಸುವುದು. ಇಂತಹ ಸರ್ಕಸ್ಸುಗಳ ಸಂಕೋಲೆಯಲ್ಲಿ ಕೆಲಸವಾದರೆ ಆಯಿತು. ಇಲ್ಲದಿದ್ದರೆ ಇಲ್ಲ. ಆದ ಕೆಲಸವೂ ಅಪೂರ್ಣ/ ಕಳಪೆ ಏನೂ ಆಗಬಹುದು. ಆಸ್ತಿ ಗುತ್ತಿಗೆ ಪಡೆದ ಖಾಸಗಿಯವರು ಲಾಭದ ಕೊಳ್ಳೆ ಹೊಡೆಯುವುದು ಮಾಮೂಲು.

ಕೋವಿಡ್ ಮಹಾಸಾಂಕ್ರಾಮಿಕ ಬಂದ ಸಮಯದಲ್ಲಿ ರೈಲ್ವೇ ತನ್ನ ಕಾರ್ಯಾಚರಣೆಯಲ್ಲಿ ಅಪಾರ ಕಡಿತ ಅನುಭವಿಸಿತು. ಆಸ್ತಿಗಳ ಸವಕಳಿಯಂತೂ ಇದ್ದೇ ಇರುತ್ತದೆ. ಆದ್ದರಿಂದಲೇ ಬಂಡವಾಳ ವೆಚ್ಚಕ್ಕಾಗಿ ದೊಡ್ಡ ಮೊತ್ತವನ್ನು ತೆಗೆದಿರಿಸುವ ಅವಶ್ಯಕತೆ ಇದ್ದೇ ಇತ್ತು. 2023–24 ರಲ್ಲಿ ದೊಡ್ಡ ಮೊತ್ತವನ್ನೇ ತೆಗೆದಿರಿಸಿದ ಸರ್ಕಾರ, ತಾನು ಹಲವು ವರ್ಷಗಳು ‘ರಾಷ್ಟ್ರೀಯ ಮೂಲಸೌಕರ್ಯ ಪೈಪ್ ಲೈನ್’ ಮತ್ತು ನಂತರದಲ್ಲಿ ‘ರಾಷ್ಟ್ರೀಯ ರೈಲು ಯೋಜನೆ’ ಗಳಂತಹ ಜೂಜಾಟಗಳಲ್ಲಿ ತೊಡಗಿ ರೈಲ್ವೇಯನ್ನು ಬಡವಾಗಿಸಿತು. ಅದನ್ನು ಈಗಲಾದರೂ ತುಂಬುವ ಕೆಲಸವನ್ನು ಮಾಡಬೇಕಿತ್ತು. ಅಂತಹ ಕಾಳಜಿಗಳು ಈ ಸರ್ಕಾರಕ್ಕಿಲ್ಲ.

ಜಾಲಸಾಮರ್ಥ್ಯದ ಬಿಕ್ಕಟ್ಟುಗಳು

ಭಾರತೀಯ ರೈಲಿನಲ್ಲಿ ದೊಡ್ಡ ಕೊರತೆ ಕಾಣುತ್ತಿರುವುದು ಪಥಗಳ ಸಾಮರ್ಥ್ಯದಲ್ಲಿ. ಕೆಲವು ಪ್ರಮುಖ ಪಥಗಳಲ್ಲಿ ಹಳಿಗಳು ತಮ್ಮ ಸಾಮರ್ಥ್ಯಕ್ಕಿಂತ ಶೇ. 140–150 ಹೆಚ್ಚು ಭಾರವನ್ನು ನಿಭಾಯಿಸುತ್ತಿವೆ. ವ್ಯವಸ್ಥೆಯಲ್ಲಿನ ಅಪಾಯಗಳನ್ನು ವಿವಿಧ ರೀತಿಗಳಲ್ಲಿ ಮುಚ್ಚಿಟ್ಟು ರೈಲುಗಳನ್ನು ಓಡಿಸಲಾಗುತ್ತಿದೆ. ಇದು ಬೂದಿ ಮುಚ್ಚಿದ ಕೆಂಡದಂತೆ ಇದ್ದು, ಯಾವಾಗ ಭುಗಿಲೇಳುವ ಬೆಂಕಿಯಾಗುತ್ತದೆಯೋ ಹೇಳಲಾಗದು. ಇಂತಹ ಅಪಾಯ ವ್ಯವಸ್ಥೆಯ ಅಡಿಯಲ್ಲಿ ಹಾಸುಹೊಕ್ಕಾಗಿ ಅಡಗಿ ಕುಳಿತಿದೆ. ರೈಲು ಇಲಾಖೆಯ ನಿಯಮಗಳು ಮತ್ತು ಕೈಪಿಡಿಗಳಲ್ಲಿ ಇವೆಲ್ಲವುಗಳ ಗುಣಮಟ್ಟ ಮತ್ತು ನಿರ್ವಹಣೆಯ ಮಾನದಂಡಗಳನ್ನು ಸ್ಪಷ್ಟವಾಗಿಯೇ ನಮೂದಿಸಲಾಗಿದೆ.

ರೈಲು ಸಂರಕ್ಷಣಾ ಕೋಶ ಎಂಬುದು ರೈಲ್ವೇ ಯಲ್ಲಿ ಇದೆ. ಈ ಕೋಶಕ್ಕೆ ಅನುದಾನ ಅವಶ್ಯ ಪ್ರಮಾಣದಲ್ಲಿ ಬಂದರೆ ಅದು ಅವಶ್ಯ ನಿರ್ವಹಣಾ ಕಾರ್ಯಗಳನ್ನು ಕೈಗೆತ್ತಿಕೊಳ್ಳುತ್ತದೆ. ಕೊರತೆಯೇ ಅನುದಾನವಾದರೆ ಕೆಲಸ ಸೊರಗುತ್ತದೆ. ಇದು ರೈಲ್ವೇಯ ವಾಸ್ತವ. ಇದೇ ರೀತಿ ರೈಲು ಸುರಕ್ಷೆಗೆ ಕವಚ್ ಎಂಬ ತಂತ್ರಜ್ಞಾನದ ಮಾತನ್ನು ಆಡಲಾಗುತ್ತದೆ. ಕವಚ್ ಯೋಜನೆ ಅನುಷ್ಠಾನಗಳಿಸಲು ಬೇಕಾದ ಹಣಕಾಸನ್ನು ಅವಶ್ಯ ಪ್ರಮಾಣದಲ್ಲಿ ತೆಗೆದಿರಿಸಲಾಗಿಲ್ಲ. ಈ ನಡುವೆ ಬಾಲೇಶ್ವರ್ ಮತ್ತು ಜಲಪೈಗುರಿಯಂತಹ ಸ್ಥಳಗಳಲ್ಲಿ ದೊಡ್ಡ ರೈಲ್ವೇ ಅವಘಡಗಳು ಆಗಿ ಸಾವಿರಾರು ಜನ ಪ್ರಾಣ ಕಳೆದುಕೊಂಡು ಆಗಿದೆ. ಇಂಥ ಅವಘಡಗಳು ಆದಾಗ ಸಿಬ್ಬಂದಿಗಳನ್ನು ಹಳಿಯುವ ಪ್ರಯತ್ನಗಳೂ ಸರ್ಕಾರದಲ್ಲಿನ ಜವಾಬ್ದಾರಸ್ಥರಿಂದ ಆಗಿದೆ. ರೈಲು ಸುರಕ್ಷಾ ಆಯುಕ್ತರು ನಿಜವೇನು ಎಂದು ಎತ್ತಿ ತೋರಿಸಿಯೂ ಆಗಿದೆ. ಮೋದಿ ಸರ್ಕಾರಕ್ಕೆ ದೇಶದ ಜನರ ಬಗೆಗೆ ನಿಜವಾದ ಜವಾಬ್ದಾರಿ ಇದೆಯೇ ಎಂಬ ಪ್ರಶ್ನೆಯೇ ದೊಡ್ಡದಾಗಿ ಏಳುತ್ತದೆ.

ದೊಡ್ಡ ಖಯಾಲಿ ಸುರಕ್ಷೆ ಬಲಿ

ಕೋಷ್ಟಕ: ಬಂಡವಾಳ ವೆಚ್ಚ (ಕೋಟಿ ರೂಪಾಯಿಗಳಲ್ಲಿ)

ಸಾಲು	ಒಟ್ಟು	ಹೊಸ ಪಥಗಳು	ಹಳಿ ಪುನರುಜ್ಜೀವನ	ಹಳಿ ದುಪ್ಪಟ್ಟುಗೊಳಿಸುವಿಕೆ	ಚಲಿಸುವ ಸರಕು
2022–23	158160	24377	16326	25621	27576
2023–24 (ಬ.ಅ)	238202	31850	17297	30749	47510
2023–24 (ಪ.ಅ)	238611	34410	16826	35046	50325
2024–25 (ಬ.ಅ)	251124	34603	17652	29312	52314

#ಬ.ಅ–ಬಜೆಟ್ ಅಂದಾಜು, ಪ.ಅ– ಪರಿಷ್ಕೃತ ಅಂದಾಜು

ದೊಡ್ಡ ಖಯಾಲಿಯ ಯೋಜನೆಗಳಿಗೆ ಆದ್ಯತೆ ನೀಡಿರುವುದು ಈ ಸಮಸ್ಯೆಗಳನ್ನು ಇನ್ನೂ ದಟ್ಟಗೊಳಿಸಿವೆ. ವಂದೇ ಭಾರತ್ ರೈಲುಗಳು ಮತ್ತು ಕೆಲವು ಆಯ್ದ ಪ್ರಮುಖ ನಿಲ್ದಾಣಗಳ ಸೌಂದರ್ಯೀಕರಣ ಈ ಖಯಾಲಿಗಳು. ವಂದೇ ಭಾರತ್ ರೈಲುಗಳು ಒಟ್ಟಾರೆ ರೈಲುಗಳ ಆದ್ಯತೆಗಳನ್ನೇ ಹಾಳುಗೆಡವುತ್ತವೆ. ಯಾಕೆದರೆ ಈ ಅತೀ ವೇಗದ ರೈಲುಗಳು ಕಡಿಮೆ ವೇಗದ ರೈಲುಗಳನ್ನು (ಸರಕು ರೈಲು ಮತ್ತು ಪ್ಯಾಸ್ಸೆಂಜರ್ ರೈಲುಗಳನ್ನು) ತಡೆಹಿಡಿದು ಮುಂದಕ್ಕೆ ಹೋಗುತ್ತವೆ. ಸರಕು ರೈಲುಗಳು ರೈಲ್ವೆಗೆ ಅಪಾರ ಆದಾಯ ತಂದುಕೊಡುತ್ತವಾದರೂ, ಅವುಗಳಿಗೆ ಇಂತಹ ಕಡಿಮೆ ಆದ್ಯತೆ. ಪ್ಯಾಸೆಂಜರ್ ರೈಲುಗಳ ವೇಗ ಗಂಟೆಗೆ 50 ಕಿ.ಮೀ. ಆದರೆ, ಸರಕು ರೈಲುಗಳ ವೇಗ ಗಂಟೆಗೆ 25 ಕಿ.ಮೀ.ಗಳು.

ಪ್ಯಾಲೆಸ್ತೀನ್ ವಿರುದ್ಧದ ಇಸ್ರೇಲಿ ನರಮೇಧದಲ್ಲಿ ಭಾರತ ಸರ್ಕಾರವು ಶಾಮೀಲಾಗುತ್ತಿದೆ ಎಲ್ಲ ರಫ್ತು ಪರವಾನಿಗೆಗಳನ್ನು ರದ್ದುಮಾಡಿ–ಪ್ರಮುಖ ನಾಗರಿಕರ ಆಗ್ರಹ



ಇಸ್ರೇಲಿಗೆ ತನ್ನ ಮಿಲಿಟರಿ ಸರಬರಾಜು ಮತ್ತು ಶಸ್ತ್ರಾಸ್ತ್ರ ವ್ಯಾಪಾರ ಮುಂದುವರೆಸುತ್ತಿರುವ ಬಗ್ಗೆ ಭಾರತ ಸರಕಾರ ಉತ್ತರದಾಯಿಯಾಗಿರಬೇಕು ಎಂದು ಆಗ್ರಹಿಸಿರುವ ಒಂದು ಮಹತ್ವದ ಪತ್ರಿಕಾಗೋಷ್ಠಿ ಆಗಸ್ಟ್ ಒಂದರಂದು ದೇಶದ ರಾಜಧಾನಿ ನವದೆಹಲಿಯ ಪ್ರೆಸ್ ಕ್ಲಬ್‌ನಲ್ಲಿ ನಡೆಯಿತು. ಸರಕಾರದ ನಿಲುವಿನಿಂದ ಆತಂಕಿತರಾದ ಹಿರಿಯ ನಾಗರಿಕರ ಗುಂಪು ಆಯೋಜಿಸಿದ್ದ ಪತ್ರಿಕಾಗೋಷ್ಠಿಯಲ್ಲಿ ಲೇಖಕಿ ಅರುಂಧತಿ ರಾಯ್, ಸಿಪಿಐ(ಎಂ) ಪೊಲಿಟ್‌ಬ್ಯುರೊ ಸದಸ್ಯೆ ಬೃಂದಾ ಕಾರಟ್, ಹಿರಿಯ ವಕೀಲ ಪ್ರಶಾಂತ್ ಭೂಷಣ್, ಹಿರಿಯ ಪತ್ರಕರ್ತ ಸಿದ್ಧಾರ್ಥ್ ವರದರಾಜನ್, ಅರ್ಥಶಾಸ್ತ್ರಜ್ಞ ಜೀನ್ ಡ್ರೆಜ್, ಮಾಜಿ ಐಎಫ್‌ಎಸ್ ಅಧಿಕಾರಿ ಅಶೋಕ್ ಶರ್ಮಾ ಮಾತನಾಡಿದರು. ಎಂ.ಜೆ. ವಿಜಯನ್ ಈ ಗೋಷ್ಠಿಯ ಸಂಯೋಜಕರಾಗಿದ್ದರು.

ಗೋಷ್ಠಿಯಲ್ಲಿ ಮಾತಾಡಿದವರು, ಭಾರತ ಸರಕಾರ ಇಸ್ರೇಲಿಗೆ ಮಿಲಿಟರಿ ಸಾಧನಗಳು ಮತ್ತು ಸಾಮಗ್ರಿಗಳ ಎಲ್ಲ ರಫ್ತು ಪರವಾನಿಗೆಗಳನ್ನು ರದ್ದುಮಾಡಬೇಕು, ಇಲ್ಲವಾದರೆ ಅದು ಪ್ಯಾಲೆಸ್ಟೈನ್ ವಿರುದ್ಧ ಇಸ್ರೇಲಿ ನರಮೇಧದಲ್ಲಿ ಶಾಮೀಲಾಗಿದೆ ಎಂದು ಹೇಳಬೇಕಾಗುತ್ತದೆ ಎಂದು ಎಚ್ಚರಿಸಿದರು. ಪ್ಯಾಲೆಸ್ತೀನ್‌ನ ಕಾನೂನುಬಾಹಿರ ಇಸ್ರೇಲಿ ಆಕ್ರಮಣಕ್ಕೆ ಮತ್ತು ಜನಾಂಗೀಯ ಹತ್ಯೆ ಕುರಿತ ಒಡಂಬಡಿಕೆಯನ್ನು ಉಲ್ಲಂಘಿಸುವ ಅದರ ಯುದ್ಧ ಭೀಕರತೆಗೆ ಯಾವುದೇ ಪ್ರಭುತ್ವ ಯಾವುದೇ ನೆರವು ನೀಡಬಾರದು ಎಂದು ನಿರ್ದೇಶಿಸಿದ ಅಂತರ್ರಾಷ್ಟ್ರೀಯ ನ್ಯಾಯಾಲಯ(ಐಸಿಜೆ)ದ ತೀರ್ಪುಗಳಿಗೆ ಭಾರತದಿಂದ ನಿಂದನೆಯಾದಂತಾಗಿದೆ ಎಂದು ಒತ್ತಿ ಹೇಳಿದರು. ಅದಾನಿ–ಇಸ್ರೇಲಿ ಜಂಟಿ ಕಂಪನಿ ಸೇರಿದಂತೆ ಮೂರು ಭಾರತೀಯ ಕಂಪನಿಗಳು ಇಸ್ರೇಲ್‌ಗೆ ಡ್ರೋನ್‌ಗಳು ಮತ್ತು ಸ್ಫೋಟಕಗಳನ್ನು ರಫ್ತು ಮಾಡುತ್ತಿವೆ. ಪ್ಯಾಲೆಸ್ತೀನ್ ವಿರುದ್ಧ ಮೇಡ್ ಇನ್ ಇಂಡಿಯಾ ಶಸ್ತ್ರಾಸ್ತ್ರಗಳನ್ನು ಬಳಸಲಾಗುತ್ತಿದೆ. ಈ ವಿಷಯಗಳನ್ನು ಸಂಸತ್ತಿನಲ್ಲಿ ಪ್ರಸ್ತಾಪಿಸುವಂತೆ ಸಂಸದರನ್ನು ಒತ್ತಾಯಿಸಲಾಯಿತು.

ಈ ಕುರಿತು ಬೃಂದಾ ಕಾರಟ್ ನೀಡಿರುವ ಹೇಳಿಕೆಯನ್ನು ಈ ಮುಂದೆ ಕೊಡಲಾಗಿದೆ:

ಪ್ಯಾಲೇಸ್ಟಿನಿಯನ್ ಸ್ವಾತಂತ್ರ್ಯಕ್ಕೆ ನಮ್ಮ ಆಳವಾದ ಮತ್ತು ನಿರಂತರವಾದ ಸೌಹಾರ್ದಕ್ಕಾಗಿ ಪ್ಯಾಲೆಸ್ಟೈನ್ ಜನತೆ ಮತ್ತು ಮಕ್ಕಳ ವಿರುದ್ಧ ನಿರಂತರವಾದ ಅನಾಗರಿಕ ಭೀಕರ ಕೃತ್ಯ ನಡೆಸುತ್ತಿರುವ ಅಪರಾಧಿಗಳಿಗೆ ಸಹಾಯ ಮಾಡುವ ಕ್ರಮಗಳಿಗೆ ನಮ್ಮದೇ ಸರ್ಕಾರವನ್ನು ಜವಾಬುದಾರರಾಗಿ ಮಾಡುವ ಅಗತ್ಯವಿದೆ.

ಈ ಹಿನ್ನೆಲೆಯಲ್ಲಿ ನಾವು ಈ ಪತ್ರಿಕಾಗೋಷ್ಠಿಯನ್ನು ಉದ್ದೇಶಿಸಿ ಮಾತನಾಡುತ್ತಿದ್ದೇವೆ. ಇಸ್ರೇಲ್‌ಗೆ ಮಿಲಿಟರಿ ಶಸ್ತ್ರಾಸ್ತ್ರ ಮತ್ತು ಉಪಕರಣಗಳನ್ನು ಪೂರೈಸುವ ಕಂಪನಿಗಳಿಗೆ ಎಲ್ಲಾ ಪರವಾನಗಿಗಳನ್ನು ಭಾರತ ಸರ್ಕಾರ ರದ್ದುಗೊಳಿಸಬೇಕು ಮತ್ತು ಹೊಸ ಪರವಾನಗಿಗಳನ್ನು ನೀಡುವುದನ್ನು ನಿಲ್ಲಿಸಬೇಕು ಎಂದು ಒತ್ತಾಯಿಸಲು ನಾವು ಇಂದು ಇಲ್ಲಿದ್ದೇವೆ. ಈ ಕಂಪನಿಗಳಲ್ಲಿ ಒಂದಾದ, ಅದಾನಿ–ಎಲ್ಬಿಟ್, ಡ್ರೋನ್‌ಗಳನ್ನು ತಯಾರಿಸಲು ಅದಾನಿ ಮತ್ತು ಹೈದರಾಬಾದ್ ಮೂಲದ ಇಸ್ರೇಲಿ ಕಂಪನಿಯ ನಡುವಿನ ಜಂಟಿ ಉದ್ಯಮವಾಗಿದೆ, ನಂತರ ಅದನ್ನು ಇಸ್ರೇಲ್‌ಗೆ ರಫ್ತು ಮಾಡಲಾಗುತ್ತದೆ. ಡ್ರೋನ್‌ಗಳು ಮತ್ತು ಸ್ಫೋಟಕಗಳು ಸೇರಿದಂತೆ ಈ ಮೇಡ್ ಇನ್ ಇಂಡಿಯಾ ಉಪಕರಣಗಳನ್ನು ಪ್ಯಾಲೆಸ್ಟೈನ್ ಜನರ ವಿರುದ್ಧದ ನರಮೇಧದ ಯುದ್ಧದಲ್ಲಿ ಬಳಸಲಾಗುತ್ತಿದೆ. ಶತಕೋಟಿ ಡಾಲರ್ ಮೌಲ್ಯದ ಇಸ್ರೇಲಿ ಮಿಲಿಟರಿ ಮತ್ತು ಭದ್ರತಾ ಉಪಕರಣಗಳ ಆಮದನ್ನು ಭಾರತ ಸರ್ಕಾರ ನಿಲ್ಲಿಸಬೇಕೆಂದು ಒತ್ತಾಯಿಸಲು ನಾವು ಇಲ್ಲಿದ್ದೇವೆ. ಭಾರತ ಇಸ್ರೇಲಿ ಉಪಕರಣಗಳ ಅತಿ ಹೆಚ್ಚು ಖರೀದಿದಾರ ದೇಶವಾಗಿದೆ. ಇಸ್ರೇಲ್‌ಗೆ ಭಾರತದ ಪಾವತಿಗಳು ನೇರವಾಗಿ ಇಸ್ರೇಲ್ ಸರ್ಕಾರದ ಆರ್ಥಿಕ ಆರೋಗ್ಯಕ್ಕೆ ನೆರವಾಗಿ ಅದು ತನ್ನ ನರಹಂತಕ ಯುದ್ಧವನ್ನು ಮುಂದುವರಿಸಲು ಸಹಾಯ ಮಾಡುತ್ತವೆ. ಇಸ್ರೇಲ್‌ನಿಂದ ಪ್ಯಾಲೆಸ್ತೀನ್ ಕಾರ್ಮಿಕರಿಗೆ ಅವರ ತಮ್ಮ ಜೀವನೋಪಾಯವನ್ನು ನಿರಾಕರಿಸಿ, ಅವರ ಬದಲಿಗೆ ಭಾರತೀಯ ಕಾರ್ಮಿಕರ, ಮುಖ್ಯವಾಗಿ ನಿರ್ಮಾಣ ಕಾರ್ಮಿಕರ ಪೂರೈಕೆಯನ್ನು ಭಾರತ ನಿಲ್ಲಿಸಬೇಕೆಂದು ಒತ್ತಾಯಿಸಲು ನಾವು ಇಲ್ಲಿದ್ದೇವೆ. ಭಾರತೀಯ ಕಾರ್ಮಿಕರ ಪೂರೈಕೆಗಾಗಿ ಇಸ್ರೇಲ್‌ನ ವಿನಂತಿಯನ್ನು ಸ್ವೀಕರಿಸುವ ಮೂಲಕ, ಭಾರತ ಸರ್ಕಾರವು ಪ್ಯಾಲೆಸ್ಟೀನಿಯರ ವಿರುದ್ಧ ವರ್ಣಭೇದ ನೀತಿ ಮತ್ತು ಜನಾಂಗೀಯ ಶುದ್ಧೀಕರಣ ನೀತಿಗಳಲ್ಲಿ ಇಸ್ರೇಲ್ ಸರ್ಕಾರಕ್ಕೆ ಬೆಂಬಲದ ಸೂಚನೆ ನೀಡಿದೆ. ಸರಳ ಭಾಷೆಯಲ್ಲಿ ಹೇಳುವುದಾದರೆ, ಪ್ಯಾಲೆಸ್ಟೈನ್ ಜನರ ವಿರುದ್ಧ ನಡೆಯುತ್ತಿರುವ ನರಮೇಧದಲ್ಲಿ ಭಾರತ ಸರ್ಕಾರವು ಶಾಮೀಲಾಗಿದೆ ಎಂದು ನಾವು ದನಿಯೆತ್ತಿ ಹೇಳುತ್ತಿದ್ದೇವೆ.

ಅದು ಶಾಮೀಲಾಗಿದೆ ಎಂದು ನಾವು ಏಕೆ ಹೇಳುತ್ತೇವೆ? ಹಲವಾರು ಇತರ ದೇಶಗಳಿಂದ ಬೆಂಬಲ ಪಡೆದ ದಕ್ಷಿಣ ಆಫ್ರಿಕಾದ ಮನವಿಯ ವಿಚಾರಣೆ ನಡೆಸಿದ ಅಂತರರಾಷ್ಟ್ರೀಯ ನ್ಯಾಯಾಲಯವು (ಐಸಿಜೆ) ಇಸ್ರೇಲ್ ಜನಾಂಗೀಯ ಹತ್ಯೆ ಕುರಿತ ಅಧಿನಿರ್ಣಯದ ಅಡಿಯಲ್ಲಿ ಕಟ್ಟುಪಾಡುಗಳನ್ನು ಉಲ್ಲಂಘಿಸುತ್ತಿದೆ ಮತ್ತು ಪ್ಯಾಲೇಸ್ಟಿನಿಯನ್ ಭೂಪ್ರದೇಶವನ್ನು ಅಕ್ರಮವಾಗಿ ವಶಪಡಿಸಿಕೊಂಡಿದೆ ಎಂದು ತೀರ್ಪು ನೀಡಿದೆ. ಅಂದರೆ ಪ್ಯಾಲೆಸ್ತೀನ್‌ನಲ್ಲಿ ನಡೆಯುತ್ತಿರುವುದು ನರಮೇಧ ಎಂದು ತೀರ್ಪು ನೀಡಿದೆ. ಇದಲ್ಲದೆ, ಜುಲೈ 19, 2024 ರಂದು ಅದರ ಎರಡನೇ ತೀರ್ಪಿನಲ್ಲಿ, ಎಲ್ಲಾ ಪ್ರಭುತ್ವಗಳು "ಆಕ್ರಮಿತ ಪ್ಯಾಲೇಸ್ಟಿನಿಯನ್ ಪ್ರಾಂತ್ಯಗಳಲ್ಲಿ ಇಸ್ರೇಲಿನ ಕಾನೂನುಬಾಹಿರ ಉಪಸ್ಥಿತಿಯಿಂದ ಉಂಟಾಗುವ ಪರಿಸ್ಥಿತಿಯನ್ನು ನಿರ್ವಹಿಸಲು ನೆರವು ಅಥವಾ ಸಹಾಯವನ್ನು ನೀಡದಿರಲು ಬಾಧ್ಯರಾಗಿವೆ" ಎಂದು ನಿರ್ದಿಷ್ಟವಾಗಿ ಹೇಳುತ್ತದೆ. ದೇಶಗಳು ಬಾಧ್ಯವಾಗಿವೆ ಎಂದು ನ್ಯಾಯಾಲಯವು ತೀರ್ಪು ನೀಡಿದಾಗ, ಅದರ ಕಾನೂನುಬಾಹಿರ ಆಕ್ರಮಣದಲ್ಲಿ ಇಸ್ರೇಲ್‌ಗೆ ಯಾವುದೇ ಬೆಂಬಲ ಅಥವಾ ಸಹಾಯವನ್ನು ಕಾನೂನುಬಾಹಿರವೆಂದು ಪರಿಗಣಿಸಲಾಗುತ್ತದೆ ಎಂದು ಸ್ಪಷ್ಟವಾಗಿ ಅರ್ಥ. ಆದರೂ ನ್ಯಾಯಾಲಯದ ತೀರ್ಪುಗಳ ಹೊರತಾಗಿಯೂ, ಭಾರತ ಸರ್ಕಾರವು ಇಸ್ರೇಲ್‌ನೊಂದಿಗೆ ತನ್ನ ಮಿಲಿಟರಿ, ಭದ್ರತೆ ಮತ್ತು ಆರ್ಥಿಕ ಸಂಬಂಧಗಳನ್ನು ಮುಂದುವರೆಸಿದೆ, ಅಂತರರಾಷ್ಟ್ರೀಯ ನ್ಯಾಯಾಲಯದ ನಿರ್ದೇಶನದಂತೆ ತನ್ನ ಬಾಧ್ಯತೆಗಳನ್ನು ಉಲ್ಲಂಘಿಸುತ್ತಿದೆ. ಐಸಿಜೆ ನ್ಯಾಯಾಧೀಶರು ವಿಶ್ವಸಂಸ್ಥೆಯ ಅಸೆಂಬ್ಲಿಯ ಜನರಲ್ ಕೌನ್ಸಿಲಿನಿಂದ ಚುನಾಯಿತರಾಗುತ್ತಾರೆ ಮತ್ತು ಭಾರತವು 15 ಸದಸ್ಯರ ಹಾಲಿ ಪೀಠದಲ್ಲಿ ತನ್ನ ಒಬ್ಬರು ನ್ಯಾಯಾಧೀಶರನ್ನು ಹೊಂದಿದೆ ಎಂಬುದನ್ನು ಗಮನಿಸಬೇಕು. ಭಾರತ ಅದರ ತೀರ್ಪನ್ನು ಉಲ್ಲಂಘಿಸುತ್ತಿದೆ. ಭಾರತವು ಐಸಿಜೆಗೆ ವಿವಿಧ ಸಂದರ್ಭಗಳಲ್ಲಿ ಐದು ಬಾರಿ ಮನವಿ ಮಾಡಿದೆ ಎಂಬುದನ್ನು ಮರೆಯಬಾರದು. ಇಂತಹ ನಿಲುವು ತಳೆಯುವ ಮೂಲಕ ಭಾರತ ಅಪಾಯಕಾರಿ ನಿದರ್ಶನವನ್ನು ಸ್ಥಾಪಿಸುತ್ತಿದೆ. ಇಸ್ರೇಲ್‌ನ ಮೇಲೆ ಶಸ್ತ್ರಾಸ್ತ್ರ ನಿರ್ಬಂಧವನ್ನು ಒತ್ತಾಯಿಸುವ ವಿಶ್ವಸಂಸ್ಥೆಯ ಮಾನವ ಹಕ್ಕುಗಳ ಮಂಡಳಿಯ ನಿರ್ಣಯದ ಮೇಲೆ ಜಾಗತಿಕ ದಕ್ಷಿಣದ ಇತರ ದೇಶಗಳೊಂದಿಗೆ ಮತ ಚಲಾಯಿಸಲು ಭಾರತ ನಿರಾಕರಿಸುವಲ್ಲಿ ಸಹ ಈ ಶಾಮೀಲು ಬಿಂಬಿತವಾಗಿದೆ. ಈ ಮತದಾನದಲ್ಲಿ ಭಾರತ ಗೈರುಹಾಜರಾಯಿತು.


ಈ ಕ್ರಮಗಳ ಮೂಲಕ ಮೋದಿ ಸರ್ಕಾರವು ಇಸ್ರೇಲ್‌ಗೆ ಮಿಲಿಟರಿ ಉಪಕರಣಗಳನ್ನು ಪೂರೈಸುವುದುನ್ನು ಮುಂದುವರೆಸುತ್ತಿರುವ ಅಮೇರಿಕಾ ಸಂಯುಕ್ತ ಸಂಸ್ಥಾನಗಳ ನೇತೃತ್ವದ ನಾಚಿಕೆಗೇಡಿ ಪಟ್ಟಿಗೆ ಸೇರಿದೆ. ಭಾರತ ಈಗ ಸೇರ್ಪಡೆಗೊಂಡಿರುವ ಈ ಪಟ್ಟಿಯಲ್ಲಿ ಏಷ್ಯಾದ ಇನ್ನೊಂದು ದೇಶವೆಂದರೆ, ಅಮೆರಿಕದ ಮಿಲಿಟರಿ ಮಿತ್ರರಾಷ್ಟ್ರವಾದ ದಕ್ಷಿಣ ಕೊರಿಯಾ ಮಾತ್ರ. ಭಾರತ ಜಾಗತಿಕ ದಕ್ಷಿಣದ ಘೋಷಿತ ನಾಯಕ ಎಂದೆನಿಸಿಕೊಂಡಿರುವುದಕ್ಕೆ ಇಷ್ಟು ಸಾಕು!

"ಮಾನವೀಯ ಕದನ ವಿರಾಮ"ಕ್ಕೆ ಬೆಂಬಲವನ್ನು ಪುನರುಚ್ಚರಿಸುವ ಅಸ್ಪಷ್ಟ ಹೇಳಿಕೆಗಳಿಂದ ಮೋದಿ ಸರ್ಕಾರದ ಶಾಮೀಲನ್ನು ಮರೆಮಾಡಲು ಸಾಧ್ಯವಿಲ್ಲ. ಪ್ಯಾಲೆಸ್ತೀನ್‌ಗೆ ಭಾರತದ ಸಾಂಪ್ರದಾಯಿಕ ಬೆಂಬಲವು ಸ್ವಾತಂತ್ರ್ಯ ಹೋರಾಟ ಮತ್ತು ನಂತರದವರೆಗೆ ಹೋಗುತ್ತದೆ. ನಂತರ ಅದರ ನಿಲುವು 1967 ರ ಗಡಿಗಳು ಮತ್ತು ಪೂರ್ವ ಜೆರುಸಲೆಮ್ ಅನ್ನು ಅದರ ರಾಜಧಾನಿಯಾಗಿ ಹೊಂದಿರುವ ಪ್ಯಾಲೆಸ್ಟೈನ್ ಸ್ವತಂತ್ರ ಪ್ರಭುತ್ವಕ್ಕೆ ಬೆಂಬಲದ ತತ್ವವನ್ನು ಆಧರಿಸಿದೆ. ಪ್ಯಾಲೆಸ್ಟೈನ್‌ನದ್ದು ಸ್ವಾತಂತ್ರ್ಯಕ್ಕಾಗಿ, ಇಸ್ರೇಲಿನ ಯುಎಸ್–ಬೆಂಬಲಿತ ಅಕ್ರಮ ಅಧೀನದಿಂದ ವಿಮೋಚನೆಗಾಗಿ ಮಾಡುತ್ತಿರುವ ಹೋರಾಟವಾಗಿದೆ, ಇದು ಯಾವುದೇ ರೀತಿಯ ಧಾರ್ಮಿಕ ಯುದ್ಧ ಎಂದು ಕರೆಯಲ್ಪಡುವುದಿಲ್ಲ. ಆದರೂ ಆಳುವ ಪಕ್ಷದ ಸಮಸ್ತ ವ್ಯವಸ್ಥೆ ಮತ್ತು ಅದರ ಬೆಂಬಲಿತ ಪರಿವಾರ ತಮ್ಮದೇ ಆದ ಸಂಕುಚಿತ ಸಿದ್ಧಾಂತಕ್ಕೆ ಅನುಗುಣವಾಗಿ ಅಭಿಯಾನವನ್ನು ನಡೆಸುತ್ತಿವೆ, ಇಸ್ಲಾಮಿಕ್ ಜಿಹಾದಿಗಳ ವಿರುದ್ಧ ಇಸ್ರೇಲ್ ಹೋರಾಡುತ್ತಿದೆ, ಇದನ್ನು ಭಾರತ ಬೆಂಬಲಿಸುತ್ತದೆ ಎಂದು ಪ್ರಚಾರ ಮಾಡುತ್ತಿವೆ. ಆಡಳಿತದ ಉನ್ನತ ನಾಯಕರು ಈ ಭಾಷೆಯನ್ನು ಬಳಸಿದ್ದಾರೆ. ಇದು ಆಳುವ ಪಕ್ಷದ ಸಿದ್ಧಾಂತವಾದ ಹಿಂದುತ್ವ ಮತ್ತು ಇಸ್ರೇಲ್‌ನ ಜಿಯೋನಿಸ್ಟ್ ಆಳ್ವಿಕೆಯ ನಡುವಿನ ಆಳವಾದ ಸೈದ್ಧಾಂತಿಕ ಸಂಬಂಧ. ಇದು ಪ್ಯಾಲೆಸ್ತೀನ್ ಜನರ ವಿಮೋಚನಾ ಹೋರಾಟಕ್ಕೆ ಭಾರತದ ಅಧಿಕೃತ ನೀತಿಯನ್ನು ಸಂಪೂರ್ಣವಾಗಿ ತಿರುವು ಮುರುವುಗೊಳಿಸಿರುವ ಅಕ್ಷ. ಆರೆಸ್ಸೆಸ್ ಮುಖ್ಯಸ್ಥ ಮೋಹನ್ ಭಾಗವತ್ ನವೆಂಬರ್ 2014ರಲ್ಲಿ ಭಾರತವು "ರಾಷ್ಟ್ರೀಯತೆಗಾಗಿ ಕೆಲಸ ಮಾಡುತ್ತಿರುವಾಗ ಇಸ್ರೇಲ್ ಮಾರ್ಗವನ್ನು" ಅನುಸರಿಸಬೇಕು ಎಂದು ಹೇಳಿದ್ದರು. ರಾಷ್ಟ್ರೀಯತೆಯನ್ನು ಧರ್ಮದಿಂದ ನಿರ್ಧರಿಸಲಾಗುತ್ತದೆ ಎಂದು ಇಬ್ಬರೂ ನಂಬುತ್ತಾರೆ–ಇಬ್ಬರೂ "ಇತರರನ್ನು" ರಾಕ್ಷಸರೆಂದು ಗುರುತಿಸಬೇಕು ಮತ್ತು ಮುಸ್ಲಿಮರು/ಇಸ್ಲಾಮ್‌ನ್ನು ದಾಳಿಗೆ ಗುರಿಪಡಿಸಬೇಕು ಎಂದು ನಂಬಿವೆ.

ಹೀಗಾಗಿ, ಝಿಯೋನಿಸ್ಟ್ ಇಸ್ರೇಲ್‌ಗೆ ಬೆಂಬಲವು ದೇಶದೊಳಗೆ ಹಿಂದುತ್ವ ರಾಷ್ಟ್ರದ ಅದರ ಸಂಕುಚಿತ, ಸಂವಿಧಾನ–ವಿರೋಧಿ ಅಜೆಂಡಾದ ಆಧಾರದ ಮೇಲೆ ಅಣಿನೆರೆಸುವುದರ ಒಂದು ಭಾಗವಾಗಿದೆ. ಅಲ್ಲದೆ, ನೆತನ್ಯಾಹು ತನ್ನ ಸ್ವಂತ ರಾಜಕೀಯ ವೃತ್ತಿಜೀವನಕ್ಕಾಗಿ ಯುದ್ಧವನ್ನು ದೀರ್ಘ ಎಳೆಯುವುದರಲ್ಲಿ ತೊಡಗಿದ್ದಾರೆ. ಯುದ್ಧದ ಅಂತ್ಯಕ್ಕಾಗಿ ಮಾತುಕತೆಗಳನ್ನು ಮುನ್ನಡೆಸುತ್ತಿದ್ದ ಹಮಾಸ್ ನಾಯಕ ಹನಿಯೆಹ್ ಅವರ ರಾಜಕೀಯ ಹತ್ಯೆಯು ಯುದ್ಧದ ವೇಗವನ್ನು ಹೆಚ್ಚಿಸುವ ಮತ್ತು ಹೆಚ್ಚು ದೇಶಗಳನ್ನು ನೇರವಾಗಿ ಯುದ್ಧಕ್ಕೆ ಸೆಳೆಯುವ ಉದ್ದೇಶಪೂರ್ವಕ ಕೃತ್ಯವಾಗಿದೆ. ಇದು ಇಸ್ರೇಲ್ ಪ್ರಧಾನಿಗೆ ಲಾಭದಾಯಕವಾಗಿದೆ, ಖಂಡಿತವಾಗಿಯೂ ಭಾರತದ ಹಿತಾಸಕ್ತಿಗೆ ಅನುಗುಣವಾಗಿಲ್ಲ.

ಮೋದಿ ಸರ್ಕಾರದ ಈ ನೀತಿಯಿಂದಾಗಿ ಭಾರತವನ್ನು ವಿಶ್ವದಾದ್ಯಂತ ಲಕ್ಷಾಂತರ ಜನರು ಮತ್ತು ವಿಶೇಷವಾಗಿ ಯುವಜನರು ಹಗಲಿರುಳು ಪ್ಯಾಲೆಸ್ತೀನ್ ಜನರೊಂದಿಗೆ ಸೌಹಾರ್ದದಿಂದ ಬೀದಿಗಿಳಿಯುತ್ತಿರುವಾಗ ಈ ನರಮೇಧದಲ್ಲಿ ಶಾಮೀಲಾಗಿದೆ ಎಂದು ಗುರುತಿಸುತ್ತಿದ್ದಾರೆ ಎಂಬುದು ಪ್ರತಿಯೊಬ್ಬ ಭಾರತೀಯರಿಗೂ ನಾಚಿಕೆಗೇಡಿನ ಸಂಗತಿಯಾಗಿದೆ. ನಾವು, ಭಾರತವು ಸದಾ ಯುದ್ಧದ ಬೇಷರತ್ ಅಂತ್ಯದ, ಸ್ವಾತಂತ್ರ್ಯದ, ಆಕ್ರಮಣದ ಅಂತ್ಯದ ಮತ್ತು ಶಾಂತಿಯ ಪ್ಯಾಲೆಸ್ತೀನ್ ಹೋರಾಟದ ಪರವಾಗಿ ಇತ್ತು ಮತ್ತು ಯಾವಾಗಲೂ ಇರುತ್ತದೆ ಎಂದು ಜಗತ್ತಿಗೆ ಸಾರಿ ಹೇಳಬೇಕಾಗಿದೆ. ಕೆಲವು ಅಪವಾದಗಳನ್ನು ಹೊರತುಪಡಿಸಿ, ಈ ವಿಷಯದ ಬಗ್ಗೆ ವಿರೋಧ ಪಕ್ಷಗಳು ಮಾತನಾಡುವುದನ್ನು ನಾವು ಕೇಳಿಲ್ಲ. ಮೌನವು ಒಂದು ಆಯ್ಕೆಯಾಗಿಲ್ಲ. ಇಂದು ಸರ್ಕಾರವು ತನ್ನ ಸ್ನೇಹಿತರ ಕಾರ್ಪೊರೇಟ್ ಹಿತಾಸಕ್ತಿಗಳನ್ನು ನ್ಯಾಯದ ತತ್ವಗಳನ್ನು ಮೀರಿ ಮೇಲೆ ರಕ್ಷಿಸುತ್ತಿದೆ, ಇದು ಐಸಿಜೆಯ ಉಲ್ಲಂಘನೆ, ಇಸ್ರೇಲ್‌ನೊಂದಿಗೆ ಮಿಲಿಟರಿ ಮತ್ತು ಭದ್ರತಾ ಪೂರೈಕೆ ವ್ಯಾಪಾರವನ್ನು ಕೊನೆಗೊಳಿಸಬೇಕೆಂಬ ಈ ಬೇಡಿಕೆಯು ಸಂಸತ್ತಿನಲ್ಲೂ ಪ್ರತಿಧ್ವನಿಸುತ್ತದೆ ಎಂದು ನಾವು ಆಶಿಸುತ್ತೇವೆ.

ಪ್ಯಾಲೆಸ್ಟೈನ್‌ಗೆ ಸ್ವಾತಂತ್ರ್ಯ. ನರಹಂತಕ ಯುದ್ಧ ಕೊನೆಗೊಳ್ಳಬೇಕು.



ಯುಎಸ್, ಕೆನಡಾದ ‘ನೆಲಸಿಗ ವಸಾಹತು’ಗಳು ಮತ್ತು ಭಾರತ, ಇಂಡೋನೇಸ್ಯಾದ ‘ಅಧೀನ ವಸಾಹತು’ಗಳು

18ನೇ ಶತಮಾನದ ಹಿರಿಯ ಅರ್ಥಶಾಸ್ತ್ರಜ್ಞ ಆಡಂಸ್ಮಿತ್ ತಮ್ಮ ಕಾಲದ ಉತ್ತರ ಅಮೆರಿಕಾ ಪ್ರಗತಿಶೀಲ ಪ್ರಭುತ್ವಕ್ಕೂ, ಬಂಗಾಳವು ಅವನತಿಯಲ್ಲಿರುವ ಪ್ರಭುತ್ವಕ್ಕೂ ಉದಾಹರಣೆ ಎಂದಿದ್ದರು. ಅವರು ಗಮನಿಸಿದ ಆ ವ್ಯತ್ಯಾಸಗಳು ಆಗ ಸಂಪೂರ್ಣವಾಗಿ ಸಮಂಜಸವಾಗಿದ್ದವು. ಆದರೆ ಅದಕ್ಕೆ ಸ್ಮಿತ್ ಗುರುತಿಸಿದ ಕಾರಣವು ತಪ್ಪಾಗಿತ್ತು. ನಿಜವ್ಯತ್ಯಾಸವಿರುವುದು ಯುರೋಪಿಯನ್ನರ ವಲಸೆಯಿಂದ ರೂಪುಗೊಂಡ "ನೆಲಸಿಗ ವಸಾಹತು” ಮತ್ತು ಯುರೋಪಿನ ದೇಶಗಳು ವಶಪಡಿಸಿಕೊಂಡ "ಅಧೀನ ವಸಾಹತು"ಗಳ ನಡುವೆ. ಇವುಗಳ ಅಭಿವೃದ್ಧಿಯ ದಿಕ್ಪಥಗಳು ಸಂಪೂರ್ಣವಾಗಿ ವಿಭಿನ್ನವಾಗಿವೆ. ಆಡಮ್ ಸ್ಮಿತ್ 1776ರಲ್ಲಿ ಈ ಅಂಶಗಳನ್ನು ಮನಗಂಡಿರಲಿಲ್ಲ. ಇದಕ್ಕೆ ವಿನಾಯ್ತಿ ಇದೆ. ಆದರೆ, ಅಮೆರಿಕಾ ಮತ್ತು ಕೆನಡಾ ದೇಶಗಳು ಹಿಂದೆ ಅಭಿವೃದ್ಧಿ ಹೊಂದಿದ ರೀತಿಯಲ್ಲಿ ಈಗ ನವ–ಉದಾರವಾದಿ ಆಳ್ವಿಕೆಯ ಅಡಿಯಲ್ಲಿ ಭಾರತ ಮತ್ತು ಇಂಡೋನೇಷ್ಯಾದಂತಹ ದೇಶಗಳು ಅಭಿವೃದ್ಧಿ ಹೊಂದುತ್ತವೆ ಎಂದು ನಂಬುವವರ ತಪ್ಪುಗ್ರಹಿಕೆಗೆ ವಿನಾಯ್ತಿ ಇಲ್ಲ.


ಪ್ರೊ. ಪ್ರಭಾತ್ ಪಟ್ನಾಯಕ್
ಅನು: ಕೆ.ಎಂ.ನಾಗರಾಜ್

ಆಡಮ್ ಸ್ಮಿತ್, 1776 ರಲ್ಲಿ ಪ್ರಕಟವಾದ ‘ದ ವೆಲ್ತ್ ಆಫ್ ನೇಷನ್ಸ್’ ಎಂಬ ತಮ್ಮ ಮೇರು ಕೃತಿಯಲ್ಲಿ, ಒಂದು ಪ್ರಗತಿಶೀಲ ಪ್ರಭುತ್ವ, ಒಂದು ಸ್ಥಗಿತ ಪ್ರಭುತ್ವ ಮತ್ತು ಒಂದು ಅವನತಿಯಲ್ಲಿರುವ ಪ್ರಭುತ್ವ ಇವುಗಳ ಪ್ರತ್ಯೇಕ ಗುಣಲಕ್ಷಣಗಳನ್ನು ಗುರುತಿಸಿದ್ದರು. ಪ್ರಗತಿಶೀಲ ಪ್ರಭುತ್ವದಲ್ಲಿ ಬಂಡವಾಳದ ಶೇಖರಣೆಯು ಜನಸಂಖ್ಯೆಯ ಬೆಳವಣಿಗೆಗಿಂತ ವೇಗವಾಗಿರುತ್ತದೆ. ಆದ್ದರಿಂದ, ಅಲ್ಲಿ ವೇತನಗಳ ಏರಿಕೆಯಾಗುತ್ತದೆ ಮತ್ತು ಜನಸಂಖ್ಯೆಯೂ ಬೆಳೆಯುತ್ತದೆ. ಅವನತಿಯ ಪ್ರಭುತ್ವದಲ್ಲಿ ಪರಿಸ್ಥಿತಿ ತದ್ವಿರುದ್ಧವಾಗಿರುತ್ತದೆ ಮತ್ತು ಸ್ಥಗಿತ ಪ್ರಭುತ್ವದಲ್ಲಿ ಬಂಡವಾಳದ ಶೇಖರಣೆ ಮತ್ತು ಜನಸಂಖ್ಯೆಯ ಬೆಳವಣಿಗೆ ನಿಂತಲ್ಲೇ ಉಳಿಯುವ ಕಾರಣದಿಂದ ಕಾರ್ಮಿಕರ ಸಂಖ್ಯಾ ಬಲ ಮತ್ತು ಅವರ ವೇತನ ಮಟ್ಟ ಇದ್ದಲ್ಲೇ ಇರುತ್ತವೆ ಹಾಗೂ ಅವು ಒಂದು ಪ್ರಗತಿಶೀಲ ಪ್ರಭುತ್ವದಲ್ಲಿ ಇರುವ ಮಟ್ಟದ ಕೆಳಗಿರುತ್ತವೆ. ಈ ಎಲ್ಲ ಅಂಶಗಳನ್ನು ಗಮನಿಸಿದ ಅವರು ಹೀಗೆ ವ್ಯಾಖ್ಯಾನಿಸಿದರು: "ಕಾರ್ಮಿಕರ ವೇತನಗಳಲ್ಲಿ ಹೆಚ್ಚಳ ಉಂಟಾಗುವುದು ರಾಷ್ಟ್ರದ ಸಂಪತ್ತಿನ ನಿರಂತರ ವೃದ್ಧಿಯ ಕಾರಣದಿಂದ; ಅದರ ಉದಾತ್ತತೆಯ ಕಾರಣದಿಂದಲ್ಲ." ಮುಂದುವರೆದು “ಪ್ರಗತಿಶೀಲ ಪ್ರಭುತ್ವ ಸಮಾಜದಲ್ಲಿ ಎಲ್ಲ ವರ್ಗದವರೂ ಸಂತಸದಿಂದ ಮತ್ತು ಸೌಹಾರ್ದದಿಂದ ಇರುತ್ತದೆ. ಸ್ಥಗಿತ ಪ್ರಭುತ್ವ ಮಂಕು ಬಡಿದವರಂತೆ ಮತ್ತು ಅವನತಿಯ ಪ್ರಭುತ್ವ ವ್ಯಾಕುಲಗೊಂಡಿರುತ್ತದೆ” ಎಂದೂ ಹೇಳಿದ್ದರು. ಅವರ ಪ್ರಕಾರ, ಉತ್ತರ ಅಮೆರಿಕಾದ ಪ್ರಭುತ್ವವು ಪ್ರಗತಿಶೀಲತೆಗೂ, ಬಂಗಾಳವು ಅವನತಿಯಲ್ಲಿರುವ ಪ್ರಭುತ್ವಕ್ಕೂ ಮತ್ತು ಚೀನಾ ಸ್ಥಿರತೆಯ ಪ್ರಭುತ್ವಕ್ಕೂ ಉದಾಹರಣೆಯಾಗಿದ್ದವು.

ಉತ್ತರ ಅಮೇರಿಕಾ ಮತ್ತು ಬಂಗಾಳ ಇವುಗಳ ಸ್ಥಿತಿ–ಗತಿಗಳನ್ನು ಸ್ಮಿತ್ ಹೋಲಿಕೆ ಮಾಡಿ ನೋಡಿದರು. ಅವರು ಗಮನಿಸಿದ ವ್ಯತ್ಯಾಸಗಳು ಆ ಸಮಯದಲ್ಲಿ ಸಂಪೂರ್ಣವಾಗಿ ಸಮಂಜಸವಾಗಿದ್ದವು ಮಾತ್ರವಲ್ಲ, ಸೂಕ್ಷ್ಮ ಒಳನೋಟಗಳಿಂದ ಕೂಡಿದ್ದವು. ಹಾಗೆ ನೋಡಿದರೆ ಆಡಮ್ ಸ್ಮಿತ್ ಈ ಬಗ್ಗೆ ಬರೆದ ಸಮಯದಲ್ಲಿ ಬಂಗಾಳದಲ್ಲಿದ್ದ ನೈಜ ಪರಿಸ್ಥಿತಿಯು ಅವರು ಊಹಿಸಿದುದಕ್ಕಿಂತಲೂ ಕೆಟ್ಟದಾಗಿತ್ತು: ಮೊಘಲ್ ಚಕ್ರವರ್ತಿ ಶಾ ಆಲಂನಿಂದ ಬಂಗಾಳದ ಮೇಲಿನ ದಿವಾನಿಯನ್ನು ಈಸ್ಟ್ ಇಂಡಿಯಾ ಕಂಪನಿಯು ಸ್ವಾಧೀನಪಡಿಸಿಕೊಂಡ ನಂತರ, ಭೂ ಕಂದಾಯವನ್ನು ಎಷ್ಟು ತೀವ್ರವಾಗಿ ಏರಿಸಲಾತ್ತು ಎಂದರೆ, ಈ ಕ್ರಮವು 1770–72ರ ಅವಧಿಯಲ್ಲಿ ಬಂಗಾಳದಲ್ಲಿ ಒಂದು ಭೀಕರ ಕ್ಷಾಮವನ್ನು ಉಂಟುಮಾಡಿತು. ಅದರಲ್ಲಿ ಬಂಗಾಳದ ಜನಸಂಖ್ಯೆಯ ಸರಿಸುಮಾರು ಮೂರನೇ ಒಂದು ಭಾಗದಷ್ಟು ಜನರು (ಅಂದರೆ, 10 ಮಿಲಿಯನ್ ಜನರು) ಸತ್ತರು ಎಂದು ಅಂದಾಜು ಮಾಡಲಾಗಿದೆ.

ಆಡಂ ಸ್ಮಿತ್‌ರ ತಪ್ಪು ವಿವರಣೆ

ಬಂಡವಾಳದ ಶೇಖರಣೆ ಮತ್ತು ಜನಸಂಖ್ಯೆ ಈ ಎರಡೂ ಅಂಶಗಳು ಬಂಗಾಳದಲ್ಲಿ ಇಳಿಕೆಯಾಗುತ್ತಿದ್ದ ಅವಧಿಯಲ್ಲಿ ಉತ್ತರ ಅಮೇರಿಕಾದಲ್ಲಿ ಬಂಡವಾಳದ ಶೇಖರಣೆಯು ಏಕೆ ವೇಗವಾಗಿ ಸಂಭವಿಸಿತು ಎಂಬುದರ ಬಗ್ಗೆ ಆಡಮ್ ಸ್ಮಿತ್ ಕೊಟ್ಟ ವಿವರಣೆ ಏನೆಂದರೆ, ಉತ್ತರ ಅಮೇರಿಕಾವನ್ನು ಬ್ರಿಟಿಷ್ ಸರ್ಕಾರ ಆಳುತ್ತಿತ್ತು (ಇದನ್ನು 1775–76ರ ಅಮೆರಿಕಾದ ಸ್ವಾತಂತ್ರ್ಯದ ಯುದ್ಧ ನಡೆಯುವ ಮೊದಲೇ ಸ್ಮಿತ್ ಬರೆದಿದ್ದರು) ಮತ್ತು ಬಂಗಾಳವನ್ನು ಒಂದು ವ್ಯಾಪಾರಿ ಕಂಪನಿ,



ಈಸ್ಟ್ ಇಂಡಿಯ ಕಂಪನಿ, ಚಹಾ ಮತ್ತು ಮಸಾಲೆ ಪದಾರ್ಥಗಳ ವ್ಯಾಪಾರಿಗಳು, ಚಿತ್ರಕೃಪೆ: Flickr

ಅಂದರೆ ಈಸ್ಟ್ ಇಂಡಿಯಾ ಕಂಪನಿಯು ಆಳುತ್ತಿತ್ತು ಎಂಬುದು. laissez-faire (ಅಂದರೆ ‘ಏನಾದರೂ ಮಾಡಿಕೊಳ್ಳಲಿ’, ಅರ್ಥಶಾಸ್ತ್ರದಲ್ಲಿ, ವ್ಯಾಪಾರ ಮತ್ತು ಕೈಗಾರಿಕಾ ಚಟುವಟಿಕೆಗಳಲ್ಲಿ ಸರ್ಕಾರ ಭಾಗವಹಿಸದಿರುವ ನಿಲುವಿನ) ಬಂಡವಾಳಶಾಹಿಯ ಕಟ್ಟಾ ಸಮರ್ಥಕರಾಗಿದ್ದ ಮತ್ತು ವಾಣಿಜ್ಯವಾದಿ ಏಕಸ್ವಾಮ್ಯವನ್ನು ವಿರೋಧಿಸುತ್ತಿದ್ದ ಕಾರಣದಿಂದಾಗಿ ಈಸ್ಟ್ ಇಂಡಿಯಾ ಕಂಪನಿಯನ್ನು ದ್ವೇಷಿಸುತ್ತಿದ್ದ ಸ್ಮಿತ್ ಅವರ ಈ ವಿವರಣೆಯು ಆಶ್ಚರ್ಯಕರವಲ್ಲದಿದ್ದರೂ, ಅದು ಸಂಪೂರ್ಣವಾಗಿ ತಪ್ಪು.

ಆ ವೇಳೆಗಾಗಲೇ ಕಂಪನಿಯ ಆಳ್ವಿಕೆಗೆ ಒಳಪಟ್ಟಿದ್ದ ಬಂಗಾಳ ಮತ್ತು ಭಾರತದ ಉಳಿದ ಭಾಗಗಳನ್ನು, 1858ರಲ್ಲಿ ಬ್ರಿಟಿಷ್ ಸರ್ಕಾರವು ಭಾರತದ ಆಳ್ವಿಕೆಯನ್ನು 1857ರ ಬಂಡಾಯದ ನಂತರ ತನ್ನ ಕೈಗೆ ತೆಗೆದುಕೊಂಡಾಗ ಬಂಗಾಳದ ಅವನತಿ ನಿಲ್ಲಲಿಲ್ಲ; ಸ್ವಾತಂತ್ರ್ಯ ಬರುವವರೆಗೂ ಕ್ಷಾಮಗಳು ನಿಲ್ಲಲಿಲ್ಲ ಮತ್ತು ವಸಾಹತುಶಾಹಿ ಆಡಳಿತದ ಸುಲಿಗೆಕೋರತನ ಸ್ವಲ್ಪವೂ ಕಡಿಮೆಯಾಗಲಿಲ್ಲ. ಉತ್ತರ ಅಮೇರಿಕಾ ಮತ್ತು ಬಂಗಾಳದ ನಡುವೆ ಕಂಡುಬಂದ ಈ ವ್ಯತಿರಿಕ್ತ ಪರಿಸ್ಥಿತಿಗೆ ಸ್ಮಿತ್ ಗುರುತಿಸಿದ ಕಾರಣವು ತಪ್ಪಾಗಿತ್ತು. ನಿಜಸಂಗತಿಯೆಂದರೆ, ಉತ್ತರ ಅಮೇರಿಕಾ ಒಂದು "ನೆಲಸಿಗ ವಸಾಹತು"ವಾಗಿತ್ತು ಮತ್ತು ಬಂಗಾಳವು ಒಂದು "ಅಧೀನ ವಸಾಹತು" ಆಗಿತ್ತು.

ಸಮಶೀತೋಷ್ಣ ಪ್ರದೇಶಗಳಿಗೆ ವಲಸೆ ಹೋದ ಯುರೋಪಿಯನ್ನರು ಅಲ್ಲಿನ ಮೂಲ ನಿವಾಸಿಗಳನ್ನು ಅವರ ಭೂಮಿಯಿಂದಲೇ ಓಡಿಸಿದರು ಮತ್ತು ಯುರೋಪಿಯನ್ನರೊಂದಿಗೆ ಸಂಪರ್ಕಕ್ಕೆ ಬಂದೂ ಬದುಕುಳಿದವರನ್ನು “ಮೀಸಲು ಪ್ರದೇಶ” ಗಳನ್ನು ನಿರ್ಮಿಸಿ ಅವುಗಳಲ್ಲಿ ಕೂಡಿಹಾಕಿದರು. ಸ್ಥಳೀಯ ನಿವಾಸಿಗಳ ಭೂಮಿ–ಕಾಣಿ, ಮನೆ–ಮಠ, ಆಸ್ತಿ–ಪಾಸ್ತಿಗಳನ್ನು ಕಿತ್ತುಕೊಂಡರು. ಇಂತಹ ಕ್ರೌರ್ಯದ ಕ್ರಮಗಳ ಮೂಲಕ ಯೂರೋಪಿನ ವಲಸಿಗರು ವಸಾಹತುಗಳಲ್ಲಿ ಸ್ಥಿತಿವಂತ ರೈತರಾದರು ಅಥವ ಕೃಷಿಯ ಗುಣಕ ಪರಿಣಾಮಗಳ ಫಲವಾಗಿ ಉದ್ಭವಿಸಿದ ಹತ್ತು ಹಲವು ವೃತ್ತಿಗಳಲ್ಲಿ ತೊಡಗಿದರು. 1815 ಮತ್ತು 1914ರ ನಡುವೆ, ಸುಮಾರು 50 ಮಿಲಿಯನ್ ಯುರೋಪಿಯನ್ನರು, ಕೆನಡಾ, ಉತ್ತರ ಅಮೆರಿಕಾ, ಆಸ್ಟ್ರೇಲಿಯಾ, ನ್ಯೂಜಿಲೆಂಡ್ ಮತ್ತು ದಕ್ಷಿಣ ಆಫ್ರಿಕಾದಂತಹ ಬಿಳಿಯ ವಸಾಹತುಗಳ ಈ ಸಮಶೀತೋಷ್ಣ ಪ್ರದೇಶಗಳಿಗೆ ಯುರೋಪಿನಿಂದ ವಲಸೆ ಹೋದರು ಎಂದು ವಿದ್ವಾಂಸರು ಅಂದಾಜು ಮಾಡಿದ್ದಾರೆ (ಅದಕ್ಕೂ ಮೊದಲು ವಲಸೆ ನಡೆಯುತ್ತಿತ್ತು, ಆದರೆ ಪ್ರಮಾಣ ಸಣ್ಣದಿತ್ತು). ಇದೇ ಅವಧಿಯಲ್ಲಿ ಉಷ್ಣವಲಯ ವಲಸೆ ಭಾರತದಿಂದ ಮತ್ತು ಚೀನಾದಿಂದ ಕರಾರು ಅಥವ ಕೂಲಿ ಶ್ರಮದ ರೂಪದ ಮತ್ತು ಅದೇ ಪ್ರಮಾಣದ ಮತ್ತೊಂದು ವಲಸೆಯೂ ನಡೆಯಿತು. ಈ ಸನ್ನಿವೇಶದಲ್ಲಿ ಕಂಡು ಬಂದ ಒಂದು ಗಮನಾರ್ಹವಾದ ಸಂಗತಿಯೆಂದರೆ, ಯುರೋಪಿಯನ್ ವಲಸಿಗರು ನೆಲೆಸಿದ ಈ ಸಮಶೀತೋಷ್ಣ ವಲಯದ ದೇಶಗಳಲ್ಲಿ ಉಷ್ಣವಲಯದ ವಲಸಿಗರಿಗೆ ಅನಿರ್ಬಂಧಿತ ಪ್ರವೇಶಾವಕಾಶ ಇರಲಿಲ್ಲ ಎಂಬುದು. ವಾಸ್ತವವಾಗಿ, ಸಮಶೀತೋಷ್ಣ ವಲಯದ ಈ ದೇಶಗಳಿಗೆ ಇಂದಿಗೂ ಉಷ್ಣವಲಯದ ವಲಸಿಗರಿಗೆ ಅನಿರ್ಬಂಧಿತ ಪ್ರವೇಶಾವಕಾಶದ ಅನುಮತಿ ಇಲ್ಲ.

ಸಮಶೀತೋಷ್ಣ ಪ್ರದೇಶಗಳಿಗೆ ಯುರೋಪಿನಿಂದ ಜನರ ವಲಸೆಯ ಜೊತೆಗೆ ಮತ್ತು ಅದಕ್ಕೆ ಸಮಾನಾಂತರವಾಗಿ ಬಂಡವಾಳವೂ ವಲಸೆ ಹೋಯಿತು. ಪರಿಣಾಮವಾಗಿ ಈ "ಹೊಸ ಪ್ರಪಂಚ"ದಲ್ಲಿ ಕೈಗಾರಿಕಾ ಚಟುವಟಿಗಳು ಪ್ರಸರಿಸಿದವು. ಈ ವಿದ್ಯಮಾನಕ್ಕೆ ವ್ಯತಿರಿಕ್ತವಾಗಿ, ಕೊನೆಯ ಪಕ್ಷ ಇತ್ತೀಚಿನವರೆಗೆ, ಯುರೋಪಿನಿಂದಾಗಲಿ ಅಥವಾ ಹೊಸದಾಗಿ ಕೈಗಾರಿಕೀಕರಣವನ್ನು ಕಂಡ ಯುರೋಪಿಯನ್ ವಲಸಿಗರ ದೇಶಗಳಿಂದಾಗಲಿ ("ಹೊಸ ಪ್ರಪಂಚ"), ಉಷ್ಣವಲಯ ಅಥವಾ ಅರೆ–ಉಷ್ಣವಲಯ ಪ್ರದೇಶಗಳಲ್ಲಿ ನೆಲೆಗೊಂಡ "ಅಧೀನ ವಸಾಹತು"ಗಳಿಗೆ ಕೈಗಾರಿಕಾ ಚಟುವಟಿಕೆಗಳ ಪ್ರಸರಣವು ಬಹಳ ಕಡಿಮೆಯೇ ಇತ್ತು. ಈ "ಅಧೀನ ವಸಾಹತು"ಗಳಲ್ಲಿ ಯೂರೋಪಿನ ದೇಶಗಳು (ಮೆಟ್ರೊಪೊಲಿಸ್–metropolis) ಒಂದಿಷ್ಟು ಬಂಡವಾಳ ಹೂಡಿಕೆ ಮಾಡಿವೆ ನಿಜ. ಆದರೆ, ಈ ಹೂಡಿಕೆಯು ಕಾರ್ಮಿಕರನ್ನು ಅಂತಾರಾಷ್ಟ್ರೀಯವಾಗಿ ವಿಭಜಿಸುವ ವಸಾಹತುಶಾಹಿ ಮಾದರಿಗೆ ಅನುಗುಣವಾಗಿತ್ತು ಮತ್ತು ವಸಾಹತುಗಳಿಂದ ತಮಗೆ ಬೇಕಾಗುವ ಪ್ರಾಥಮಿಕ ಸರಕುಗಳನ್ನು ಅಭಿವೃದ್ಧಿಪಡಿಸುವ ಉದ್ದೇಶ ಹೊಂದಿತ್ತು. ಉದಾಹರಣೆಗೆ, ಮೊದಲ ವಿಶ್ವಯುದ್ಧದ ಆರಂಭದ ಸಮಯದಲ್ಲಿ ಬ್ರಿಟನ್ ಕೈಗೊಂಡ ನೇರ ವಿದೇಶಿ ಹೂಡಿಕೆಯ ಕೇವಲ ಶೇ. 10ರಷ್ಟು ಅದರ ಅತಿ ದೊಡ್ಡ ವಸಾಹತು ಎನಿಸಿದ್ದ ಭಾರತ ಉಪ–ಖಂಡದಲ್ಲಿ ಆಗಿತ್ತು ಮತ್ತು ಅದೂ ಸಹ, ಚಹಾ, ಸೆಣಬು ಮತ್ತು ಅವುಗಳ ರಫ್ತಿಗೆ ಸಂಬಂಧಿಸಿದ ವಲಯದ ಚಟುವಟಿಕೆಗಳಲ್ಲಿ ಮಾತ್ರ ಆಗಿತ್ತು.

ಅಧೀನಪಡಿಸಿಕೊಂಡ ವಸಾಹತುಗಳಲ್ಲಿ ನಡೆಸಿದ ‘ಮಿಗುತಾಯವನ್ನು ಬರಿದಾಗಿಸುವ’ (drain of surplus) ಪ್ರಕ್ರಿಯೆ ಕಾರಣದಿಂದಷ್ಟೇ ಅವುಗಳ ಅವನತಿ ಸಂಭವಿಸಿದ್ದಲ್ಲ. ತೆರಿಗೆ ಆದಾಯದಿಂದ ಬಂದ ಹಣದಿಂದ ನಡೆದ ಈ ಪ್ರಕ್ರಿಯೆ ವಸಾಹತುಗಳ ಸಮಸ್ತ ರಫ್ತು ಮಿಗುತಾಯದ ರೂಪ ಪಡೆದು ಯುರೋಪಿನ ವಸಾಹತುಶಾಹಿ ದೇಶಗಳಿಗೆ ಬಿಟ್ಟಿಯಾಗಿ ಹರಿದು ಹೋಗುವಂತೆ ಮಾಡಿತು. ಈ ಅಗಾಧ ಬಿಟ್ಟಿ ಹರಿವು ಒಂದು ವೇಳೆ ಸಂಭವಿಸದೇ ಇದ್ದಿದ್ದರೆ ಈ ವಸಾಹತುಶಾಹಿ ದೇಶಗಳಲ್ಲಿ ಕೈಗಾರಿಕಾ ಕ್ರಾಂತಿ ನಡೆಯುತ್ತಿತ್ತೇ ಎಂಬ ಅನುಮಾನವಿದೆ. ವಸಾಹತುಶಾಹಿ ದೇಶಗಳು ತಯಾರಿಸಿದ ಸರಕು ಸಾಮಗ್ರಿಗಳನ್ನು ಆಮದು ಮಾಡಿಕೊಂಡ ಕಾರಣದಿಂದಾಗಿ ಅಧೀನಪಡಿಸಿಕೊಂಡ ವಸಾಹತು ದೇಶಗಳ ಬಂಡವಾಳಶಾಹಿ–ಪೂರ್ವದ ಕಿರು ಉತ್ಪಾದನಾ ಕೈಗಾರಿಕಾ ಚಟುವಟಿಕೆಗಳು ನಾಶವಾದವು. ಈ ವಿನಾಶದ ಪ್ರಕ್ರಿಯೆಯನ್ನು "ಅಪ–ಕೈಗಾರಿಕೀಕರಣ" ಎಂದು ಹೇಳಲಾಗುತ್ತದೆ. ಈ ವಿನಾಶದಿಂದಾಗಿ ಕುಶಲಕರ್ಮಿಗಳು ಮತ್ತು ಕಸುಬುದಾರರು ಉದ್ಯೋಗಹೀನರಾದರು. ಬೃಹತ್ ಪ್ರಮಾಣದ ನಿರುದ್ಯೋಗ ಉಂಟಾಯಿತು. ಇದು ಕೃಷಿಯ ಮೇಲಿನ ಒತ್ತಡವನ್ನು ಪುಟ 15 ಕ್ಕೆ



ಜಗದ ಸುತ್ತ

ವಸಂತರಾಜ ಎನ್.ಕೆ.

ಮದುರೊ ವೆನೆಜುವೆಲಾ ಅಧ್ಯಕ್ಷರಾಗಿ ಪುನರಾಯ್ಕೆ, ವಿಪಕ್ಷ, ಯು.ಎಸ್. ಗಳಿಂದ ತಕರಾರು

ವೆನೆಜುವೇಲಾದ ಅಧ್ಯಕ್ಷೀಯ ಚುನಾವಣೆಯಲ್ಲಿ ಮತ್ತೆ ಮದುರೊ ಗೆದ್ದಿದ್ದಾರೆ. ಆದರೆ ಚುನಾವಣಾ ಕಮಿಶನ್ ಘೋಷಣೆಯನ್ನು ಒಪ್ಪದೆ, 'ಚುನಾವಣಾ ಅಕ್ರಮ ನಡೆದಿವೆ' ಎಂದು ವಿಪಕ್ಷಗಳು ಮತ್ತು ಯು.ಎಸ್. ಸರಕಾರ ತಕರಾರು ತೆಗೆದಿವೆ. ಸುಪ್ರೀಂ ಕೋರ್ಟು ಆಡಿಟ್ ನ ಮದುರೊ ಪ್ರಸ್ತಾವ ಒಪ್ಪದೆ, ವಿಪಕ್ಷದ ಅಭ್ಯರ್ಥಿ ತಾನು ಗೆದ್ದಿರುವುದಾಗಿ ಘೋಷಿಸಿದ್ದು ಯು.ಎಸ್. ಅದಕ್ಕೆ ಮಾನ್ಯತೆ ನೀಡಿದೆ. ಆದರೆ ವೆನೆಜುವೇಲಾದ ಕಳೆದ ಕಾಲು ಶತಮಾನದ 'ಬೊಲಿವಾರಿಯನ್ ಕ್ರಾಂತಿ' ತಂದ ದುಡಿಯುವ ಜನರ ಸೈದ್ಧಾಂತಿಕ-ರಾಜಕೀಯ ಪ್ರಜ್ಞೆ, ಸೋಶಲಿಸ್ಟ್ ಪಕ್ಷದ ವ್ಯಾಪಕ ಸಾಮೂಹಿಕ ನೆಲೆ ಇವು ವಿಪಕ್ಷಗಳ ಮತ್ತು ಯು.ಎಸ್. ನ "ಸರಕಾರ ಬದಲಾವಣೆ" ಹುನ್ನಾರದ ಯಶಸ್ಸಿನ ಸಾಧ್ಯತೆಯನ್ನು ಕುಗ್ಗಿಸಿದೆ. ಜೊತೆಗೆ ಇರಾನ್, ರಶ್ಯಾದ ಮೇಲೆ ದಿಗ್ಬಂಧನಗಳ ಮೂಲಕ ತಾನೇ ಸೃಷ್ಟಿಸಿದ ಯುರೋಪಿನ ತೀವ್ರ ತೈಲ ಕೊರತೆ ನೀಗಿಸಲು ವೆನೆಜುವೇಲಾದ ತೈಲ ರಫ್ತು ಯುಎಸ್ ಗೆ ಅನಿವಾರ್ಯವಾಗಿದೆ. ಅದಕ್ಕಾಗಿ ಪರಸ್ಪರ ಒಪ್ಪಿತ ಸರಕಾರದ ರಚನೆ ಮತ್ತು ದಿಗ್ಬಂಧನ ಹಂತಹಂತವಾಗಿ ತೆಗೆಯುವ ಅನಿವಾರ್ಯತೆ, ಬೊಲಿವಾರಿಯನ್ ಕ್ರಾಂತಿಗೆ ಕಡಿವಾಣ, ಉಗ್ರ ಬಲಪಂಥೀಯ ಪಕ್ಷಗಳನ್ನು ಬಲ ಪಡಿಸುವುದು, ಈ ಪರಸ್ಪರ ವಿರೋಧಾತ್ಮಕ ಗುರಿಗಳ ನಡುವೆ ಸಮತೋಲನೆಯಲ್ಲಿ ಯಾವ ರೀತಿಯ ಹೊಂದಾಣಿಕೆ ಯು.ಎಸ್. ಮಾಡುತ್ತದೆ ಎಂಬುದರ ಮೇಲೆ ವೆನೆಜುವೇಲಾದ ಮುಂದಿನ ಬೆಳವಣಿಗೆಗಳು ಅವಲಂಬಿಸಿದೆ.

ವೆನೆಜುವೆಲಾ ಅಧ್ಯಕ್ಷೀಯ ಚುನಾವಣೆಗಳು ಜುಲೈ 28ರಂದು ನಡೆದಿದ್ದು, ನಿಕೊಲಸ್ ಮದುರೊ ಮೂರನೇ ಬಾರಿಗೆ ಅಧ್ಯಕ್ಷರಾಗಿ ಪುನರಾಯ್ಕೆಯಾಗಿದ್ದಾರೆ. ಮದುರೊ ಶೇ.51.2 ಮತ್ತು ವಿರೋಧಿ ಅಭ್ಯರ್ಥಿ ಎಡ್ಮಂಡ್ ಗೊನ್ಸಾಲೆಸ್ ಶೇ.44.2 ಮತ ಗಳಿಸಿದ್ದಾರೆ ಎಂದು ಅಲ್ಲಿನ ಚುನಾವಣಾ ಕಮಿಶನ್ ಘೋಷಿಸಿದೆ. ಆದರೆ ವಿರೋಧಿ ಅಭ್ಯರ್ಥಿ ಮತ್ತು ಅವರನ್ನು ಬೆಂಬಲಿಸುವ ಬಲಪಂಥೀಯ ಮತ್ತು ಉಗ್ರ ಬಲಪಂಥೀಯ ವಿರೋಧ ಪಕ್ಷಗಳು ಚುನಾವಣೆಗಳಲ್ಲಿ ಮತ ಎಣಿಕೆಯಲ್ಲಿ ಅಕ್ರಮಗಳಾಗಿವೆ ಎಂದು ಆಪಾದಿಸಿ ಫಲಿತಾಂಶ ಒಪ್ಪಿಕೊಳ್ಳಲು ನಿರಾಕರಿಸಿದ್ದಾರೆ. ಈ ಘೋಷಣೆಯ ವಿರುದ್ಧ ವಿರೋಧ ಪಕ್ಷಗಳು ಹಿಂಸಾತ್ಮಕ ಪ್ರದರ್ಶನಗಳನ್ನು ನಡೆಸಿವೆ. ಮದುರೊ ಅವರ ಸೋಶಲಿಸ್ಟ್ ಪಕ್ಷ ಮತ್ತು ಅವರನ್ನು ಬೆಂಬಲಿಸುವ ಎಡ-ಪ್ರಗತಿಪರ ಪಕ್ಷಗಳು ಫಲಿತಾಂಶಗಳನ್ನು ಸ್ವಾಗತಿಸಿ ಮದುರೊ ರನ್ನು ಬೆಂಬಲಿಸುವ ಪ್ರತಿ-ಪ್ರದರ್ಶನಗಳನ್ನು ನಡೆಸಿವೆ. ವಿಪಕ್ಷ ಬೆಂಬಲಿಗರು ಮತ್ತು ಮದುರೊ ಬೆಂಬಲಿಗರ ನಡುವೆ ಹಾಗೂ ವಿಪಕ್ಷ ಬೆಂಬಲಿಗರು ಮತ್ತು ಪೋಲಿಸ್ ಪಡೆಗಳ ನಡುವೆ ತೀವ್ರ ಘರ್ಷಣೆಗಳು ನಡೆದಿವೆ. ವಿರೋಧ ಪಕ್ಷಗಳು ತಮ್ಮ ಅಭ್ಯರ್ಥಿ ಗೆದ್ದಿದ್ದಾರೆ ಎಂದು ಪ್ರಕಟಿಸಿವೆ.

ವಿಪಕ್ಷ, ಯು.ಎಸ್ ನಿಂದ ಅಕ್ರಮದ ತಕರಾರು

ಯು.ಎಸ್. ಉಪಾಧ್ಯಕ್ಷೆ ಕಮಲಾ ಹ್ಯಾರಿಸ್ ಮದುರೊ ಅವರ ವಿಜಯ ಒಪ್ಪಿಕೊಂಡು 'ಟ್ವಿಟ್' (ಎಕ್ಸ್) ಸಂದೇಶ ಕಳಿಸಿದ್ದರು. ಆದರೆ ಆ ನಂತರ ಯು.ಎಸ್.ನ ವಿದೇಶಾಂಗ ಕಾರ್ಯದರ್ಶಿ ಮತ ಎಣಿಕೆಯಲ್ಲಿ ಅಕ್ರಮಗಳಾಗಿವೆ ಎಂದು ಹೇಳಿಕೆಯಿತ್ತರು. ಆ ಸಂದೇಶದಲ್ಲಿ "ವೆನೆಜುವೆಲಾದ ಜನರ ರಾಜಕೀಯ ನಿರ್ಣಯವನ್ನು ಮನ್ನಿಸಬೇಕು" ಎಂದು ಹೇಳಿದ್ದರು. ಯು.ಎಸ್. ಮತ್ತು ಕೆಲವು ಯುರೋಪಿನ, ದಕ್ಷಿಣ ಅಮೆರಿಕದ ದೇಶಗಳ ವಿದೇಶಿ ವೀಕ್ಷಕರು, ನಾಯಕರು 'ಚುನಾವಣಾ ಪ್ರಕ್ರಿಯೆ ಪಾರದರ್ಶಕವಾಗಿರಲಿಲ್ಲ' ಎಂದಿದ್ದಾರೆ. ಆ ನಂತರ ಯು.ಎಸ್. ವಿದೇಶಾಂಗ ಕಾರ್ಯದರ್ಶಿ ವಿರೋಧ ಪಕ್ಷಗಳ ಅಭ್ಯರ್ಥಿ ಗೆದ್ದಿದ್ದಾರೆ ಮತ್ತು ಅವರನ್ನು ಅಧ್ಯಕ್ಷರಾಗಿ ಮನ್ನಣೆ ಕೊಡುವುದಾಗಿ ಹೇಳಿದ್ದಾರೆ. ಈ ನಡುವೆ ವಿಪಕ್ಷ ಬೆಂಬಲಿಗರು ಮತ್ತು ಮದುರೊ ಬೆಂಬಲಿಗರ ನಡುವೆ ಹಾಗೂ ವಿಪಕ್ಷ ಬೆಂಬಲಿಗರು ಮತ್ತು ಪೋಲಿಸ್ ಪಡೆಗಳ ನಡುವೆ ಬೀದಿ ಕಾಳಗ ಮುಂದುವರೆದಿವೆ. ಹಿಂಸಾಚಾರದಲ್ಲಿ ತೊಡಗಿರುವ ವಿಪಕ್ಷದ ಕಾರ್ಯಕರ್ತರನ್ನು ಬಂಧಿಸಲಾಗಿದೆ. ರಾಜಕೀಯ ಬಿಕ್ಕಟ್ಟು, ಅನಿಶ್ಚಿತತೆ ಉಂಟಾಗಿದೆ. ವೆನೆಜುವೇಲಾದ ಆಂತರಿಕ ವಿಷಯಗಳಲ್ಲಿ ಯು.ಎಸ್. ರಾಜಕೀಯ ಮಿಲಿಟರಿ ಮಧ್ಯಪ್ರವೇಶ ಮಾಡಿ ಪರಿಸ್ಥಿತಿ ಇನ್ನಷ್ಟು ಹದಗೆಡುವ ಆತಂಕ ಹಬ್ಬಿದೆ.

ಯು.ಎಸ್. ಹಾಗೂ ಯುರೋ ಕೂಟದ ಆಳುವ ವರ್ಗಗಳ ಮೂಗಿನ ನೇರಕ್ಕಿಲ್ಲದ, ಅವರಿಗೆ ಸವಾಲು ಹಾಕುವ ಮತ್ತು ತಮ್ಮ ರಾಷ್ಟ್ರೀಯ ಸಾರ್ವಭೌಮತ್ವವನ್ನು ದೃಢವಾಗಿ ಪ್ರತಿಪಾದಿಸುವ ಯಾವುದೇ ದೇಶದ ಸರಕಾರವನ್ನು ಉರುಳಿಸಿ, ತಮ್ಮ ಕೈಗೊಂಬೆ ಸರಕಾರವನ್ನು ಸ್ಥಾಪಿಸುವುದು ತಮ್ಮ ಮೂಲಭೂತ ಹಕ್ಕು ಎಂದು ಭಾವಿಸಿದ್ದಾರೆ. 1950ರ ದಶಕದಲ್ಲಿ ಇರಾನ್, ಕಾಂಗೋದಿಂದ ಹಿಡಿದು, 90ರ ದಶಕದ ಯುಗೊಸ್ಲಾವಿಯ, ಇರಾಕ್, ಲಿಬ್ಯಾ ಮತ್ತು ಕಳೆದ ದಶಕದ ಉಕ್ರೇನ್ ವರೆಗೆ ಇಂತಹ ರಾಜಕೀಯ-ಮಿಲಿಟರಿ ಪ್ರವೇಶಗಳು ನಡೆದಿವೆ. ದಕ್ಷಿಣ ಅಮೆರಿಕಾದ ದೇಶಗಳಂತೂ ತನ್ನ 'ಹಿತ್ತಲು' ಎಂದು ಭಾವಿಸುವ ಯು.ಎಸ್. ಪ್ರಭುತ್ವ 1950ರ ದಶಕದಲ್ಲಿ ಗ್ವಾಟೆಮಾಲಾ, ಕ್ಯೂಬಾ ಹಿಡಿದು, 60-70ರ ದಶಕದಲ್ಲಿ ಬ್ರೆಜಿಲ್, ಚಿಲಿ, ಚುನಾವಣೆಗಳಲ್ಲಿ ತನಗೆ ವಿರೋಧಿಯಾದ ಪ್ರಜಾಸತ್ತಾತ್ಮಕ ಪ್ರಗತಿಪರ ಸರಕಾರ ಬಂದಾಗ ಅವನ್ನು ಉರುಳಿಸಿ ಮಿಲಿಟರಿ ಸರ್ವಾಧಿಕಾರ ಸ್ಥಾಪಿಸಿದೆ. ಚುನಾವಣೆಗಳಲ್ಲಿ ಬಲಪಂಥೀಯ, ಭಯೋತ್ಪಾದಕ, ನಿರಂಕುಶವಾದಿ, ಫ್ಯಾಸಿಸ್ಟ್ ಶಕ್ತಿಗಳನ್ನು ಬೆಂಬಲಿಸಿದೆ. ಇಂತಹ ಶಕ್ತಿಗಳಿಗೆ ಹಣ, ಸಿಬ್ಬಂದಿ, ತರಬೇತಿ, ಮಾಧ್ಯಮ ಪ್ರಚಾರದ ಸಂಪನ್ಮೂಲಗಳ ಹೊಳೆಯನ್ನೇ ಹರಿಸುತ್ತದೆ. ಅವುಗಳ ಪರವಾಗಿ ಹುಸಿ ಅಭಿಪ್ರಾಯ ಸಂಗ್ರಹ ಚುನಾವಣೆಯ ಪ್ರಕ್ರಿಯೆಯನ್ನೇ ಈ ಶಕ್ತಿಗಳ ಪರವಾಗಿಸಲು ಪ್ರಯತ್ನಿಸುತ್ತದೆ. ಆ ನಂತರವೂ ಸೋತರೆ 'ಚುನಾವಣಾ ಅಕ್ರಮಗಳಾಗಿವೆ' ಎಂದು ಅಂತರರಾಷ್ಟ್ರೀಯವಾಗಿ ಹುಯಿಲೆಬ್ಬಿಸಲಾಗುತ್ತದೆ. "ಸರಕಾರದ ಬದಲಾವಣೆ"ಯ ಅಗತ್ಯವಿದ್ದಾಗ ಚುನಾವಣೆಗಳ ಸುತ್ತ ಮಾತ್ರವಲ್ಲ ಯಾವುದೇ ಹಂತದಲ್ಲಿ "ಪ್ರಜಾಪ್ರಭುತ್ವದ ರಕ್ಷಣೆ", "ಮಾನವ ಹಕ್ಕುಗಳ ದಮನ"ದ ಹುಯಿಲು ಸಹ ಎಬ್ಬಿಸಲಾಗುತ್ತದೆ.

ಸೋಶಲಿಸ್ಟ್ ಪಕ್ಷದ ವ್ಯಾಪಕ ಸಾಮೂಹಿಕ ನೆಲೆ

ವೆನೆಜುವೇಲಾದಲ್ಲೂ ಇದೇ ನಡೆಯುತ್ತಿದ್ದು 90ರ ದಶಕದ ಕೊನೆಯಲ್ಲಿ ಹ್ಯೂಗೋ ಚವೇಝ್ ಅವರ 1999ರಲ್ಲಿ ಎಡ ಪ್ರಗತಿಪರ ಸರಕಾರಗಳು ಅಧಿಕಾರಕ್ಕೆ ಬರುವ ಆಗಿನ "ಎಳೆಗೆಂಪು ಅಲೆ"ಯ ಹರಿಕಾರನಾಗಿ ಅಧ್ಯಕ್ಷರಾಗಿ ಚುನಾಯಿತವಾದಂದಿನಿಂದ ಅವರು ಮರು-ಆಯ್ಕೆಯಾಗುತ್ತಾ 13 ವರ್ಷ ಅಧಿಕಾರದಲ್ಲಿ ಮುಂದುವರೆದರು. ಮಾತ್ರವಲ್ಲ ಅವರು "ಬೊಲಿವಾರಿಯನ್ ಕ್ರಾಂತಿ" ಎಂದು ಕರೆಯುವ ತೀವ್ರತರದ ಸಾಮಾಜಿಕ ಸುಧಾರಣೆ, ಆರ್ಥಿಕ-ರಾಜಕೀಯ ಬದಲಾವಣೆಗಳನ್ನು ತಂದರು. ವೆನೆಜುವೇಲಾದ ಬಹುಸಂಖ್ಯಾತ ದುಡಿಯುವ ಜನರಲ್ಲಿ 'ಚವಿಸ್ಮೊ" (ಅಥವಾ ಚವೇಝ್ ವಾದ) ಬೇರೂರಿದೆ. ಇದರ ಜತೆಗೆ ಜಾರಿಗೆ ತಂದ 'ಬೊಲಿವಾರಿಯನ್ ಸಂವಿಧಾನ" ಮತ್ತು '21ನೇ ಶತಮಾನದ ಸಮಾಜವಾದ'ದ ಪರಿಕಲ್ಪನೆ ದುಡಿಯುವ ಜನರಲ್ಲಿ ಉತ್ಸಾಹ ತುಂಬಿದೆ. ಮಾತ್ರವಲ್ಲದೆ ಅವರು ಹಲವು ಎಡ-ಪ್ರಗತಿಪರ ಚಳುವಳಿ ಪಕ್ಷಗಳ ಒಗ್ಗೂಡಿಸುವಿಕೆಯಿಂದ ಸ್ಥಾಪಿಸಿದ ಸೋಶಲಿಸ್ಟ್ ಪಕ್ಷದ ಮತ್ತು ಸುಮಾರು 14 ಲಕ್ಷ ಸದಸ್ಯತ್ವವಿರುವ ಅದರ (ಸಮುದಾಯ, ಯುವಜನ ಸೇರಿದಂತೆ) ಹಲವು ಸಾಮೂಹಿಕ ಸಂಘಟನೆಗಳ ಅಗಾಧ ಜಾಲ ಭಾರೀ ಸಾಮೂಹಿಕ ನೆಲೆ ಒದಗಿಸಿದೆ. ಈ ಸೈದ್ಧಾಂತಿಕ-ಸಂಘಟನಾ ಬಲವಲ್ಲದೆ, ಈ ಅವಧಿಯಲ್ಲಿ ಜಾರಿಗೆ ತಂದ ಜನಕಲ್ಯಾಣ ಕಾರ್ಯಕ್ರಮಗಳು, ಜನರನ್ನು ಬದಲಾವಣೆಗೆ ಅಣಿನೆರೆಸುವ ಹಲವು ನವೀನ ಪ್ರಯೋಗಗಳು ಸೋಶಲಿಸ್ಟ್ ಪಕ್ಷವನ್ನು ಅಜೇಯ ಶಕ್ತಿಯಾಗಿಸಿದೆ. ಹೀಗಾಗಿ ಈ ಅವಧಿಯಲ್ಲಿ ನಡೆದ ಮಿಲಿಟರಿ ಕ್ಷಿಪ್ರದಂಗೆಯನ್ನು ಪರಿಣಾಮಕಾರಿಯಾಗಿ ಎದುರಿಸಲು ಸಾಧ್ಯವಾಯಿತು. ಯು.ಎಸ್. ಮತ್ತು ವೆನೆಜುವೇಲಾದ ಆಳುವ ವರ್ಗಗಳ ಬೆಂಬಲಿತ ಬಲಪಂಥೀಯ ಪಕ್ಷಗಳ ಮೂಲಕ ನಡೆಸಲಾಗುತ್ತಿದ್ದ ಜನಮರುಳು ಆಟಗಳೂ ನಡೆಯದಾಗಿವೆ. ಪ್ರತಿ ಚುನಾವಣೆಯಲ್ಲೂ ಸೋಶಲಿಸ್ಟ್ ಪಕ್ಷ ಗೆಲುವು ಸಾಧಿಸುತ್ತಾ ಬಂದಿದೆ.

2013ರಲ್ಲಿ ಚವೇಝ್ ಸಾವಿನ ನಂತರ ಅವರ ಆಕರ್ಷಕ ಮತ್ತು ಪರಿಣಾಮಕಾರಿ ನಾಯಕತ್ವದ ಕೊರತೆ ಸೋಶಲಿಸ್ಟ್ ಪಕ್ಷವನ್ನು ಕಾಡಿದೆ. ಇದಲ್ಲದೆ, ಅವರ ನಂತರ ನಾಯಕತ್ವ ವಹಿಸಿದ ನಿಕೊಲಸ್ ಮದುರೊ ಅವರು, ದೇಶದ ಶೇ.90 ಆದಾಯ ಒದಗಿಸುವ ಆರ್ಥಿಕದ ಬೆನ್ನೆಲುಬಾಗಿದ್ದ ತೈಲ ಬೆಲೆಗಳ ಕುಸಿತ; ಇದೇ ಸಮಯದಲ್ಲಿ ಯು.ಎಸ್. ದೇಶದ ಮೇಲೆ ಹೊರಿಸಿದ ಆರ್ಥಿಕ ದಿಗ್ಬಂಧನಗಳು; ಇದರ ಪರಿಣಾಮವಾಗಿ ಜೀವನವಶ್ಯಕ ವಸ್ತುಗಳ ಕೊರತೆ, ಜೀವನ ನಿರ್ವಹಣಾ ವೆಚ್ಚ ಏರಿಕೆ:-ಇವೆಲ್ಲ ಸವಾಲುಗಳನ್ನು ಎದುರಿಸಬೇಕಾಯಿತು. ಆದರೂ ಸೋಶಲಿಸ್ಟ್ ಪಕ್ಷದ ಸೈದ್ಧಾಂತಿಕ-ಸಂಘಟನಾ ಶಕ್ತಿ, ಅಗಾಧ ಸಾಮೂಹಿಕ ನೆಲೆ ಮತ್ತು ಜನತೆಯ ಉನ್ನತ ರಾಜಕೀಯ ಪ್ರಜ್ಞೆ ಇವೆಲ್ಲವುಗಳಿಂದ ಜನತೆಯ ಹಲವು ಸಂಕಟಗಳ ನಡುವೆಯೂ, ಯುಎಸ್ ಮತ್ತು ವೆನೆಜುವೇಲಾದ ಆಳುವ ವರ್ಗಗಳ ಬೆಂಬಲಿತ ಬಲಪಂಥೀಯ ಪಕ್ಷಗಳ ಬಲ ಕುಸಿತವಾಗಿದೆ. ಯುಎಸ್ ಈ ಪಕ್ಷಗಳನ್ನು ನಾಯಕರನ್ನು ಗಟ್ಟಿಗೊಳಿಸಲು, ಹೊಸ ಪಕ್ಷಗಳನ್ನು ಹುಟ್ಟುಹಾಕಲು ನಡೆಸಿದ ಪ್ರಯತ್ನಗಳೆಲ್ಲ ವಿಫಲವಾಗಿವೆ. ಇವು ಸರಕಾರದ ವಿರುದ್ಧ ಭ್ರಷ್ಟ, ಕಾನೂನು ಬಾಹಿರ ಮತ್ತು ಹಿಂಸಾತ್ಮಕ ಕ್ರಮಗಳನ್ನು ವಹಿಸಿದಾಗ ಸರಕಾರ ಅವುಗಳ ವಿರುದ್ಧ ಕಠಿಣ ಕ್ರಮಗಳನ್ನು ಕೈಗೊಂಡಿದೆ. ಹಲವು ನಾಯಕರು ದೇಶಾಂತರ ಹೋಗಬೇಕಾಗಿ ಬಂದಿದೆ. ಪ್ರತಿ ಚುನಾವಣೆಯಲ್ಲೂ ಹೊಸ ಪಕ್ಷಗಳು, ನಾಯಕರನ್ನು ➚



ಯುಎಸ್, ಕೆನಡಾದ 'ನೆಲಸಿಗ ವಸಾಹತು'ಗಳು...... ಪುಟ 13 ರಿಂದ

ಹೆಚ್ಚಿಸಿತು, ಬಾಡಿಗೆಗಳನ್ನು ಹೆಚ್ಚಿಸಿತು, ವೇತನವನ್ನು ಕಡಿಮೆ ಮಾಡಿತು ಮತ್ತು ಸಾಮೂಹಿಕ ಬಡತನವನ್ನು ಹುಟ್ಟುಹಾಕಿತು. ಆದ್ದರಿಂದ, ಆಡಮ್ ಸ್ಮಿತ್ ಭಾವಿಸಿದ ರೀತಿಯಲ್ಲಿ ಬಂಗಾಳವು ಕೇವಲ ಬಂಡವಾಳದ ನಕಾರಾತ್ಮಕ ಶೇಖರಣೆಯ ಕಾರಣದಿಂದ ಹಾನಿಗೊಳಗಾಗಲಿಲ್ಲ. ಮತ್ತು ಅದರ "ಅವನತಿಯ ಸ್ಥಿತಿ"ಯು ಕೇವಲ ಈಸ್ಟ್ ಇಂಡಿಯಾ ಕಂಪನಿಯ ಆಳ್ವಿಕೆಯ ಫಲಿತಾಂಶವಲ್ಲ. ಬದಲಾಗಿ, ಬ್ರಿಟನ್‌ನಲ್ಲಿ ಸಂಭವಿಸಿದ ಬಂಡವಾಳದ ಶೇಖರಣೆಯ "ಇನ್ನೊಂದು ಮುಖ"ವೇ ಆಗಿತ್ತು. ಅದರ ಅವನತಿಯು ಈಸ್ಟ್ ಇಂಡಿಯ ಕಂಪನಿಯ ಆಳ್ವಿಕೆ ಮಾತ್ರವಲ್ಲ, ಬ್ರಿಟನ್‌ನಲ್ಲಿ ಸಂಭವಿಸಿದ ಕೈಗಾರಿಕಾ ಬಂಡವಾಳಶಾಹಿಯ ಬೆಳವಣಿಗೆಯ ಫಲಿತಾಂಶವೂ ಆಗಿದೆ. ಬ್ರಿಟನ್ನಿನ ಕೈಗಾರಿಕಾ ಬಂಡವಾಳಶಾಹಿಯು, ಅಂತಿಮವಾಗಿ, ತನ್ನ ಉತ್ಪನ್ನಗಳನ್ನು ಭಾರತದಲ್ಲಿ ಸುಲಭವಾಗಿ ಮಾರಾಟ ಮಾಡಲು ಈಸ್ಟ್ ಇಂಡಿಯಾ ಕಂಪನಿಯ ವ್ಯಾಪಾರ ಏಕಸ್ವಾಮ್ಯವನ್ನು ಮುರಿಯುವುದು ಅಗತ್ಯವಿತ್ತು.

ಇದೆಲ್ಲವೂ ಸಾಕಷ್ಟು ಚೆನ್ನಾಗಿ ತಿಳಿದ ವಿಷಯವೇ. ಆದರೂ ಅದನ್ನು ಇಲ್ಲಿ ಪ್ರಸ್ತಾಪಿಸುವ ಕಾರಣವೆಂದರೆ, ನೆಲಸಿಗ ವಸಾಹತುಗಳು ಮತ್ತು ಅಧೀನ ವಸಾಹತುಗಳ ನಡುವಿನ ವ್ಯತ್ಯಾಸಗಳನ್ನು ಅರ್ಥಶಾಸ್ತ್ರಜ್ಞರು ಮತ್ತು ಆರ್ಥಿಕ ಇತಿಹಾಸಕಾರರು ಇಂದಿಗೂ ನಿರೂಪಿಸಿಲ್ಲ. ಐತಿಹಾಸಿಕ ಅಂಶಗಳನ್ನು ಪ್ರಸ್ತುತಪಡಿಸುವಾಗ "ಸಾಮ್ರಾಜ್ಯ" ಎಂಬ ಪದ ಬಳಕೆಯ ಮೂಲಕ ಈ ಎರಡು ರೀತಿಯ ವಸಾಹತುಗಳೂ ಒಂದೇ ಎಂಬಂತೆ ಬಿಂಬಿಸುವ ಕ್ರಮವು ನಿಜಕ್ಕೂ ನಡೆದಿರುವುದು ಏನು ಎಂಬುದನ್ನು ಅಸ್ಪಷ್ಟಗೊಳಿಸಲು ಸಹಾಯ ಮಾಡುತ್ತದೆ.

ಅಷ್ಟೇ ಅಲ್ಲ. ಸಮಶೀತೋಷ್ಣ ಪ್ರದೇಶಗಳ ಬಿಳಿಯರ ವಸಾಹತುಗಳಿಗೆ ವಸಾಹತುಶಾಹಿ ದೇಶಗಳಿಂದ ಕೈಗಾರಿಕಾ ಚಟುವಟಿಕೆಗಳು ಈ ಹಿಂದೆ ಪಸರಿಸಿದ ರೀತಿಯಲ್ಲಿ ಮತ್ತು ಅದರಿಂದಾಗಿ ಅಮೆರಿಕಾ ಮತ್ತು ಕೆನಡಾ ದೇಶಗಳು ಹಿಂದೆ ಅಭಿವೃದ್ಧಿ ಹೊಂದಿದ ರೀತಿಯಲ್ಲಿ ಈಗ ನವ–ಉದಾರವಾದಿ ಆಳ್ವಿಕೆಯ ಅಡಿಯಲ್ಲಿ ಅಧೀನ ವಸಾಹತುಗಳಲ್ಲಿ ಕೈಗಾರಿಕಾ ಚಟುವಟಿಕೆಗಳ ಪ್ರಸರಣ ನಡೆಯುತ್ತಿರುವುದರಿಂದ ಭಾರತ ಮತ್ತು ಇಂಡೋನೇಷ್ಯಾದಂತಹ ದೇಶಗಳು ಪ್ರಸ್ತುತದಲ್ಲಿ ಅಭಿವೃದ್ಧಿ ಹೊಂದುತ್ತವೆ ಎಂದು ನಂಬಲಾಗಿದೆ.

ಈಗಿನ ತಪ್ಪು ಗ್ರಹಿಕೆ

ಈ ವಾದವು ಮೂರು ಸ್ಪಷ್ಟವಾದ ಅಂಶಗಳನ್ನು ಅರ್ಥಮಾಡಿಕೊಳ್ಳದೆ ಹೋಗುತ್ತದೆ. ಮೊದಲನೆಯದಾಗಿ, ಭಾರತ ಮತ್ತು ಇಂಡೋನೇಷ್ಯಾದಂತಹ ದೇಶಗಳು, ಅವು ಅಧೀನ ವಸಾಹತುಗಳಾಗಿದ್ದುದರಿಂದ, ಬಹಳ ಹಿಂದಿನಿಂದಲೇ ಅಲ್ಲಿ ನೆಲೆಸಿದ್ದ ಬಡತನ ಮತ್ತು ನಿರುದ್ಯೋಗದ ಹೊರೆಯನ್ನು ಬಳುವಳಿಯಾಗಿ ಪಡೆದಿವೆ. ಆದ್ದರಿಂದ ಈ ಸಮಸ್ಯೆಗಳನ್ನು ಸಮಶೀತೋಷ್ಣ ಪ್ರದೇಶಗಳ ಬಿಳಿಯರ ವಸಾಹತುಗಳಿಗೆ ವಸಾಹತುಶಾಹಿ ದೇಶಗಳಿಂದ ಬಂಡವಾಳವು ಒಳಹರಿದ ಸಂದರ್ಭದ ಅನುಭವವನ್ನು ನಕಲು ಮಾಡುವ ಮೂಲಕ ಪರಿಹರಿಸಿಕೊಳ್ಳಲಾಗದು. ಎರಡನೆಯದಾಗಿ, ಈ ದೇಶಗಳು ಇನ್ನೂ ಗಣನೀಯ ಪ್ರಮಾಣದ ಪುಟ್ಟ ಮತ್ತು ಸಣ್ಣ–ಪ್ರಮಾಣದ ಉತ್ಪಾದನೆಯನ್ನು ಹೊಂದಿವೆ. ಆದ್ದರಿಂದ, ಈ ದೇಶಗಳು ಬಂಡವಾಳದ ಒಳಹರಿವಿಗೆ ತೆರೆದುಕೊಂಡಾಗ ಅಲ್ಲಿನ ಮತ್ತಷ್ಟು ಸಣ್ಣ ಪುಟ್ಟ ಉದ್ದಿಮೆಗಳು ನಾಶವಾಗುತ್ತವೆ. ವಸಾಹತುಶಾಹಿಯಿಂದ ಸೃಷ್ಟಿಸಲ್ಪಟ್ಟ ಕಾರ್ಮಿಕ ಮೀಸಲುಗಳನ್ನು ಈ ದೇಶಗಳ ಅಭಿವೃದ್ಧಿಗೆ ಬಳಸಿಕೊಳ್ಳುವ ಬದಲು, ಬಂಡವಾಳದ ಒಳಹರಿವು ಅಲ್ಲಿನ ಕಾರ್ಮಿಕ ಮೀಸಲು ಪಡೆಯ ಗಾತ್ರವನ್ನು ಮತ್ತಷ್ಟು ಹೆಚ್ಚಿಸಲು ಕಾರಣವಾಗುತ್ತದೆ. ಮೂರನೆಯದಾಗಿ, ಹತ್ತೊಂಬತ್ತನೇ ಶತಮಾನದಲ್ಲಿ ಸಮಶೀತೋಷ್ಣ ಪ್ರದೇಶಗಳ ಯುರೋಪಿಯನ್ ವಸಾಹತುಗಳಿಗೆ ಕೈಗಾರಿಕಾ ಚಟುವಟಿಕೆಗಳು ಪಸರಿಸಿದ ಸಮಯದಲ್ಲಿ, ಈ ವಸಾಹತು ದೇಶಗಳು ತಮ್ಮನ್ನು ತಾವು ಆಮದುಗಳಿಂದ ಬಲವಾಗಿ ರಕ್ಷಿಸಿಕೊಂಡವು. ಅಂತಹ ಪ್ರಸರಣವನ್ನು ಸ್ವೀಕರಿಸುವ ದೇಶಗಳ ಇಂದಿನ ಸಂದರ್ಭದಲ್ಲಿ, ನವ–ಉದಾರವಾದಿ ಆಳ್ವಿಕೆಯು ಆಮದುಗಳ ಮೇಲೆ ವಿಧಿಸುವ ಯಾವುದೇ ರಕ್ಷಣಾತ್ಮಕ ಕ್ರಮಗಳನ್ನು ತಡೆಯುವುದರಿಂದ ಈ ಪ್ರಸರಣವು ಸ್ಥಳೀಯವಾಗಿ ಉಂಟುಮಾಡಬಹುದಾದ ಗುಣಕ ಪರಿಣಾಮಗಳೂ ಮೊಟಕುಗೊಳ್ಳುತ್ತವೆ.

ಈ ಎಲ್ಲ ಅಂಶಗಳ ಜೊತೆಗೆ, ಈ ಹಿಂದಿನ ವಸಾಹತು ದೇಶಗಳ ಉತ್ಪನ್ನಗಳು, ಅವು ಯುರೋಪಿನ ಮೆಟ್ರೊಪಾಲಿಟನ್ ಬಂಡವಾಳದ ಸ್ಥಳಾಂತರದ ಮೂಲಕ ಉತ್ಪಾದಿಸಲ್ಪಟ್ಟಿದ್ದರೂ ಸಹ, ಮೆಟ್ರೊಪಾಲಿಟನ್ ದೇಶಗಳು ಆಂತರಿಕವಾಗಿ ಉತ್ಪಾದಿಸಿದ ಉತ್ಪನ್ನಗಳೊಂದಿಗೆ ಪೈಪೋಟಿಯಲ್ಲಿ ಮೇಲುಗೈ ಪಡೆದು ತಮ್ಮ ದೇಶೀಯ ನಿರುದ್ಯೋಗದ ಹೆಚ್ಚಳಕ್ಕೆ ಕಾರಣವಾದಾಗ ಮೆಟ್ರೊಪಾಲಿಟನ್ ದೇಶಗಳು ಸುಮ್ಮನೆ ಕುಳಿತುಕೊಳ್ಳುವುದಿಲ್ಲ. ಪ್ರಸ್ತುತದಲ್ಲಿ ಚೀನಾದ ಆಮದುಗಳಿಂದ ರಕ್ಷಿಸಿಕೊಳ್ಳಲು ಅಮೆರಿಕಾ ಕೈಗೊಳ್ಳುತ್ತಿರುವ ಕ್ರಮಗಳು ಉಂಟುಮಾಡುತ್ತಿರುವ ಪರಿಣಾಮಗಳು ಈ ಸಂದರ್ಭದಲ್ಲಿ ಬಹಳ ಬೋಧಪ್ರದವಾಗಿವೆ.

ವಲಸಿಗ ವಸಾಹತುಗಳು ಮತ್ತು ಅಧೀನ ವಸಾಹತುಗಳ ಅಭಿವೃದ್ಧಿಯ ದಿಕ್ಪಥಗಳು ಸಂಪೂರ್ಣವಾಗಿ ವಿಭಿನ್ನವಾಗಿವೆ. ಆಡಮ್ ಸ್ಮಿತ್ ಈ ಅಂಶಗಳನ್ನು ಮನಗಂಡಿರಲಿಲ್ಲ. ಅವರು ಈ ಎಲ್ಲವನ್ನೂ ಬಹಳ ಮುಂಚೆಯೇ ಬರೆದ ಒಬ್ಬ ಪ್ರವರ್ತಕರಾಗಿರುವುದರಿಂದ ಅವರಿಗೆ ಇದು ಕಾಣದುದಕ್ಕೆ ವಿನಾಯ್ತಿ ಇದೆ. ಆದರೆ, ವಲಸಿಗ ವಸಾಹತುಗಳು ಹಿಂದೆ ಅನುಸರಿಸಿದ ಅಭಿವೃದ್ಧಿಯ ದಿಕ್ಪಥವನ್ನು ಅಧೀನ ವಸಾಹತು ದೇಶಗಳು ಇಂದಿನ ದಿನಗಳಲ್ಲೂ ಅನುಸರಿಸಬಹುದು ಎಂದು ನಂಬುವವರ ಅಭಿಪ್ರಾಯವು ಸಂಪೂರ್ಣವಾಗಿ ತಪ್ಪುಗ್ರಹಿಕೆಯಾಗಿದೆ.

ಬೆವರು ನನ್ನ ದೇವರು..... ಪುಟ 16 ರಿಂದ

ಸೃಜನಶೀಲತೆ ಕಡಿಮೆ ಇರುತ್ತದೆ ಎಂಬ ಭಾವನೆ ಇದೆ, ಆದರೆ ಅದು ತಪ್ಪು ಎಂದ ಬರಗೂರು ಅವರು, ಬದ್ಧತೆ ಎಂದರೆ ಬಂಧನವಲ್ಲ ಎಂದೂ ವಿವರಿಸಿದರು. ನಾವು ನಮ್ಮ ಪಂಚೇಂದ್ರಿಯಗಳನ್ನು ಜಾಗೃತಗೊಳಿಸಿಕೊಳ್ಳಬೇಕು. ನಮ್ಮ ಕಣ್ಣು ಕಿವಿಗಳನ್ನು ಜಾಗೃತಗೊಳಿಸಿಕೊಳ್ಳಬೇಕು. ಆದರೆ ಇಂದು ನಾಲಿಗೆ ಉದ್ದ ಆಗಿದೆ. ಚರ್ಮದ ವಿಷಯದಲ್ಲಿ ಮುಟ್ಟಬಾರದು ಎಂಬ ಧೋರಣೆಯೂ ಇದೆ. ನಾವು ಜನರನ್ನು ಪ್ರೀತಿಸಬೇಕು, ಮನುಷ್ಯ ಸಂಬಂಧಗಳಿಗೆ ಬೆಲೆ ನೀಡಬೇಕು ಎಂದರು.

ಪ್ರಸ್ತುತ ಸುಳ್ಳಿನ ಎದುರು ಸತ್ಯವು ಸೋಲುತ್ತದೆ ಎನ್ನುವ ಆತಂಕಕಾರಿ ಪರಿಸ್ಥಿತಿ ಇದೆ ಎಂದ ಅವರು ಸಾಹಿತಿಗಳು ಜನಗಳಿಗೆ ಸತ್ಯವನ್ನು ಹೇಳುವ ಮಧ್ಯವರ್ತಿಗಳಾಗಬೇಕು ಎಂಬ ಚಿಂತಕ ನೋಮ್ ಚಾಮ್ಸ್ಕಿಯವರ ಮಾತನ್ನು ನೆನಪಿಸಿಕೊಂಡರು. ಅದು ಎಲ್ಲ ಮರ್ಯಾದಸ್ತರ ಕೆಲಸ, ನಾವು ಮರ್ಯಾದಸ್ತರಾಗೋಣ ಎಂದೂ ಹೇಳಿದರು.

ಬರಗೂರು ಬಹುತ್ವದ ರಾಷ್ಟ್ರೀಯ ವಕ್ತಾರರು –ಡಾ. ಎಂ. ವೀರಪ್ಪ ಮೊಯಿಲಿ

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಮಾಜಿ ಮುಖ್ಯಮಂತ್ರಿ, ಸರಸ್ವತಿ ಸಮ್ಮಾನ್ ಪ್ರಶಸ್ತಿ ಪುರಸ್ಕೃತ ಸಾಹಿತಿ ಡಾ.ಎಂ. ವೀರಪ್ಪ ಮೊಯಿಲಿಯವರು ಮಾತನಾಡಿ, ಭಾರತ ದೇಶವು ಬಹುಭಾಷೆ, ಬಹುಸಂಸ್ಕೃತಿಗಳಿಂದ ಕೂಡಿದೆ. ಇಲ್ಲಿ ಒಂದು ಪ್ರಧಾನ ಸಂಸ್ಕೃತಿ, ಒಂದು ಪ್ರಧಾನ ಭಾಷೆ ಎಂಬುದಿಲ್ಲ. ಬಹುರೂಪವೇ ಭಾರತೀಯ ಸಂಸ್ಕೃತಿ. ಅದನ್ನು ಗುರುತಿಸದವರು ಏಕಸಂಸ್ಕೃತಿಯನ್ನು ಹೇರುವ ಮನಸ್ಥಿತಿಯವರು ಭಾರತೀಯರೆಂದು ಕರೆಸಿಕೊಳ್ಳುವುದಕ್ಕೆ ಅನರ್ಹರು ಎಂದರು. ಬರಗೂರು ಅವರ ವ್ಯಕ್ತಿತ್ವವು ಬಂಡಾಯಕ್ಕೆ ಸೀಮಿತವಾದುದಲ್ಲ. ಅದನ್ನು ಮೀರಿ ಬೆಳೆದವರು ಅವರು. ಬಹುಮುಖಿ ಚಿಂತನೆಯ ಬರಗೂರು ಅವರು ಬಹುತ್ವದ ರಾಷ್ಟ್ರೀಯ ವಕ್ತಾರರು ಎಂದರು.

ಕಾರ್ಯಕ್ರಮದ ಆರಂಭದಲ್ಲಿ ಬರಗೂರು ಅವರು ರಚಿಸಿದ ಕವನ ಮತ್ತು ಚಲನ ಚಿತ್ರ ಗೀತೆಗಳ ಗಾಯನ ಏರ್ಪಡಿಸಲಾಗಿತ್ತು. ಶಮಿತಾ ಮಲ್ನಾಡ್ ಮತ್ತು ತಂಡದವರು ಅವುಗಳನ್ನು ಹಾಡಿದರು. ಕೊನೆಯಲ್ಲಿ ಬಿ.ರಾಜಶೇಖರ ಮೂರ್ತಿಯವರು ವಂದಿಸಿದರು.

ಕಾರ್ಯಕ್ರಮದ ನಿರೂಪಣೆಯನ್ನು ಮಾಡಿದ ಚಲನಚಿತ್ರ ಕಲಾವಿದೆ ವತ್ಸಲಾ ಅವರು ಬರಗೂರು ಅವರಿಗೆ ಸಂಬಂಧಿಸಿದಂತೆ ನಡುವೆ ಹಲವು ಸ್ವಾರಸ್ಯಕರ ವಿಷಯಗಳನ್ನು ಪ್ರಸ್ತಾಪಿಸಿದರು. ಯಾವತ್ತೂ ಸಮಯದ ಶಿಸ್ತನ್ನು ಪಾಲಿಸುವ ಬರಗೂರು ಅವರು, ಸಿನಿಮಾ ಚಿತ್ರೀಕರಣದ ನಡುವಿನ ಊಟದ ಸಮಯದಲ್ಲಿ ಹಿರಿಯರು, ಕಿರಿಯರು, ಕಲಾವಿದರು, ಲೈಟ್ ಬಾಯ್ ಎನ್ನದೇ ಎಲ್ಲರೂ ಒಟ್ಟಿಗೆ ಸಮಾನವಾಗಿ ಕುಳಿತು ಊಟ ಮಾಡುವ ಪದ್ಧತಿಯನ್ನು ಅನುಸರಿಸುವುದನ್ನು ವತ್ಸಲಾ ನೆನೆದರು. ಚಲನಚಿತ್ರದಲ್ಲಿ ಕಲಾವಿದರಾಗಿ ಪಾಲ್ಗೊಳ್ಳುವ ಎಲ್ಲರಿಗೂ ಪೂರ್ಣ ಚಲನಚಿತ್ರದ ಕತೆ, ತಿರುಳು, ಚಿತ್ರದ ಸಂದೇಶವನ್ನು ವಿವರಿಸುವ ಬರಗೂರು ಅವರು, ಚಿತ್ರದ ಕಲಾವಿದರು ಒಂದು ತಂಡವಾಗಿ ಚಿತ್ರದ ಸಂದೇಶವನ್ನು ಅರಿತು ಅಭಿನಯಿಸಬೇಕೆಂಬುದನ್ನು ಮನವರಿಕೆ ಮಾಡಿಕೊಡುವುದನ್ನು ವಿವರಿಸಿದರು.

ಬೆಂಗಳೂರು ವಿ.ವಿ. ಅಧ್ಯಾಪಕರ ಪರಿಷತ್ತು, ರಾಜ್ಯ ಬಂಡಾಯ ಸಾಹಿತ್ಯ ಸಂಘಟನೆ, ಸೌಹಾರ್ದ ಕರ್ನಾಟಕ ಸೇರಿದಂತೆ ನಾನಾ ಅಧ್ಯಾಪಕರ ಸಂಘ, ನೌಕರರ ಸಂಘ, ದಲಿತ ಸಂಘ, ರೈತಸಂಘ, ವಿದ್ಯಾರ್ಥಿ–ಯುವಜನ–ಮಹಿಳಾ ಸಂಘಟನೆಗಳು, ಚಲನಚಿತ್ರ ನಿರ್ದೇಶಕರು, ನಿರ್ಮಾಪಕರ ಸಂಘ ಮಂತಾದ ಒಟ್ಟು 42 ಜನಪರ ಸಂಘಟನೆಗಳು ಸೇರಿ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ ಜ್ಞಾನಜ್ಯೋತಿ ಸಭಾಂಗಣದ ತುಂಬೆಲ್ಲಾ ಜನರು ಕಿಕ್ಕಿರಿದು ನೆರೆದಿದ್ದರು. ಸಭಾಂಗಣದ ಆವರಣದಲ್ಲಿ ಬರಗೂರು ಅವರ ಕುರಿತ ಪುಸ್ತಕಗಳು ಸೇರಿದಂತೆ ಪುಸ್ತಕ ಪ್ರದರ್ಶನ, ಬರಗೂರು ಅವರ ಜೀವನಕ್ಕೆ ಸಂಬಂಧಿಸಿದ ಛಾಯಾಚಿತ್ರ ಪ್ರದರ್ಶನಗಳನ್ನು ಏರ್ಪಡಿಸಲಾಗಿತ್ತು.

ಹುಡುಕಬೇಕಾಗಿ ಬಂದಿದೆ.

ಆದರೂ ಅವುಗಳ ಆಟಗಳು ನಡೆದಿಲ್ಲ. ಹಾಗಾಗಿ ಉಗ್ರ ಬಲಪಂಥಿಯ ಪಕ್ಷಗಳು ಸರಕಾರದ ಭ್ರಷ್ಟಾಚಾರ, ಚುನಾವಣಾ ಅಕ್ರಮಗಳ ಹುಸಿ ಆಪಾದನೆಯೊಂದಿಗೆ ಹಿಂಸಾಚಾರಕ್ಕೆ ಇಳಿದಿವೆ. ಜಗತ್ತಿನ ಎಲ್ಲೆಡೆ ಉಗ್ರ ಬಲಪಂಥೀಯ ಫ್ಯಾಸಿಸ್ಟ್ ಪಕ್ಷಗಳು (2020ರಲ್ಲಿ ಟ್ರಂಪ್ ಪ್ರಯತ್ನಿಸಿದಂತೆ) ಮಾಡುವಂತೆ "ಚುನಾವಣೆ ಕದಿಯುವ" ಪ್ರಯತ್ನದಲ್ಲಿ ತೊಡಗಿವೆ. ವಿದೇಶೀ (ಯುಎಸ್), ಅಂತರರಾಷ್ಟ್ರೀಯ ರಾಜಕೀಯ–ಮಿಲಿಟರಿ ಮಧ್ಯಪ್ರವೇಶಕ್ಕೆ ಕರೆ ಕೊಡುತ್ತಿವೆ. ರಾಜಕೀಯ ನೆಲೆಯಿಲ್ಲದ ಇವುಗಳಿಗೆ ಚುನಾವಣೆ ಗೆಲ್ಲುವ ಶಕ್ತಿಯಿರಲಿಲ್ಲ. ಈ ವಾಸ್ತವ ಗೊತ್ತಿರುವವರೆಗೆ "ಚುನಾವಣಾ ಅಕ್ರಮ"ಗಳ ಬಗ್ಗೆ ನಡೆದಿರುವ ಅಂತರರಾಷ್ಟ್ರೀಯ ಪ್ರಚಾರದ ಸತ್ಯಾಸತ್ಯತೆ ತಿಳಿಯುತ್ತದೆ.

ಯುರೋಪಿಗೆ ವೆನೆಜುವೇಲಾ ತೈಲ ಪೂರೈಕೆಯ ಅಗತ್ಯತೆ

ತಾನೇ ಬೆಳೆಸಿದ ಬೆಂಬಲಿಸುವ ವೆನೆಜುವೆಲಾದ ಬಲಪಂಥಿಯ ಉಗ್ರ–ಬಲಪಂಥೀಯ ಪಕ್ಷಗಳ ವೈಫಲ್ಯದಿಂದ ಹುಟ್ಟಿದ ಹತಾಶೆಯನ್ನು ನಿರ್ವಹಿಸುವುದು ಯು.ಎಸ್.ಗೆ ಕಷ್ಟವಾಗಿದೆ. ಈ ಪರಿಸ್ಥಿತಿ ಬಳಸಿ ಯುಎಸ್ "ಸರಕಾರ ಬದಲಾವಣೆ"ಗೆ ಮಿಲಟರಿ ಮಧ್ಯಪ್ರವೇಶದ ಮೂಲಕ ಪ್ರಯತ್ನಿಸಬಹುದಿತ್ತು. ವೆನೆಜುವೆಲಾದ ಆರ್ಥಿಕವನ್ನು ಹಾಳುಗೆಡವಲು ಪ್ರಯತ್ನಿಸ ಬಹುದಿತ್ತು. ಆದರೆ ತಾನೇ ಇರಾನ್ ಮತ್ತು ರಶ್ಯದ ಮೇಲೆ ಹೇರಿದ ದಿಗ್ಬಂಧನದಿಂದ ಉಂಟಾದ ಯುರೋಪಿನ ತೈಲ–ಇಂಧನದ ತೀವ್ರ ಕೊರತೆ ನೀಗಲು ಅದಕ್ಕೆ ವೆನೆಜುವೇಲಾದ ತೈಲ ಬೇಕಾಗಿದೆ. ಅದಕ್ಕೆ ಅಲ್ಲಿ ಕೈಗೊಂಬೆಯಲ್ಲದಿದ್ದರೂ ಸುಭದ್ರ ಸರಕಾರ ಬೇಕಾಗಿದೆ. ಹಿಂದೆ ಮಾಡಿದಂತೆ ಅದರ ಆರ್ಥಿಕ ಹಾಳುಗೆಡಹುವ ಆಯ್ಕೆ ಅದಕ್ಕಿಲ್ಲ. ಹಾಗಾಗಿ ಅದು "ಸರಕಾರ ಬದಲಾವಣೆ" ಗೆ ಪ್ರಯತ್ನ ಮುಂದುವರೆಸುತ್ತಲೇ, ಆಳುವ ಪಕ್ಷದ ಜತೆ ಸಹಕಾರ ನೀಡುವ, ವ್ಯವಸ್ಥೆಯೊಳಗೆ ಕೆಲಸ ಮಾಡುವ ಒಪ್ಪಂದಕ್ಕೆ ಬರುವಂತೆ ಬಲಪಂಥೀಯ ಪಕ್ಷಗಳ ಮೇಲೆ 2022ರಿಂದ ಒತ್ತಡ ಹೇರಲು ಪ್ರಯತ್ನಿಸುತ್ತಿವೆ.

ಜೂನ್ 2022ರಲ್ಲಿ ಅದು ಇಟಲಿ ಮತ್ತು ಸ್ಪೈನಿನ ಎರಡು ಕಂಪನಿಗಳಿಗೆ ಯುರೋಪಿಗೆ ತೈಲ ಸಾಗಾಣಿಕೆಗೆ ನೀಡುವ ಮಟ್ಟಿಗೆ ದಿಗ್ಬಂಧನ ಸಡಿಲಿಸಿತು. ಈ ಅಬಾಧಿತ ತೈಲ ಪೂರೈಕೆ, ಬೊಲಿವಾರಿಯನ್ ಸರಕಾರವನ್ನು ದುರ್ಬಲಗೊಳಿಸುವುದು, ಉಗ್ರ–ಬಲಪಂಥೀಯ ಪಕ್ಷಗಳನ್ನು ಬಲ ಪಡಿಸುವುದು– ಈ ಪರಸ್ಪರ ವಿರೋಧಾತ್ಮಕ ಕಾರ್ಯಗಳ ನಡುವೆ ಸಮತೋಲನೆಗೆ ಹೆಣಗುತ್ತಿದೆ. ಈ ಹೆಣಗಾಟದ ಫಲವಾಗಿ ಅಕ್ಟೋಬರ್ 2023ರಲ್ಲಿ "ಕ್ರಮಬದ್ಧ ಚುನಾವಣೆ"ಯ ಆಧಾರದ ಮೇಲೆ ಚುನಾವಣೆಯ ನಂತರ ಹಂತ ಹಂತವಾಗಿ ಆರ್ಥಿಕ ದಿಗ್ಬಂಧನ ತೆಗೆಯುವ ಬಾರ್ಬಡೋಸ್ ಒಪ್ಪಂದವಾಯಿತು. ಮದುರೊ ಗೆದ್ದರೆ ಅದನ್ನು ಒಪ್ಪಿಕೊಳ್ಳುವುದನ್ನು ಈ ಒಪ್ಪಂದ ಒಳಗೊಂಡಿತ್ತು. ಆದರೆ ಉಗ್ರ–ಬಲಪಂಥೀಯ ಕೂಟ ಇದಕ್ಕೆ ಒಪ್ಪದೆ ಹಿಂಸಾಚಾರಕ್ಕೆ ಇಳಿದಿವೆ. ಮದುರೊ ವಿಪಕ್ಷಗಳನ್ನು ಮತ್ತು ಯು.ಎಸ್. ಸರಕಾರ ಒಲಿಸಲು ಸುಪ್ರೀಂ ಕೋರ್ಟಿನಿಂದ ಚುನಾವಣಾ ಮತ ಎಣಿಕೆಯ ಅಡಿಟ್ ಮಾಡಿಸುವ ಸಲಹೆ ಮಾಡಿದ್ದಾರೆ.

ಯು.ಎಸ್. ತನ್ನ ಹಿತಾಸಕ್ತಿಗಳನ್ನು ಬಿಟ್ಟು ಎಷ್ಟರ ಮಟ್ಟಿಗೆ ಈ ಪಕ್ಷಗಳನ್ನು ಬೆಂಬಲಿಸುವುದು ಎಂಬುದರ ಮೇಲೆ ಮುಂದಿನ ಬೆಳವಣಿಗೆಗಳು ಅವಲಂಬಿಸಿವೆ. ಮಿಲಿಟರಿ ಮತ್ತು ಜನತೆ ಎರಡರಲ್ಲೂ ವ್ಯಾಪಕ ನೆಲೆಯಿರುವ ಮದುರೊ ಅವರ ಸೋಶಲಿಸ್ಟ್ ಸರಕಾರವನ್ನು ಉರುಳಿಸುವುದು, ಇನ್ನೊಂದು ಸುಭದ್ರ ಸರಕಾರವನ್ನು ನಡೆಸುವುದು ಸುಲಭ ಸಾಧ್ಯವಲ್ಲ.

NEW No. MAG(3)/NPP/205/2021-2022
JANASHAKTHI KANNADA VARA PATRIKE August 5-11, 2024 Price: Rs. 10/- Date of Publication: 2 August 2024 RNI No. KARKAN /2006/17926 Posted on 05-08-2024
Posted at BG PSO, BG - 560026 **Posted at Periodical Rate -** Rs. 2

‘ಬೆವರು ನನ್ನ ದೇವರು’ ಎಂದು ಶ್ರಮದ ಮಹತ್ವವನ್ನು ಸಾರಿದ

ಪ್ರೊ. ಬರಗೂರು ಅವರಿಗೆ ಸಾಂಸ್ಕೃತಿಕ ಸ್ನೇಹಗೌರವ–ಬರಗೂರು ಅವರ ಕುರಿತ ಪುಸ್ತಕಗಳ ಜನಾರ್ಪಣೆ

ವರದಿ: **ಆರ್.ರಾಮಕೃಷ್ಣ**

ಬೆವರೆಲ್ಲಾ ನದಿಗಳಾಗಿ ಮೂರು ದಿಕ್ಕು ಕಡಲು...
ನನ್ನ ಈ ನಾಡಿನಲ್ಲಿ ಭವ್ಯನಾಮ ಬೀಡಿನಲ್ಲಿ
ಬೇಗೆಯೇ ಬೆಟ್ಟವಾಗಿ ಉತ್ತರಕ್ಕೆ ಕಾವಲು.
ಬೆವರೆಲ್ಲಾ ನದಿಗಳಾಗಿ ಮೂರು ದಿಕ್ಕು ಕಡಲು.


ಭಾರತದ ಭೌಗೋಳಿಕ ಸ್ವರೂಪದ ಚಿತ್ರಣವನ್ನು ಭಾರತದ ಶ್ರಮಜೀವಿ ಜನರ ಬದುಕಿನ ಪರಿಸ್ಥಿತಿಯನ್ನು ಮೂರೇ ಮೂರು ಸಾಲುಗಳಲ್ಲಿ ಸಮಗ್ರವಾಗಿ ನಿರೂಪಿಸುವ ಈ ಒಂದು ಮಹತ್ವದ ಕಾವ್ಯ ರೂಪಕವನ್ನು ಕಟ್ಟಿಕೊಟ್ಟವರು ಖ್ಯಾತ ಬಂಡಾಯ ಸಾಹಿತಿ ಬರಗೂರು ರಾಮಚಂದ್ರಪ್ಪನವರು. ಈ ತಿಳುವಳಿಕೆ ಅವರ ವೈಚಾರಿಕ ಚಿಂತನೆ, ಸೃಜನಶೀಲ ಸಾಹಿತ್ಯ, ಚಲನಚಿತ್ರಗಳ ತಿರುಳಿನ ಮುಖ್ಯ ನೆಲೆಗಟ್ಟು ಎನ್ನಬಹುದು. ‘ಬೆವರು ನನ್ನ ದೇವರು’ ಎಂದು ಶ್ರಮದ ಮಹತ್ವವನ್ನು ಸಾರಿದ ಬರಗೂರು ರಾಮಚಂದ್ರಪ್ಪನವರಿಗೆ 75 ವರ್ಷಗಳು ದಾಟಿವೆ.

ನಮ್ಮ ನಾಡಿನ ಖ್ಯಾತ ಜನಪರ ಚಿಂತಕರು, ಸಾಹಿತಿಗಳು, ಚಲನಚಿತ್ರ ನಿರ್ದೇಶಕರು ಆದ ನಾಡೋಜ ಪ್ರೊ.ಬರಗೂರು ರಾಮಚಂದ್ರಪ್ಪ ಅವರಿಗೆ 75 ವರ್ಷಗಳು ತುಂಬಿರುವುದರ ಹಿನ್ನೆಲೆಯಲ್ಲಿ ‘ನಾಡೋಜ ಪ್ರೊ.ಬರಗೂರು ಸ್ನೇಹಬಳಗ–ಕರ್ನಾಟಕ’ವು ‘ಸಾಂಸ್ಕೃತಿಕ ಸ್ನೇಹ ಗೌರವ’ ಹಾಗೂ ಬರಗೂರು ಅವರ ಕುರಿತ ‘ಪುಸ್ತಕಗಳ ಜನಾರ್ಪಣೆ’ಯನ್ನು ಹಮ್ಮಿಕೊಂಡಿತ್ತು. ಜುಲೈ 28, 2024 ರಂದು ಬೆಂಗಳೂರಿನ ಜ್ಞಾನಜ್ಯೋತಿ ಸಭಾಂಗಣದಲ್ಲಿ ಈ ಸಮಾರಂಭ ನಡೆಯಿತು. ಇಂತಹ ಹಿರಿಯ ಸಾಧಕರ ಕೊಡುಗೆಯನ್ನು ಸಮಗ್ರವಾಗಿ ಗುರುತಿಸಿ, ಯುವಪೀಳಿಗೆಯ ಮುಂದೆ ಒಂದು ಆದರ್ಶವನ್ನು, ಒಂದು ಮಾದರಿಯನ್ನು ಮುಂದಿಡುವ ಸಂದರ್ಭವಾಯಿತು ಈ ಸಮಾರಂಭ.



ಸಾಂಸ್ಕೃತಿಕ ಸ್ನೇಹ ಗೌರವ ಕಾರ್ಯಕ್ರಮದ ಆರಂಭದಲ್ಲಿ ಸಾಹಿತಿಗಳೂ, ಬೆಂಗಳೂರು ವಿಶ್ವವಿದ್ಯಾಲಯದ ನಿವೃತ್ತ ಪ್ರಾಧ್ಯಾಪಕರೂ ಆದ ಡಾ.ರಾಜಪ್ಪ ದಳವಾಯಿಯವರು ಸ್ವಾಗತಿಸಿ ಪ್ರಾಸ್ತಾವನೆಯ ಮಾತುಗಳನ್ನಾಡಿದರು. ತುಮಕೂರು ಜಿಲ್ಲೆಯ ಶಿರಾ ತಾಲ್ಲೂಕಿನ ಬರಗೂರು ಎಂಬ ಸಾಮಾನ್ಯ ಹಳ್ಳಿಯಲ್ಲಿ, ನಂತರ ತುಮಕೂರಿನಲ್ಲಿ ವಿದ್ಯಾಭ್ಯಾಸವನ್ನು ಮಾಡಿದ ಬರಗೂರು ಅವರು ಸಾಮಾನ್ಯ ನೆಲೆಯಿಂದ ಅಸಮಾನ್ಯ ನೆಲೆಗೆ ತಮ್ಮನ್ನು ತಾವೇ ರೂಪಿಸಿಕೊಂಡವರು, ಅವರು ಕನ್ನಡ ಸಾಹಿತ್ಯದಲ್ಲಿ ಒಂದು ವಿಶಿಷ್ಟ ಧ್ವನಿ ಎಂದರು.

ಸಾಹಿತಿಗಳಿಗೆ ಸಾಮಾಜಿಕ, ಸಾಂಸ್ಕೃತಿಕ ಜವಾಬ್ದಾರಿ ಇದೆ ಎಂಬ ನೆಲೆಯಲ್ಲಿ ನವ್ಯ ಸಾಹಿತ್ಯಕ್ಕೆ ಪರ್ಯಾಯವಾಗಿ ಬರಗೂರು ಅವರು ಬಂಡಾಯ ಸಾಹಿತ್ಯವನ್ನು ರೂಪಿಸಿದರು. 1979 ರಲ್ಲಿ ‘ಬಂಡಾಯ ಸಾಹಿತ್ಯ ಸಂಘಟನೆ’ಯನ್ನು ಸ್ಥಾಪಿಸುವಲ್ಲಿ ಪ್ರಮುಖ ಪಾತ್ರವನ್ನು ವಹಿಸಿದರು. ಕವಿ, ಕತೆಗಾರ, ಕಾದಂಬರಿಕಾರ, ನಾಟಕಕಾರರಾಗಿ, ಚಿತ್ರ ನಿರ್ದೇಶಕರಾಗಿ ಅಮೂಲ್ಯ ಕೊಡುಗೆ ನೀಡಿದರು. ಬರಗೂರು ಅವರು ನಿರ್ದೇಶಿಸಿದ 23 ಚಲನಚಿತ್ರಗಳಲ್ಲಿ ಎಲ್ಲವೂ ಚಿಂತನ ಪ್ರಧಾನ ಚಿತ್ರಗಳಾಗಿದ್ದು, ಎಲ್ಲವೂ ರಾಷ್ಟ್ರೀಯ, ಅಂತರ ರಾಷ್ಟ್ರೀಯ ಮನ್ನಣೆ ಗಳಿಸಿವೆ, ಪ್ರಶಸ್ತಿ ಗಳಿಸಿವೆ ಎಂದು ಹೇಳಿದರು.



ಕರ್ನಾಟಕ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾಗಿ ಬರಗೂರು ಅವರು ಸುಮಾರು 350 ಪುಸ್ತಕಗಳ ಪ್ರಕಟಣೆಗೆ ಕಾರಣರಾದರು. ಬುಡಕಟ್ಟು, ಅಲೆಮಾರಿ ಮುಂತಾದ ಅವಗಣನೆಗೆ ಗುರಿಯಾದ ಉಪಸಂಸ್ಕೃತಿಗಳ ಕುರಿತ ಅತ್ಯಂತ ಮಹತ್ವದ ಅಧ್ಯಯನ ಇದು. ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾಗಿ ಅತ್ಯುತ್ತಮವಾಗಿ ಕೆಲಸ ಮಾಡಿದ ಬರಗೂರು ಅವರು, ಕನ್ನಡ ತಾಯಿನುಡಿಯಾದ ವಿದ್ಯಾರ್ಥಿಗಳಿಗೆ ಬದುಕು ಕಟ್ಟಿಕೊಳ್ಳಲು ಶೇ. 5ರಷ್ಟು ಮೀಸಲಾತಿ ಕಲ್ಪಿಸಲು ಕಾರಣರಾದರು. ಇದರಿಂದಾಗಿ ಕನ್ನಡ ತಾಯಿನುಡಿಯಾಗಿರುವ ಸಾಕಷ್ಟು ಜನರು ವೈದ್ಯಕೀಯ, ತಾಂತ್ರಿಕ ಮುಂತಾದ ಉನ್ನತ ಶಿಕ್ಷಣವನ್ನು ಪಡೆದು ಬದುಕು ರೂಪಿಸಿಕೊಳ್ಳಲು ಕಾರಣರಾದರು ಎಂದರು.

ಬರಗೂರು ಅವರು ತಮ್ಮ ಕೃತಿ ಸುಂಟರಗಾಳಿ ಕಥಾಸಂಕಲನಕ್ಕೆ ರಾಜ್ಯ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ ಪಡೆದವರು. ಇಂತಹ ಎಷ್ಟೋ ಪ್ರಶಸ್ತಿ ಪುರಸ್ಕಾರಗಳು ಅವರನ್ನು ಅರಸಿ ಬಂದಿವೆ. 2016 ರಲ್ಲಿ ರಾಯಚೂರಿನಲ್ಲಿ ನಡೆದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆಯನ್ನು ಬರಗೂರು ಅವರು ವಹಿಸಿದ್ದರು. ಪ್ರಸ್ತುತ ಬರಗೂರು ಅವರನ್ನು ಅಭಿನಂದಿಸಿ ದೇಶ ವಿದೇಶಗಳಿಂದ ಶುಭಾಶಯ ಹಾಗೂ ಅಭಿನಂದನೆಯ ಸಂದೇಶಗಳು ಬಂದಿದ್ದವು. ಕಾರ್ಯಕ್ರಮದಲ್ಲಿ ನೇರವಾಗಿ ಪಾಲ್ಗೊಳ್ಳಲು ಸಾಧ್ಯವಾಗದ ರಾಜ್ಯದ ಮುಖ್ಯಮಂತ್ರಿ ಸಿದ್ದರಾಮಯ್ಯನವರು ತಮ್ಮ ಲಿಖಿತ ಸಂದೇಶವನ್ನು ಕಳಿಸಿದ್ದರು. ಡಾ. ರಮೇಶ್ ಅವರು ಸಂದೇಶವನ್ನು ಓದಿದರು.

ಬರಗೂರು ಮಹಾ ಸಜ್ಜನ
– ಡಾ. ಚಂದ್ರಶೇಖರ ಕಂಬಾರ

ಜ್ಞಾನಪೀಠ ಪುರಸ್ಕೃತ ಹಿರಿಯ ಸಾಹಿತಿ, ಜಾನಪದ ತಜ್ಞ ಡಾ. ಚಂದ್ರಶೇಖರ ಕಂಬಾರ ಅವರು ಜನಪ್ರಕಾಶನವು ಪ್ರಕಟಿಸಿರುವ ಡಾ. ಯಲ್ಲಪ್ಪ ಹಿಮ್ಮಡಿಯವರು ಬರೆದ ‘ಬರಗೂರ್ ಬುಕ್’, ಡಾ. ರಾಜು ಗುಂಡಾಪುರ ಮತ್ತು ಬಿ. ರಾಜಶೇಖರ ಮೂರ್ತಿಯವರು ಜಂಟಿಯಾಗಿ ಸಂಪಾದಿಸಿರುವ ‘ನಮ್ಮ ಬರಗೂರ್ ಮೇಷ್ಟ್ರು’ ಕೃತಿಗಳನ್ನು ಜನಾರ್ಪಣೆ ಮಾಡಿ ಮಾತನಾಡಿದರು.

ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಬರಗೂರು ಅವರು ಮತ್ತು ತಾವು ಒಟ್ಟಿಗೆ ಕೆಲಸ ಮಾಡಿದ ದಿನಗಳನ್ನು ನೆನಪಿಸಿಕೊಂಡ ಕಂಬಾರ ಅವರು ಅದೊಂದು ಆತ್ಮೀಯ ಅನುಭವ ಎಂದರು. ನನ್ನ ಸ್ನೇಹಿತ ಬರಗೂರು ಅವರು ಮಹಾಸಜ್ಜನ, ಬೇರೆಯವರ ಅಭಿಪ್ರಾಯವನ್ನು ಗೌರವಿಸುವ ಹೃತ್ಪೂರ್ವಕ ಮನುಷ್ಯ ಎಂದ ಕಂಬಾರ ಅವರು ಹಂಪಿಯಲ್ಲಿ ಕನ್ನಡ ವಿಶ್ವವಿದ್ಯಾಲಯ ಸ್ಥಾಪಿಸುವಾಗ ತಮಗೆ ಉತ್ತಮ ಸಲಹೆ, ಸೂಚನೆಗಳನ್ನು ನೀಡಿ, ಅಪಾರ ನೆರವನ್ನು ನೀಡಿದರು ಎಂದು ನೆನಪಿಸಿಕೊಂಡರು.

ಸಮಾಜವಾದ ಬರಿ ಆದರ್ಶದ ಕನಸಲ್ಲ,
ಜಾರಿಗೊಳಿಸಬಹುದಾದ ವಿಚಾರ – ಶೈಲಜಾ ಟೀಚರ್

ಕೇರಳದ ಮಾಜಿ ಸಚಿವೆ ಶೈಲಜಾ ಟೀಚರ್ ಅವರು ಮಾತನಾಡಿ, 12ನೇ ಶತಮಾನದಲ್ಲಿ ಬಸವಣ್ಣ, 20ನೇ ಶತಮಾನದಲ್ಲಿ ಕುವೆಂಪು ಅವರಂತಹ ಶ್ರೇಷ್ಠ ಸಮಾಜ ಸುಧಾರಕರು ಸಾಮಾಜಿಕ ಸುಧಾರಣೆಗಾಗಿ ಶ್ರಮಿಸಿದರು. ಪ್ರಸ್ತುತ ಡಾ. ಬಿ.ಆರ್. ಅಂಬೇಡ್ಕರ್ ಅವರು ರೂಪಿಸಿಕೊಟ್ಟ ಭಾರತದ ಸಂವಿಧಾನದ ಪ್ರಜಾಸತ್ತಾತ್ಮಕ, ಮತನಿರಪೇಕ್ಷ, ಸಾರ್ವಭೌಮ, ಸಮಾಜವಾದಿ ತತ್ವಗಳಿಗೆ ಸಂಚಕಾರ ಬಂದಿದೆ. ಸಮಾಜವಾದ ಎಂಬುದು ಬರಿ ಆದರ್ಶದ ಕನಸಲ್ಲ, ಅದು ಜಾರಿಗೊಳಿಸಲು ಸಾಧ್ಯವಾಗುವ ವಿಚಾರ. ಎಲ್ಲರಿಗೂ ಸಮಾನ ಅವಕಾಶ ಸೃಷ್ಟಿಸಿಕೊಡುವುದೇ ಸಮಾಜವಾದ. ಎಲ್ಲರಿಗೂ ಕೆಲಸ ಮಾಡುವ ಮತ್ತು ಅದಕ್ಕೆ ನ್ಯಾಯಬದ್ಧ ಪ್ರತಿಫಲ ಪಡೆಯುವ ಹಕ್ಕಿದೆ. ಅದೇ ಸಮಾಜವಾದದ ತಿರುಳು. ದುಡಿಮೆಯಿಂದ ಮಾತ್ರ ಇತಿಹಾಸ ಸೃಷ್ಟಿ ಸಾಧ್ಯ. ಬಸವಣ್ಣನವರು ‘ಕಾಯಕವೇ ಕೈಲಾಸ’ ಎಂದರು. ಬರಗೂರು ಅವರು ‘ಬೆವರು ನನ್ನ ದೇವರು’ ಎನ್ನುತ್ತಾರೆ. ಬರಗೂರು ಅವರು ತಮ್ಮ ಕತೆ, ಕಾದಂಬರಿ, ಕವನ, ಸಿನಿಮಾಗಳ ಮೂಲಕ ಇದನ್ನೇ ಪ್ರತಿಪಾದಿಸಿದ್ದಾರೆ,

“ಎಲ್ಲಿ ಮನವು ಅಳುಕಿಲ್ಲದೇ, ಸ್ವಾಭಿಮಾನದಿ ತಲೆಎತ್ತಿ ನಿಲ್ಲುವುದೋ ಅಂತಹ ಸ್ವಾತಂತ್ರ್ಯದ ಸಗ್ಗಕ್ಕೆ ನಮ್ಮ ನಾಡು ನಡೆಯಲಿ, ಮನ್ನಡೆಯಲಿ” ಎಂದು ರವೀಂದ್ರನಾಥ ಟ್ಯಾಗೋರ್ ಅವರು ಹೇಳಿದರು. ಅಂತಹ ಸಮಾಜದ ಸೃಷ್ಟಿಗಾಗಿ, ಭಾರತದ ಸಂವಿಧಾನದ ರಕ್ಷಣೆಗಾಗಿ ನಾವು ಶ್ರಮಿಸೋಣ ಎಂದರು.

ಶರಣ ಸಾಹಿತ್ಯದ ಆಧುನಿಕ ರೂಪವೇ
ಬಂಡಾಯ ಸಾಹಿತ್ಯ ಚಳುವಳಿ – ಲಿಂಬಾಳೆ

ಹಿರಿಯ ಮರಾಠಿ ಸಾಹಿತಿ, ಸರಸ್ವತಿ ಸಮ್ಮಾನ್ ಪುರಸ್ಕೃತ ಬರಹಗಾರ ಡಾ. ಶರಣ ಕುಮಾರ ಲಿಂಬಾಳೆಯವರು ಮಾತನಾಡಿ, ಬರಗೂರು ಅವರು ಬರಿಯ ಸಾಹಿತಿಗಳಲ್ಲ ಅವರು ಜನಚಳುವಳಿಗಳ ಕ್ರಿಯಾಶೀಲ ಕಾರ್ಯಕರ್ತ ಕೂಡ ಎಂದರು. ಶರಣ ಸಾಹಿತ್ಯದ ಆಧುನಿಕ ರೂಪವೇ ಬಂಡಾಯ ಸಾಹಿತ್ಯ ಚಳುವಳಿ ಎಂದ ಲಿಂಬಾಳೆಯವರು, ಬಂಡಾಯ ಎಂದರೆ ಸಮಾನತೆಗಾಗಿ ಹೋರಾಟ, ಬಂಡಾಯ ಸಾಹಿತ್ಯವು ಹೊಸ ತಲೆಮಾರನ್ನು ಪ್ರಭಾವಿಸಿ ಮಹಾ ಮಾನವತಾವಾದಿಗಳನ್ನಾಗಿಸಿದೆ. ಇಂದು ದಲಿತ ಮತ್ತು ಬಂಡಾಯ ಸಾಹಿತ್ಯ ಜೊತೆಜೊತೆಯಾಗಿಯೇ ಸಾಗುತ್ತಿದ್ದು ಪ್ರಗತಿಶೀಲ ಸಾಹಿತ್ಯದ ಭಾಗವಾಗಿವೆ ಎಂದರು.

ಅಧಿಕಾರಕ್ಕಾಗಿ ಆಸೆಪಡಲಿಲ್ಲ–ಪುಟ್ಟಣ್ಣ

ಬರಗೂರು ಅವರು ಬಯಸಿದ್ದರೆ ವಿಶ್ವವಿದ್ಯಾಲಯದ ಕುಲಪತಿ, ಎಂ.ಎಲ್.ಸಿ. ಹೀಗೆ ಬೇರೆ ಬೇರೆ ಸ್ಥಾನಮಾನಗಳನ್ನು ಗಳಿಸಬಹುದಿತ್ತು. ಆದರೆ ಅವುಗಳಿಗಾಗಿ ಅವರು ಆಸೆ ಪಡಲಿಲ್ಲ ಎಂದ ಶಿಕ್ಷಕರ ಕ್ಷೇತ್ರದ ರಾಜ್ಯ ವಿಧಾನ ಪರಿಷತ್ ಸದಸ್ಯ ಪುಟ್ಟಣ್ಣ ಅವರು, ಬರಗೂರು ಅವರು ಒಳ್ಳೆಯದು ಏನು ಹೇಳಿದರೂ ಒಪ್ಪುತ್ತಾರೆ, ಬಡವರಿಗೆ ಕಷ್ಟದಲ್ಲಿರುವವರಿಗೆ ಅವರ ಸದಾ ನೆರವಾಗುತ್ತಾರೆ ಎಂದರು.

‘ಕೆಂಪು ಸರಕಾರಿ ಬಸ್ ಗೆಲ್ಲಲೆಂದು ಬಯಸುತ್ತಿದ್ದೆ’
–ಪ್ರೊ. ಬರಗೂರು ರಾಮಚಂದ್ರಪ್ಪ

ಬಾಲ್ಯದಲ್ಲಿ ತಮ್ಮ ಊರಿನಲ್ಲಿ ಕೆಂಪು ಸರಕಾರಿ ಬಸ್ ಹಾಗೂ ಖಾಸಗಿ ಬಸ್‌ಗಳ ನಡುವೆ ಪೈಪೋಟಿ ನಡೆಯುತ್ತಿದ್ದುದನ್ನು ಹಾಗೂ ತಾವು ಸದಾ ಸರಕಾರದ ಕೆಂಪು ಬಸ್ ಗೆಲ್ಲಲಿ ಎಂದು ಬಯಸುತ್ತಿದ್ದುದನ್ನು ನೆನಪಿಸಿಕೊಂಡ ಬರಗೂರು ರಾಮಚಂದ್ರಪ್ಪ ಅವರು ಈಗಲೂ ತಾವು ಖಾಸಗೀಕರಣದ ವಿರುದ್ಧ, ‘ಸರಕಾರಿ ವ್ಯವಸ್ಥೆ’ ಮತ್ತು ‘ಕೆಂಪು’ ಬಣ್ಣದ ಪರ ಎಂದು ಸಾಂಕೇತಿಕವಾಗಿ ತಮ್ಮ ಜೀವನ ಸಿದ್ಧಾಂತ ಮತ್ತು ಧೋರಣೆಯ ಕುರಿತು ಹೇಳಿದರು. ವಿಜ್ಞಾನ ಓದುವವರು ಜಾಣರು, ವಾಣಿಜ್ಯ ಓದುವವರು ಬುದ್ಧಿವಂತರು, ಸಮಾಜ ವಿಜ್ಞಾನ ಓದುವವರು ದಡ್ಡರು, ಅದರಲ್ಲೂ ಐಚ್ಛಿಕ ಕನ್ನಡ ಆಯ್ಕೆ ಮಾಡಿಕೊಂಡವರು ಶತದಡ್ಡರು ಎನ್ನುವ ಕಾಲದಲ್ಲಿ ತಾವು ಐಚ್ಛಿಕ ಕನ್ನಡವನ್ನು ಆಯ್ಕೆ ಮಾಡಿಕೊಂಡಿದ್ದರೂ ವಿಜ್ಞಾನದಲ್ಲಿ ತಮಗೆ ಶೇ. 86 ಮಾರ್ಕ್ಸ್ ಬಂದಿವೆ ಎಂದು ಮಾರ್ಕ್ಸ್‌ಕಾರ್ಡ್ ತೋರಿಸಿಕೊಂಡು ಓಡಾಡುತ್ತಾ ಮಾರ್ಕ್ಸ್‌ವಾದಿಯಾದೆ ಎಂದು ಬರಗೂರು ಹಾಸ್ಯ ಚಟಾಕಿ ಹಾರಿಸಿದರು.

ಸಿದ್ಧಾಂತಗಳಿಗೆ ಬದ್ಧರಾದವರ ಸಾಹಿತ್ಯದಲ್ಲಿ ಪುಟ 15 ಕ್ಕೆ

JANASHAKTHI KANNADA VARA PATRIKE: Printed, Published by **U. BASAVARAJA**, No. 37/a, 8th Cross, EMS Bhavan, Mahalakshmi Layout, Bangalore 560086, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027 Editor : **NITYANANDASWAMI**

ಸಂಪಾದಕೀಯ

ಈ ವಾರ

ಎಸ್.ವೈ.ಗುರುಶಾಂತ್

ಗುರುಶಾಂತ ಎಸ್.ವೈ.

ವಸಂತರಾಜ್ ಎನ್.ಕೆ.

ಸಿ.ಸಿದ್ದಯ್ಯ

ಆರ್. ರಾಮಕೃಷ್ಣ

ಭಾಗ
1

❍⬉⬈⬊⮉

ಪುಟ 4 ಕ್ಕೆ

⬈ ⬊
❍⇦⇨⭘❖❏■⮈●⭘

ಪುಟ 15 ಕ್ಕೆ